Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–10 | ಮಾರ್ಚ್ 3–9, 2025 | ಪುಟ 16 | ರೂ.10/–
Volume-19 | Issue-10 | March 3-9, 2025 | Pages:16 | Price: 10/-



ಕರ್ನಾಟಕ ಶ್ರಮಜೀವಿಗಳ ಅಹೋರಾತ್ರಿ ಹೋರಾಟ

ಯು.ಎಸ್. ಏಡ್ ನಿಧಿ ಹೆಸರಿನಲ್ಲಿ ಮುಸುಕಿನ ಸಮರ

ಸಾವರ್ಕರ್ ಬಲೂನಿಗೆ ಶೌರಿ ಚುಚ್ಚಿದ ಸೂಜಿಗಳು



ಅಲೆಮಾರಿ ಯುವತಿಯರ ಹತ್ಯೆ



ಕ್ಷೇತ್ರಗಳ ಪುನರ್ವಿಂಗಡನೆಯಲ್ಲಿ ದಕ್ಷಿಣ ಭಾರತ ಕ್ಷೇತ್ರಗಳ ಕಡಿತ: ಒಕ್ಕೂಟ ವ್ಯವಸ್ಥೆಯ ಮೇಲಿನ ಧಾಳಿ

ಸಿಪಿಐ(ಎಂ) ಪಕ್ಷ ಬಿಡುಗಡೆ ಮಾಡಿದ 23ನೇ ಮಹಾದಿವೇಶನದ ಕರಡು ರಾಜಕೀಯ ನಿರ್ಣಯದಲ್ಲಿ ಬಳಸಲಾದ 'ನವ ಫ್ಯಾಶಿಸ್ಟ್ ಸ್ವರೂಪದ, ನಿಯೋ ಫ್ಯಾಶಿಸ್ಟಿಕ್ ಎಂಬ ಪರಿಕಲ್ಪನೆಯನ್ನು ವಿವರಿಸುವ ಟಿಪ್ಪಣಿಯೊಂದನ್ನು ನೀಡಿತು. ಅದರ ಸುತ್ತ ಮಾಧ್ಯಮ, ಸಾಮಾಜಿಕ ಜಾಲ ತಾಣ ಇತ್ಯಾದಿಗಳಲ್ಲಿ ಚರ್ಚೆಗಳನ್ನು ಹುಟ್ಟು ಹಾಕಲಾಯಿತು. ನಡೆಯಲೇಬೇಕಾದ ಇಂತಹ ಮಹತ್ವದ ಸೈದ್ಧಾಂತಿಕ ಚರ್ಚೆ, ವಿಶ್ಲೇಷಣೆ ತೆರೆದು ಕೊಳ್ಳುವುದನ್ನು 'ಕೂದಲು ಸೀಳುವ ಕೆಲಸ' ಎಂದು ಹೀಗೆಳೆದು ಅಪಪ್ರಚಾರದ ದಾಳಿ ನಡೆಸಲಾಯಿತು. ಹಾಗಾದರೆ ಈ ಚರ್ಚೆಯ ಮಹತ್ವ ಏನು? ಎಂಬ ವಿವರಣೆ ಇಲ್ಲಿ ನಡೆಸಿದ್ದಾರೆ ಜಿ.ಎನ್.ನಾಗರಾಜ.

ಫ್ಯಾಶಿಸಂ ಮತ್ತು ನಿಯೋ ಫ್ಯಾಶಿಸ್ಟ್ ಹಾಗೆಂದರೇನು?

ಜಿ.ಎನ್. ನಾಗರಾಜ್

ಮೋದಿ ಸರ್ಕಾರ ಫ್ಯಾಸಿಸ್ಟ್ ಆಗಿಬಿಟ್ಟಿದೆಯೇ, ಇನ್ನೂ ಆಗಿಲ್ಲವೇ, ನವ ಫ್ಯಾಸಿಸಂ ಎಂದೇನೋ ಹೇಳುತ್ತಾರಲ್ಲಾ ಹಾಗೆಂದರೇನು? ಎಂದೆಲ್ಲ ಚರ್ಚೆಗಳು ಪತ್ರಿಕೆಗಳಲ್ಲಿ, ಟಿವಿ ಮಾಧ್ಯಮಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಎದ್ದಿವೆ. ಅದರ ಜೊತೆಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಬಗ್ಗೆ ಟೀಕೆ ಮಾತ್ರವಲ್ಲ, ಅಪಪ್ರಚಾರದ ದಾಳಿಯೂ ಆರಂಭವಾಗಿದೆ. ಈ ಎಲ್ಲ ಚರ್ಚೆಯ ಮೂಲ ಸಿಪಿಐ(ಎಂ) ದೇಶಾದ್ಯಂತ ಚರ್ಚೆಗೆ ಮತ್ತು ದೇಶದ ಯಾವ ಪ್ರಜೆಯಾದರೂ ಅದರಲ್ಲಿನ ಅಂಶಗಳ ಬಗ್ಗೆ ತಿದ್ದುಪಡಿ ಕಳಿಸಬಹುದು, ಅಭಿಪ್ರಾಯ, ಸಲಹೆ ನೀಡಬಹುದು ಎಂದು ತನ್ನ ರಾಜಕೀಯ ನಿರ್ಣಯದ ಕರಡನ್ನು ಬಿಡುಗಡೆ ಮಾಡಿತು. ಈ ನಿರ್ಣಯದಲ್ಲಿ ಉಪಯೋಗಿಸಿದ ನವ–ಫ್ಯಾಸಿಸ್ಟ್ ಸ್ವರೂಪದ, ನಿಯೋ–ಫ್ಯಾಸಿಸ್ಟಿಕ್ ಎಂಬ ಪರಿಕಲ್ಪನೆಯನ್ನು ವಿವರಿಸುವ ಒಂದು ಟಿಪ್ಪಣಿಯನ್ನು ನೀಡಿತು. ಈ ಟಿಪ್ಪಣಿಯೇ ಚರ್ಚೆಯ ಮೂಲ.

ಕರಡು ರಾಜಕೀಯ ನಿರ್ಣಯದಲ್ಲಿ "ಪ್ರತಿಗಾಮಿ ಹಿಂದುತ್ವ ಕಾರ್ಯಸೂಚಿಯನ್ನು ಹೇರುವ ಒತ್ತಡ ಮತ್ತು ವಿರೋಧ ಮತ್ತು ಪ್ರಜಾಪ್ರಭುತ್ವವನ್ನು ನಿಗ್ರಹಿಸಲು ಸರ್ವಾಧಿಕಾರಿ ಚಾಲನೆಯ ನವ–ಫ್ಯಾಸಿಸ್ಟ್ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಿದೆ" ಎಂದು ಹೇಳಲಾಗಿದೆ. ರಾಜಕೀಯ ನಿರ್ಣಯದ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ನಾವು 'ನವ–ಫ್ಯಾಸಿಸ್ಟ್' ಎಂಬ ಪದವನ್ನು ಬಳಕೆ ಮಾಡಿರುವುದು ಇದೇ ಮೊದಲು ಎಂದೂ ಸಿಪಿಐ(ಎಂ) ಹೇಳಿದೆ.

ಕೇರಳದಲ್ಲಿ ಆರಂಭವಾದ ಅಪಪ್ರಚಾರ

ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಆಡಳಿತದಲ್ಲಿ ಎರಡನೆ ಬಾರಿಗೂ ಗೆದ್ದುಬಿಟ್ಟದ್ದು ಅಲ್ಲಿಯ ಕಾಂಗ್ರೆಸ್ ಮತ್ತದರ ನೇತೃತ್ವದ ರಂಗದ ಮುಸ್ಲಿಂ ಲೀಗ್ ಮೊದಲಾದ ಪಕ್ಷಗಳಿಗೆ, ಬಿಜೆಪಿ, ಆರೆಸ್ಸೆಸ್ ಕೂಟಕ್ಕೆ ಬಿಸಿ ತುಪ್ಪವಾಗಿದೆ. ಸಿಪಿಐ(ಎಂ) ಮೇಲೆ ಮುಗಿಬೀಳಲು ಯಾವಾಗಲೂ ಕಾದು ಕುಳಿತಿರುವ ಈ ಪಕ್ಷಗಳ ಮುಖವಾಣಿಯಾಗಿರುವ, ಮುಖವಾಣಿಯಂತಿರುವ ಹಲವು ಪತ್ರಿಕೆಗಳು, ಸುದ್ದಿ ಟಿವಿಗಳು, ಸಾಮಾಜಿಕ ಜಾಲತಾಣಗಳು ಈ ಬಗ್ಗೆ ದೊಡ್ಡ ಅಪಪ್ರಚಾರ ಆರಂಭಿಸಿದವು. ಮುಸ್ಲಿಂ ಮೂಲಭೂತವಾದದ ಜೊತೆ ನಿರಂತರ ಮೈತ್ರಿ ಹೊಂದಿರುವ, ಹಿಂದುತ್ವ ಕೋಮುವಾದಿ ನೀತಿಯನ್ನು ಹಲವು ಬಾರಿ ಅನುಸರಿಸುವ ಕಾಂಗ್ರೆಸ್ ನಾಯಕರಂತೂ, ತಾವೇ ಸಿಪಿಐ(ಎಂ)ಗಿಂತ ಬಹು ದೃಢ ಕೋಮುವಾದದ ವಿರೋಧಿಗಳು ಎಂದು ತೋರಿಸಿಕೊಳ್ಳಲು ಇದೊಂದು ಸುವರ್ಣಾವಕಾಶ ಎಂದು ಭ್ರಮಿಸಿದರು. ಫ್ಯಾಸಿಸಂ ಬಗ್ಗೆ ಸಿಪಿಐ(ಎಂ) ಮೃದು ಧೋರಣೆ ತಳೆದುಬಿಟ್ಟಿದೆ. ಆರೆಸ್ಸೆಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಬಿಟ್ಟಿದೆ ಎಂದೇ ಆಪಾದನೆ ಮಾಡಿದರು. ಕೇರಳದ ಈ ಚರ್ಚೆಯಿಂದೆದ್ದ ಧೂಳಿನಿಂದ ಆವರಿಸಲ್ಪಟ್ಟ ಕರ್ನಾಟಕದ ಹಲವರು ಕೂಡಾ ಅಪಪ್ರಚಾರದ ಬಾಣ ಬಿಡಲಾರಂಭಿಸಿದರು.

ವಿಶ್ವದ ಸಾವಿರಾರು ವರ್ಷಗಳ ನಾಗರೀಕತೆಯ ಸಾಧನೆಗಳನ್ನು ದಿಕ್ಕುಗೆಡಿಸುವ, ಪ್ರಜಾಪ್ರಭುತ್ವವನ್ನು ನಾಶಮಾಡುವ ಒಂದು ಪ್ರಬಲ ವಿನಾಶಕಾರಿ ಕ್ರೂರ ವ್ಯವಸ್ಥೆ ಫ್ಯಾಸಿಸಂ. ಅದರ ಸ್ವರೂಪವನ್ನು, ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಆಳವಾದ, ವಿಷದವಾದ ಚರ್ಚೆ ಅಗತ್ಯ ಎಂಬ ಬಗ್ಗೆ ಸಂಶಯವೇ ಇಲ್ಲ. ಆದರೆ ಅದು ವೈಚಾರಿಕ, ವೈಜ್ಞಾನಿಕ ಚರ್ಚೆಯ ರೂಪದಲ್ಲಿದ್ದರೆ, ಅಧ್ಯಯನ ರೂಪದಲ್ಲಿದ್ದರೆ ಮಾತ್ರ ಅದರಿಂದ ಪ್ರಯೋಜನ.

ಫ್ಯಾಸಿಸಂ ಹುಟ್ಟಿದ ಮೂಲದಿಂದಲೇ ಅಧ್ಯಯನ ಆರಂಭವಾಗಬೇಕು

ಫ್ಯಾಸಿಸಂ ಬಗ್ಗೆ ಯಾವುದೇ ಅಧ್ಯಯನದ ಆರಂಭ, ಅದು ಹುಟ್ಟಿದ ಮೂಲದಿಂದಲೇ ಆಗಬೇಕಲ್ಲವೇ? ಫ್ಯಾಸಿಸಂ ನಂತಹ ಕ್ರೂರ



ಸಿದ್ಧಾಂತ ಮತ್ತು ವ್ಯವಸ್ಥೆಯ ಅಧ್ಯಯನ ಕೇವಲ ಆರಾಮ ಖುರ್ಚಿಯ ಅಕಾಡೆಮಿಕ್ ಅಧ್ಯಯನವಲ್ಲ. ಫ್ಯಾಸಿಸಂ ಅನ್ನು ನಾಶಮಾಡುವ ಕ್ರಿಯೆಯ ಮೂಲಕ ಮೂಡುವ, ವಿಷದವಾಗುತ್ತಾ ಹೋಗುವ ಅರಿವು. ಮಾರ್ಕ್ಸ್‌ವಾದದ ಅಡಿಪಾಯವಾದ, ಮೂಲಭೂತ ತಿಳುವಳಿಕೆಯೇ ಕ್ರಿಯೆಯ ಮೂಲಕ ಅರಿವಿನ ಬೆಳವಣಿಗೆ.

ಹೀಗೆ ಫ್ಯಾಸಿಸಂ ಅನ್ನು ಅದರ ಬೆಳವಣಿಗೆಯ ಎಲ್ಲ ಹಂತಗಳಲ್ಲಿ ವಿರೋಧಿಸುತ್ತಾ, ಅದರ ಬಗ್ಗೆ ಚಳುವಳಿಗಳ ಒಳಗೇ ಇದ್ದ ತಪ್ಪು ಸೈದ್ಧಾಂತಿಕ ಕಲ್ಪನೆಗಳ ವಿರುದ್ಧ ಹೋರಾಡುತ್ತಾ ರೂಪುಗೊಳ್ಳಲಾರಂಭಿಸಿದ ತಿಳುವಳಿಕೆ ಅದು. ಫ್ಯಾಸಿಸಂನ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಧಾಳಿಗೆ ತುತ್ತಾಗಿ, ವಿಶ್ವ ಚಳುವಳಿಯ ನಾಯಕರು ಬಂಧನ, ಕೊಲೆಗೀಡಾಗುತ್ತಿರುವ, ಅದರ ವಿರುದ್ಧ ಲಕ್ಷಾಂತರ ಕಮ್ಯುನಿಸ್ಟರು, ಕಾರ್ಮಿಕರು, ಇತರ ಪ್ರಜಾಪ್ರಭುತ್ವ ಶಕ್ತಿಗಳ ಪ್ರಾಣ ಬಲಿದಾನ ಅರ್ಪಿಸುತ್ತಾ ಬೆಳೆದ ಅರಿವು ಅದು. ಇಂತಹ ಅರಿವನ್ನು ನಿರ್ಲಕ್ಷಿಸಿ ಫ್ಯಾಸಿಸಂ ಬಗ್ಗೆ ತಿಳುವಳಿಕೆ ಬೆಳೆಸಿಕೊಳ್ಳಲು ಸಾಧ್ಯವೇ? ಅದನ್ನು ನಿರ್ಮೂಲನೆ ಮಾಡುವ ಕ್ರಿಯಾಶೀಲತೆಯಲ್ಲಿ ತೊಡಗುವುದು ಸಾಧ್ಯವೇ?

ಹಿಟ್ಲರನಿಂದ ಬಂಧನಕ್ಕೆ ಒಳಗಾಗಿದ್ದವರು, ಆಳವಾದ ಅಧ್ಯಯನದ ಆಧಾರದ ಮೇಲೆ ಇಡೀ ವಿಶ್ವಕ್ಕೆ ಫ್ಯಾಸಿಸಂನ ಲಕ್ಷಣಗಳ ಬಗ್ಗೆ, ಅದರ ಬೆಳವಣಿಗೆಯ ವಿವಿಧ ಹಂತಗಳ ಬಗ್ಗೆ, ಅದನ್ನು ಎದುರಿಸುವ ಸಂಘರ್ಷದ ತಂತ್ರಗಳ ಬಗ್ಗೆ ತಿಳಿಸಿದವರು ಜಾರ್ಜಿ ಡಿಮಿಟ್ರೋವ್. ಅವರು ವಿಶ್ವದ ಹಲವಾರು ವೇದಿಕೆಗಳಲ್ಲಿ ಫ್ಯಾಸಿಸಂ ಅನ್ನು ಎದುರಿಸುವ ವಿಧಾನಗಳ ಹಲವು ಉಪನ್ಯಾಸ ಮಾಡಿದ್ದೇ ಅಲ್ಲದೆ, ಅಂದು ಕಮ್ಯುನಿಸ್ಟ್ ಇಂಟರ್ ನ್ಯಾಷನಲ್ ನ ಪ್ರಧಾನ ಕಾರ್ಯದರ್ಶಿಯಾಗಿ ಇಡೀ ವಿಶ್ವದ ಕಾರ್ಮಿಕ ಚಳುವಳಿಗೆ ಫ್ಯಾಸಿಸಂ ಅನ್ನು ಎದುರಿಸುವುದರಲ್ಲಿ, ಸೋಲಿಸುವುದರಲ್ಲಿ ಮುನ್ನಡೆಸಿದವರು.

ನಂತರದ ಸ್ಥಾನದಲ್ಲಿ ಇಟಲಿಯ ಪಾಮಿರೋ ತೊಗ್ಲಿಯಾಟ್ಟಿ. ಅವರು ಮುಸಲೋನಿಯ ಫ್ಯಾಸಿಸಂ ಬೆಳೆದ ರೀತಿ, ಅದರ ಮೂಲವನ್ನು ವಿಶ್ಲೇಷಿಸಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪ್ರಜಾಸತ್ತಾತ್ಮಕ ವೇದಿಕೆಗಳಲ್ಲಿ ಉಪನ್ಯಾಸ ಮಾಡಿದ್ದಾರೆ.

ಆಂತೋನಿಯೋ ಗ್ರಾಮ್ಷಿ ಬಗ್ಗೆ ಕನ್ನಡದ ಬಹಳ ಜನರಿಗೆ ವಿವಿಧ ಕಾರಣಗಳಿಗಾಗಿ ಪರಿಚಯ ಇದೆ. ಫ್ಯಾಸಿಸಂ ಅವರ ಮೇಲೆ ಎಸಗಿದ ಕ್ರೌರ್ಯಗಳನ್ನು ಎದುರಿಸಿದವರು, ದೀರ್ಘಕಾಲದ ಬಂಧನದಲ್ಲಿಯೇ ಪ್ರಾಣ ಕಳೆದುಕೊಂಡವರು. ಅವರ ಪುಸ್ತಕಗಳು ಹಲವು. ಅವುಗಳಲ್ಲಿ 'ಪ್ರಿಸನ್ ನೋಟ್ ಬುಕ್ಸ್' ಬಹಳ ಪ್ರಸಿದ್ಧ.

ಭಾರತ ಮೂಲದ ಬ್ರಿಟಿಷ್ ಕಮ್ಯುನಿಸ್ಟ್ ರಜನಿ ಪಾಮೆ ದತ್ ರವರ ಬರಹಗಳು, ಉಪನ್ಯಾಸಗಳು, ಅವರ ಫ್ಯಾಸಿಸಂ ಅಂಡ್ ಸೋಷಿಯಲ್ ರೆವೊಲ್ಯೂಷನ್, ವಿಶ್ವದ ಚರಿತ್ರೆಯಲ್ಲಿ ವಿಜ್ಞಾನದ ಬಗ್ಗೆ ನಾಲ್ಕು ಸಂಪುಟಗಳಲ್ಲಿ ಅಧ್ಯಯನ ಮಾಡಿದ ಜೆ.ಡಿ. ಬರ್ನಾಲ್ ಇವರ ಬರಹಗಳು ಮುಖ್ಯ.

ಭಾರತದ ಕಮ್ಯುನಿಸ್ಟರಲ್ಲಿ ಇಎಂಎಸ್ ನಂಬೂದಿರಿಪಾದ್, ಜ್ಯೋತಿ ಬಸು, ಸೀತಾರಾಂ ಯೆಚೂರಿ, ಪ್ರಕಾಶ್ ಕಾರತ್ ಮೊದಲಾದ ಭಾರತದ ನಾಯಕರು ಫ್ಯಾಸಿಸಂನ ವಿಶ್ಲೇಷಣೆ ಮಾಡಿದ್ದಾರೆ. ಅದರಲ್ಲಿ ಭಾರತದಲ್ಲಿ ಕೋಮುವಾದದ ಬೆಳವಣಿಗೆ ಬಗ್ಗೆ ಅಂಬೇಡ್ಕರ್ ರವರು ಆರಂಭದಲ್ಲಿಯೇ ನೀಡಿದ ಎಚ್ಚರಿಕೆ, ಅದರ ಬಗ್ಗೆ ವಿಪುಲವಾಗಿ ಬರೆದ ಯೆಚೂರಿಯವರ "ಏನಿದು ಹಿಂದೂ ರಾಷ್ಟ್ರ?", ಪ್ರಕಾಶ್ ಕಾರತ್ ರವರ ಆರೆಸ್ಸೆಸ್ ಮತ್ತು ಬಿಜೆಪಿ ಮೊದಲಾದ ಬರಹಗಳು, ಬಿ.ವಿ.ರಾಘವುಲು ರವರ ಇತ್ತೀಚಿನ ಕಿರುಪುಸ್ತಿಕೆ, ಪ್ರಭಾತ್ ಪಟ್ನಾಯಕ್, ಇರ್ಫಾನ್ ಹಬೀಬ್, ರೊಮಿಲಾ ಥಾಪರ್, ಎಜಿ ನೂರಾನಿ ಮೊದಲಾದವರ ಬರಹಗಳನ್ನೂ ಸಿಪಿಐ(ಎಂ) ಎರಡು ದಶಕಗಳಿಂದ ಅಂಗೀಕರಿಸಿದ ಮಹಾಧಿವೇಶನ, ಕೇಂದ್ರ ಸಮಿತಿಗಳ ನಿರ್ಣಯಗಳು ಇವುಗಳ ಮೇಲೆ ಬೆಳಕು ಚೆಲ್ಲುತ್ತವೆ.

ಮಾರ್ಕ್ಸ್‌ವಾದಿ ಸೈದ್ಧಾಂತಿಕರ ವಿಶ್ಲೇಷಣೆ

ಮೇಲೆ ಹೇಳಿದಂತೆ ಫ್ಯಾಸಿಸಂನ ಪ್ರಾಣ ಬಲಿದಾನ, ಬಂಧನ, ದಬ್ಬಾಳಿಕೆಯ ಮೂಲಕ ಎದುರಿಸಿದ ಮಾರ್ಕ್ಸ್‌ವಾದಿ ಸೈದ್ಧಾಂತಿಕರ ವಿಶ್ಲೇಷಣೆಯ ಸಾರ ಹೀಗಿದೆ:

* ಫ್ಯಾಸಿಸಂ ಎಂದರೆ ಎಲ್ಲ ರಾಜಕೀಯ ಪಕ್ಷಗಳನ್ನು, ಸಂಘಟನೆಗಳನ್ನು ಬಹಿರಂಗ ಭಯೋತ್ಪಾದಕ ಸರ್ವಾಧಿಕಾರದ ಮೂಲಕ ಇಲ್ಲವಾಗಿಸುವುದು, ಎಲ್ಲ ಸಂಸದೀಯ ಅಂಗಗಳನ್ನು ಕಿತ್ತೆಸೆಯುವುದು. ಮುಖ್ಯವಾಗಿ ಕಾರ್ಮಿಕ ವರ್ಗದ ಸಂಘಟನೆಗಳ ದಮನ. ಅತ್ಯಂತ ಪ್ರತಿಗಾಮಿ, ದ್ವೇಷಪೂರಿತ, ಹಣಕಾಸು ಬಂಡವಾಳದ ಅತ್ಯಂತ ಸಾಮ್ರಾಜ್ಯಶಾಹಿ ಪ್ರಕಾರಗಳ ಭಯೋತ್ಪಾದಕ ಸರ್ವಾಧಿಕಾರ.
* ಈಗ ವಿಶ್ವದಲ್ಲಿ ಬೆಳೆದು ಬಂದ ಬಂಡವಾಳಶಾಹಿ ಸಮಾಜಕ್ಕೆ ವಿರುದ್ಧವಾಗಿ ಫ್ಯಾಸಿಸಂ ಬೆಳೆದು ಬಂದಿದೆ ಎಂಬ ತಪ್ಪು ಕಲ್ಪನೆ ಹಲವರಲ್ಲಿದೆ. ಆದರೆ ಫ್ಯಾಸಿಸಂ ಎಂದರೆ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧವಾಗಿ ಉಗಮವಾದ ವಿಶಿಷ್ಟ, ಸ್ವತಂತ್ರ ಸಿದ್ಧಾಂತ ಮತ್ತು ವ್ಯವಸ್ಥೆ ಏನಲ್ಲ. ಫ್ಯಾಸಿಸಂ ಎಂದರೆ ಆಧುನಿಕ ಬಂಡವಾಳಶಾಹಿಯ ಅತ್ಯಂತ ಸಹಜ, ಅದಕ್ಕೆ ಸ್ಥಾಯಿಯಾದ ಪ್ರವೃತ್ತಿಗಳು ಮತ್ತು ಧೋರಣೆಗಳು ಅದರ ಅವನತಿಯ, ಕೊಳೆಯುವಿಕೆಯ ಪರಾಕಾಷ್ಠೆಯ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಬಿಚ್ಚಿಕೊಳ್ಳುವುದು.
* ವಿಶಾಲವಾದ ಅರ್ಥದಲ್ಲಿ ಎಲ್ಲಾ ಆಧುನಿಕ ಬಂಡವಾಳಶಾಹಿ ಸಮಾಜಗಳಲ್ಲಿ ಫ್ಯಾಸಿಸಂನತ್ತ ಬೆಳವಣಿಗೆಯಾಗುವ ಬಗ್ಗೆ ಮಾತಾಡಬಹುದು. ಕೆಲವು ದೇಶಗಳ ಪ್ರಜಾಪ್ರಭುತ್ವದ ಚಿಪ್ಪಿನ ಒಳಗೆ ಫ್ಯಾಸಿಸಂ ಪೂರ್ವ, ಫ್ಯಾಸಿಸಂಗೆ ಹತ್ತಿರವಾದ ಹಂತಗಳ ಬೆಳವಣಿಗೆಯ ಉದಾಹರಣೆ ನೀಡಬಹುದು.
* ಫ್ಯಾಸಿಸ್ಟ್ ಸರ್ವಾಧಿಕಾರದ ಸ್ಥಾಪನೆಗೆ ಮೊದಲು ಬಂಡವಾಳಶಾಹಿ ಸರ್ಕಾರಗಳು ಹಲವು ಪೂರ್ವಭಾವಿ ಹಂತಗಳ ಮೂಲಕ ಹಾದು ಹೋಗುತ್ತವೆ. ಈ ಸರ್ಕಾರಗಳು ಫ್ಯಾಸಿಸಂ ಅಧಿಕಾರಕ್ಕೇರುವುದಕ್ಕೆ ನೇರವಾಗಿ ಸಹಾಯ ಮಾಡುವ ಹಲವಾರು ಪ್ರತಿಗಾಮಿ ಕ್ರಮಗಳನ್ನು ಕೈಗೊಳ್ಳುತ್ತವೆ.
* ಹೀಗೆ ಫ್ಯಾಸಿಸಂ ಹಲವು ಹಂತಗಳ ಮೂಲಕ ಬೆಳೆಯುತ್ತದೆ ಎಂಬುದು ಅಮುಖ್ಯವಾದ ಸಂಗತಿಯಲ್ಲ. ಫ್ಯಾಸಿಸಂ ಹೇರುವ ಈ ಸಿದ್ಧತಾ ಹಂತಗಳಲ್ಲಿ ಬಂಡವಾಳಶಾಹಿ ಕೈಗೊಳ್ಳುವ ಪ್ರತಿಗಾಮಿ ಕ್ರಮಗಳ ವಿರುದ್ಧ ಆಯಾ ಹಂತಗಳಲ್ಲಿಯೇ ಹೋರಾಟಮಾಡಿ ತಡೆಗಟ್ಟದಿದ್ದರೆ. ಫ್ಯಾಸಿಸಂ ಪ್ರಭುತ್ವ ಅಧಿಕಾರಕ್ಕೇರುವುದನ್ನು ತಡೆಗಟ್ಟಲಾಗುವುದಿಲ್ಲ. ಅದಕ್ಕೆ ಬದಲಾಗಿ ಅದು ಪ್ರಭುತ್ವವನ್ನು ಹಿಡಿದುಕೊಳ್ಳುವುದಕ್ಕೆ ಸಹಾಯಕವಾಗಿರುತ್ತಾರೆ.
* ಹೀಗೆ ಫ್ಯಾಸಿಸಂ ಪ್ರಭುತ್ವವನ್ನು ಹಿಡಿದುಕೊಳ್ಳುವ ವಿವಿಧ ಹಂತಗಳನ್ನು ಸರಿಯಾಗಿ ಗುರುತಿಸುವುದು ಮುಖ್ಯ. ಇದರಲ್ಲಿ ಉತ್ಪ್ರೇಕ್ಷೆ ಮತ್ತು ಕೀಳಂದಾಜು ಎರಡೂ ಸಲ್ಲ. ಫ್ಯಾಸಿಸಂನ ಪೂರ್ವಭಾವಿ ಹಂತಗಳನ್ನು ಫ್ಯಾಸಿಸಂ ಎಂದು ಉತ್ಪ್ರೇಕ್ಷೆ ಮಾಡಿಕೊಂಡರೆ, ಅದು ಪ್ರಭುತ್ವದ ಮೇಲೆ ಹಿಡಿತ ಸ್ಥಾಪಿಸಲು ಇರುವ ಸಾಧ್ಯತೆ, ಅವಕಾಶಗಳನ್ನು ಉಪಯೋಗಿಸಲಾಗದ ಪರಿಸ್ಥಿತಿಯನ್ನು ಉಂಟುಮಾಡುತ್ತದೆ. ನಮ್ಮ ಹೋರಾಟದ ಗುರಿ, ಉದ್ದೇಶ, ಕ್ರಮಗಳನ್ನು ತಪ್ಪು ದಾರಿಗೆ ಎಳೆಯಬಹುದು. ಆದ್ದರಿಂದ ವಿವಿಧ ಹಂತಗಳಿಗೆ ಅನುಗುಣವಾಗಿ ವಿವಿಧ ಶಕ್ತಿಗಳ ಐಕ್ಯತೆಯನ್ನು ಸಾಧಿಸುವುದು, ಆಯಾ ಹಂತಗಳಲ್ಲಿನ ಪ್ರತಿಗಾಮಿ ಕ್ರಮಗಳನ್ನು ಹಿಮ್ಮೆಟ್ಟಿಸುವ ಹೋರಾಟ ರೂಪಿಸುವುದು, ದೃಢತೆಯಿಂದ ಆ ಹೋರಾಟಗಳನ್ನು ಕೈಗೊಳ್ಳುವುದು ಬಹಳ ಮುಖ್ಯ.

ಅಂತರರಾಷ್ಟ್ರೀಯ ಅನುಭವವನ್ನು ಮಾರ್ಕ್ಸ್‌ವಾದಿ ವಿಶ್ಲೇಷಣೆಗೆ ಒಳಪಡಿಸಿದ ಪ್ರಮುಖರ ಬರಹಗಳ ಅರಿವಿನ ಈ ಸಾರ ಬಹಳ ಸ್ಪಷ್ಟವಾಗಿ ಫ್ಯಾಸಿಸಂ ಸಂಪೂರ್ಣವಾಗಿ ಪ್ರಭುತ್ವ ಹಿಡಿಯುವ ಮೊದಲು ಅದನ್ನು ಉತ್ಪ್ರೇಕ್ಷಿಸುವುದರ

ಪುಟ 4 ಕ್ಕೆ

ಕಲ್ಯಾಣ ಕರ್ನಾಟಕದ 'ಕಲ್ಯಾಣ'ವೆಂತು?

ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸುವ ಉದ್ದೇಶದ ಭಾಗವಾಗಿ ರಚಿತವಾದ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಅನುದಾನದ ಕೊರತೆಯಿಂದ ಬಾಧಿತವಾಗಿದೆ ಎಂಬ ವರದಿಗಳು ಪ್ರಕಟವಾಗಿವೆ. ಸರ್ಕಾರ ಬಿಡುಗಡೆ ಮಾಡಬೇಕಾದ ಅನುದಾನ ಎಳ್ಳಷ್ಟು ತಲುಪದೇ ಇರುವ ವರದಿಗಳೂ ಇವೆ. 2024-25 ರ ಸಾಲಿನಲ್ಲಿ 5,000 ಕೋಟಿಯಷ್ಟು ಹಣಕ್ಕೆ ಕ್ರಿಯಾ ಯೋಜನೆ ರೂಪಿಸಿ ಜಾರಿಗೊಳಿಸಲು ಬದ್ಧ ಎಂದು ಬಜೆಟ್ ಮಂಡನೆಯಲ್ಲಿ ಸರ್ಕಾರ ಪ್ರಕಟಿಸಿತ್ತು. ಅದಕ್ಕೆ ಅನುಗುಣವಾಗಿ ಹಣವೂ ಬಿಡುಗಡೆ ಆಗಬೇಕಿತ್ತು. ಆದರೆ ಅಕ್ಷರಶಃ ನಯಾ ಪೈಸೆಯೂ ಸಿಗದಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ.

ಹಾಗೆ ನೋಡಿದರೆ ಹಿಂದಿನ ಅನುದಾನದಲ್ಲಿ ಖರ್ಚಾಗದೇ ಉಳಿದ ಒಟ್ಟು ಹಣ 3,117.07 ಕೋಟಿ ರೂ.ಗಳು. ಇದರಲ್ಲಿ 717.32 ಕೋಟಿ ಹಣ ಜುಲೈ 31 ರೊಳಗೆ (ಶೇ.23) ಖರ್ಚಾಗಿತ್ತು. ಈ ವರ್ಷ ಯೋಜನೆಯಂತೆ 3,000 ಕೋಟಿ ರೂ.ಗಳನ್ನು ಕ್ರಿಯಾ ಯೋಜನೆ ಯಂತೆ ಖರ್ಚು ಮಾಡುವುದು, ಮುಂದಿನ ವರ್ಷದಲ್ಲಿ 2,000 ಕೋಟಿ ರೂ.ಗಳು ನೀಡುವುದು ಎಂಬ ನಿರ್ಧಾರವಿತ್ತು. ಮೊದಲ ಹಂತವಾಗಿ 1,500 ಕೋಟಿ ಹಣ ಬಿಡುಗಡೆ ಮಾಡಬೇಕಿತ್ತು. ಈಗ ಹೊಸ ಬಜೆಟ್ ಮಂಡನೆಗೆ ಕ್ಷಣ ಗಣನೆ ಆರಂಭವಾಗಿರುವಾಗ ಇನ್ನೇನು ಹಣ ಬಿಡುಗಡೆಯಾಗಲಿದೆ ಎಂಬ ಮಂಡಳಿಯ ಅಧ್ಯಕ್ಷ ಅಜಯ್ ಸಿಂಗರ ಹೇಳಿಕೆ ಅರ್ಥಹೀನ.

ಈ ಹಣವನ್ನು ಈ ವ್ಯಾಪ್ತಿಯ 18 ತಾಲೂಕುಗಳಲ್ಲಿ ಮಿನಿ ವಿಧಾನಸೌಧಗಳು, ಸೇತುವೆ, ರಸ್ತೆ ಕಾಮಗಾರಿ, ಸಭಾ ಭವನ ಇತ್ಯಾದಿ 'ಅಭಿವೃದ್ಧಿ'ಯ ನೀಲ ನಕಾಶೆ ಇದೆ. ಇಂತಹ ಲಾಭದಾಯಕ ಕಾಮಗಾರಿಗಳನ್ನು ಹೊರತು ಪಡಿಸಿದರೆ ಉತ್ಪಾದನಾ ಕ್ಷೇತ್ರವನ್ನು ಬೆಳೆಸುವ, ಶಿಕ್ಷಣ, ಆರೋಗ್ಯ ಮುಂತಾದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಉನ್ನತಿ ಸಾಧಿಸುವ ಇಚ್ಛಾಶಕ್ತಿಯೇ ಇಲ್ಲವಾಗಿದೆ. ಜನರ ಅಭಿವೃದ್ಧಿಗಿಂತ ಕೆಲವರ ಅಭಿವೃದ್ಧಿಗೆ ಈ ಮಂಡಳಿ ಅಲಕ್ಷ್ಯ ವಹಿಸುತ್ತಿದೆ ಎಂಬ ಟೀಕೆಗೆ, ಪರ್ಯಾಯ ದಾರಿಯ ಬಗ್ಗೆ ಸರ್ಕಾರ ತಲೆ ಕೊಂಡಿಲ್ಲ.

ಮಂಡಳಿಯ ಅಧ್ಯಕ್ಷ, ಶಾಸಕರಾದ ಅಜಯ್ ಸಿಂಗ್. ಅವರು 1,500 ಕೋಟಿ ಹಣ ಬಿಡುಗಡೆ ಮಾಡಲು ಅನುಮೋದನೆ ದೊರೆತಿದ್ದು, ಈಗ 750 ಕೋಟಿ ಹಾದಿಯಲ್ಲಿದೆ ಎಂದು ಉತ್ತರಿಸಿದ್ದಾರೆ. ಒಟ್ಟಾರೆ 2,600 ಕೋಟಿ ರೂ.ಗಳ ಹಣವನ್ನು ಇದೇ ಮಾರ್ಚ್ 31 ರೊಳಗೆ ಖರ್ಚು ಮಾಡುವುದಾಗಿಯೂ ಹೇಳುತ್ತಿದ್ದಾರೆ. ಬಜೆಟ್ ಅಂತ್ಯವಾಗುವ ಮೊದಲು ಏನೋ ಕಾಟಾಚಾರಕ್ಕೆ ಅಥವಾ ಬಜೆಟ್ ಹಣ ಉಳಿಯಬಾರದು ಎಂದು ಅವಸರದಲ್ಲಿ ಒಂದಿಷ್ಟು

ಸಂಪಾದಕೀಯ

ಹಣ ಖರ್ಚು ಮಾಡಬಹುದು. ಮುಖ್ಯವಾಗಿ ಹೈ-ಕ ಅಥವಾ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಇದೆಷ್ಟು ಸಹಾಯಕವಾಗ ಬಲ್ಲುದು?

ಕಲ್ಬುರ್ಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಒಳಗೊಂಡ ಕಲ್ಯಾಣ ಕರ್ನಾಟಕ ಪ್ರದೇಶವು ಅಭಿವೃದ್ಧಿಯಲ್ಲಿ ಬೇರೆ ಭಾಗಗಳಿಗೆ ಹೋಲಿಸಿದರೆ ತೀವ್ರವಾಗಿ ಹಿಂದುಳಿದಿದೆ. ಇದನ್ನು ಅರ್ಥ ಮಾಡಿಕೊಳ್ಳಲು ಜನಸಮಾನ್ಯರಿಗೆ ಬಹುದೊಡ್ಡ ಸಂಶೋಧನೆ, ಅಂಕಿ-ಸಂಖ್ಯೆಗಳೇನೂ ಅನಿವಾರ್ಯವಲ್ಲ. ವಿಶೇಷವಾಗಿ, ತಾಯಂದಿರ ಮತ್ತು ಮಕ್ಕಳ ಅಪೌಷ್ಟಿಕತೆ, ಅನಕ್ಷರತೆ, ಬಡತನದಿಂದ ಕಂಗೆಟ್ಟ ಬದುಕು, ನಿರುದ್ಯೋಗ ಎಲ್ಲವೂ ಅಲ್ಲೇ ಅರ್ಥವಾಗಿ ಹೋಗುತ್ತದೆ. ಆದರೆ ನಮ್ಮನ್ನು ಆಳುವ ಸರಕಾರಗಳು ಈ ನಿಟ್ಟಿನಲ್ಲಿ ಕೆಲವಾದರೂ ಕ್ರಮಗಳನ್ನು ಕೈಗೊಳ್ಳಲು ದಶಕಗಳ ಹೋರಾಟವೇ ನಡೆಯಬೇಕಾಯಿತು.

ಶಿಕ್ಷಣ ಮತ್ತು ಉದ್ಯೋಗದಲ್ಲಿ ಈ ಭಾಗದವರಿಗೆ ಶೇ.8 ರಷ್ಟು ವಿಶೇಷ ಮೀಸಲಾತಿ ಕಲ್ಪಿಸಿಕೊಡುವ 371(ಜೆ)ಯನ್ನು ಕಾಂಗ್ರೆಸ್ ಸರಕಾರವು 2013ರಲ್ಲಿ ಜಾರಿಗೆ ತಂದಿತು. ಈ ಕ್ರಮದಿಂದ ಕಲ್ಯಾಣ ಕರ್ನಾಟಕ ವಿದ್ಯಾರ್ಥಿ-ಯುವಜನರಿಗೆ ಒಂದಷ್ಟು ಸಹಾಯವಾಗಿದೆ ಎನ್ನುವುದು ನಿಜ. ಆದರೆ ಇದಿಷ್ಟೆ ಕ್ರಮಗಳಿಂದ ಪ್ರಾದೇಶಿಕ ಅಸಮಾನತೆ ನಿವಾರಣೆ ಆಗುವುದಿಲ್ಲ ಎಂಬುದು ಖಚಿತ.

2011ರ ಜನಗಣತಿಯ ಪ್ರಕಾರ ರಾಜ್ಯದ ಸಾಕ್ಷರತೆಯ ಪ್ರಮಾಣ ಶೇ.75.36 ರಷ್ಟು ಇದ್ದರೆ, ಕಲ್ಯಾಣ ಕರ್ನಾಟಕದ್ದು ಕೇವಲ ಶೇ.64ರಷ್ಟು. ಹೀಗೇ ಶಾಲೆ ಬಿಡುವವರ ಪ್ರಮಾಣ ಶೇ.2.96 -ಶೇ.5.77ರಷ್ಟು. ರಕ್ತಹೀನರ ಪ್ರಮಾಣ ಶೇ.65;-ಶೇ.72ರಷ್ಟು, ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವವರ ಪ್ರಮಾಣ ಶೇ.27; ಕಲ್ಯಾಣ ಕರ್ನಾಟಕದಲ್ಲಿ ಶೇ. 14ರಷ್ಟು ಇದೆ.

ಇಂತಹ ದುಸ್ಥಿತಿಗೆ ಕಾರಣವೇನು? ಆರ್ಥಿಕ ಸಮೀಕ್ಷೆ-2021 ಪ್ರಕಾರ ವಿದ್ಯಾರ್ಥಿ-ಶಿಕ್ಷಕರ ಅನುಪಾತ (ಪ್ರೌಢಶಾಲೆ) ರಾಜ್ಯ ಸರಾಸರಿ 14 ಇದ್ದರೆ, ಕಲ್ಯಾಣ ಕರ್ನಾಟಕದ್ದು 23.8. ಜಿಲ್ಲಾವಾರು ಪ್ರತಿ ಹತ್ತು ಸಾವಿರ ಜನರಿಗೆ ಲಭ್ಯ ಇರುವ ವೈದ್ಯರ ಸಂಖ್ಯೆ-06, ಕಲ್ಯಾಣ ಭಾಗದಲ್ಲಿ 2.8 ಮಾತ್ರ ಇದೆ. ಜನರ ಅನಕ್ಷರತೆ ಹಾಗೂ ಆರೋಗ್ಯದ ಸಮಸ್ಯೆಗಳ ಮೂಲವನ್ನು ಅರಿಯಲು ಈ ಮಾಹಿತಿ ಸಹಾಯಕ. ಈ ವಿಷಯದಲ್ಲಿ ಗಂಭೀರ ಸುಧಾರಣೆಗಳು ಆಗಬೇಕು. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಬಹುಮುಖ್ಯ ವಿಷಯ ಎಂದರೆ ಕೆಲವೇ ಬಲಾಢ್ಯ ಭೂಮಾಲಕರ ಕೈಗಳಲ್ಲಿ ಕೃಷಿ ಭೂಮಿ ಇರುವುದು. ಅಂದರೆ ಮತ್ತು ಭೂಮಿ ಇಲ್ಲದ ಕೂಲಿಕಾರರರು ದೊಡ್ಡ ಪ್ರಮಾಣದಲ್ಲಿರುವುದು. ಕೈಗಾರಿಕೆಗಳು ಬಹಳ ಕಡಿಮೆ ಇರುವುದು. ಇದು ಬಡತನ, ಅಪೌಷ್ಟಿಕತೆ, ಅನಾರೋಗ್ಯ, ನಿರುದ್ಯೋಗ ಮುಖ್ಯ ಕಾರಣ. ಈ ಅಸಮಾನತೆ ನಿವಾರಣೆ ಆಗಬೇಕು.

2023 ರ ಅಂಕಿ-ಅಂಶಗಳ ಪ್ರಕಾರ ರಾಜ್ಯ ಸರಕಾರವು 371(ಜೆ) ಅಡಿ ಕಳೆದ 10 ವರ್ಷಗಳಲ್ಲಿ ಮಂಡಳಿಗೆ 11,878 ಕೋಟಿ ಅನುದಾನ ಘೋಷಿಸಿ, ಇದರಲ್ಲಿ 10,228 ಕೋಟಿ ಬಿಡುಗಡೆ ಮಾಡಿದೆ. ಅದರಲ್ಲಿ 8,333 ಕೋಟಿ ಮಾತ್ರ ಖರ್ಚಾಗಿದೆ. 1,649.53 ಕೋಟಿ ಅನುದಾನ ಬಿಡುಗಡೆಯೇ ಆಗಲಿಲ್ಲ. ಖರ್ಚಾಗಿರುವ ಹಣದಲ್ಲಿ ಬಹುಪಾಲು ಸಮುದಾಯ ಭವನ, ಮುಂತಾದ ಕಟ್ಟಡಗಳ ನಿರ್ಮಾಣಕ್ಕೆ ಹೋಗಿರುವುದು ಜಾಸ್ತಿ ಎನ್ನುತ್ತವೆ ಅಧ್ಯಯನಗಳು. ಇದರ ಕಾರಣ ಬಹಿರಂಗ ರಹಸ್ಯ. ಅಧಿಕಾರಿಗಳು-ಅಧಿಕಾರಸ್ಥ ರಾಜಕಾರಣಿಗಳು-ಕಾಂಟ್ರಾಕ್ಟುದಾರರ ಭ್ರಷ್ಟ ಕೂಟವು ಈ ಯೋಜನೆಗಳ ಬಹುದೊಡ್ಡ 'ಫಲಾನುಭವಿ'ಗಳು ಎಂಬುದು ರಹಸ್ಯವೇನು ಅಲ್ಲ.

ಡಾ.ಡಿ.ಎಂ. ನಂಜುಂಡಪ್ಪನವರ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸರಕಾರದ ಬಜೆಟ್ ಗಾತ್ರದ ಶೇ.11 ಅನುದಾನ ಒದಗಿಸುವುದರ ಮೂಲಕ ಈ ಯೋಜನೆಯ ಅನುಷ್ಠಾನವನ್ನು ಪ್ರಾದೇಶಿಕ ತಾರತಮ್ಯ ನಿವಾರಣೆಯಾಗುವವರೆಗೆ ಮುಂದುವರೆಸಬೇಕು ಎಂದು ಶಿಫಾರಸ್ಸು ಮಾಡಿದೆ.

ಪುಟ 11 ಕ್ಕೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾಗಿ ಯು. ಬಸವರಾಜ ಆಯ್ಕೆ



ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾಗಿ ಯು. ಬಸವರಾಜ ರವರು ಆಯ್ಕೆಯಾಗಿದ್ದಾರೆ.

28-02-25ರಂದು ದೇವದುರ್ಗ ತಾಲ್ಲೂಕಿನ, ಹೂವಿನಡಗಿ ಗ್ರಾಮದಲ್ಲಿ ರಾಜ್ಯ ಮಟ್ಟದ ಅಧ್ಯಯನ ಶಿಬಿರ ಸಂಘಟಿಸಿದ್ದ ಸಭಾಂಗಣ ಶ್ರೀ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ. ಕೆಪಿಆರ್ ಎಸ್ ನ ರಾಜ್ಯಾಧ್ಯಕ್ಷರಾಗಿದ್ದ ಜಿ.ಸಿ. ಬಯ್ಯಾರೆಡ್ಡಿ ಅವರ ಅಕಾಲಿಕ ಮರಣದಿಂದಾಗಿ ಆ ಸ್ಥಾನ ಖಾಲಿ ಇತ್ತು.

1980 ರಿಂದ ಎಸ್ ಎಫ್ ಐ ಕಾರ್ಯಕರ್ತರಾಗಿದ್ದ ಯು. ಬಸವರಾಜ ರವರು ಬಿಎಸ್ಸಿ ಬಿಇಡಿ ಪದವಿಧರರು. 1984ರಲ್ಲಿ ಬಳ್ಳಾರಿಯಲ್ಲಿ ಬಿಎಸ್ಸಿ ವಿದ್ಯಾರ್ಥಿಯಾಗಿದ್ದಾಗಲೇ ಭಾರತ ವಿದ್ಯಾರ್ಥಿ ಫೆಡರೇಶನ್ (SFI)ನ ವಿದ್ಯಾರ್ಥಿ ಹೋರಾಟಗಳಲ್ಲಿ ಅವರು ಅವಿರತವಾಗಿ ತೊಡಗಿಕೊಂಡಿದ್ದರು. ಅದೇ ಸಮಯದಲ್ಲಿ ಬರಗಾಲದಿಂದ ಸಂಕಷ್ಟ ಎದುರಿಸುತ್ತಿದ್ದ ತನ್ನ ಊರಿನ ಜನರನ್ನು ಹಾಗೂ ಬೆಳೆಗಳ ಬೆಲೆ ಕುಸಿತದ ವಿರುದ್ಧ ರೈತರನ್ನು ಸಂಘಟಿಸುವ ಕೆಲಸಗಳಲ್ಲಿ ತೊಡಗಿಸಿಕೊಂಡರು. ಸಿಪಿಐ(ಎಂ) ನ ಅಂದಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪಿ. ರಾಮಚಂದ್ರರಾವ್ ಅವರ ಸಲಹೆ ಮೇರೆಗೆ ಬಸವರಾಜ ಅವರು ರೈತ ಸಂಘದ ಪೂರ್ಣಾವಧಿ ಕಾರ್ಯಕರ್ತರಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವರು.

1986ರ ಎಂಟನೇ ರಾಜ್ಯ ಸಮ್ಮೇಳನದ ನಂತರ ಕರ್ನಾಟಕ ಪ್ರಾಂತ ರೈತ ಸಂಘ (KPRS)ದ ರಾಜ್ಯ ಸಮಿತಿಯ ಭಾಗವಾಗಿದ್ದ ಬಸವರಾಜ ಅವರು ಮಾರುತಿ ಮಾನ್ಪಡೆ ಹಾಗೂ ಜಿ.ಸಿ. ಬಯ್ಯಾರೆಡ್ಡಿಯವರು ಅಧ್ಯಕ್ಷರಾಗಿದ್ದ ಎರಡು ಅವಧಿಯಲ್ಲೂ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಆ ನಂತರ ಹಿರಿಯ ಉಪಾಧ್ಯಕ್ಷರಾಗಿ ರೈತ ಚಳವಳಿಯಲ್ಲಿ ಪೂರ್ಣಾವಧಿಯಾಗಿ ತೊಡಗಿಸಿಕೊಂಡಿದ್ದಾರೆ.

ಮಹಿಳೆಯರು, ದಲಿತರು, ದೇವದಾಸಿ ಮಹಿಳೆಯರು, ಸ್ಮಶಾನ ಕಾರ್ಮಿಕರು ಮುಂತಾದ ದಮನಿತ ವಿಭಾಗಗಳ ಕಲ್ಯಾಣ ಹಾಗೂ ಶ್ರೇಯೊಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತಿರುವ ಸಂಗಾತಿ ಯು. ಬಸವರಾಜ ರವರು ಅಧ್ಯಕ್ಷರಾಗಿ ಆಯ್ಕೆಯಾಗಿರುವುದು, ರೈತ ಚಳವಳಿ ಮತ್ತಷ್ಟು ಹೆಚ್ಚು ಹೆಚ್ಚು ಸಾಮಾಜಿಕ ಪ್ರಶ್ನೆಗಳ ಆಧಾರದಲ್ಲಿ ಹೆಚ್ಚು ಹೆಚ್ಚು ಸಂಘರ್ಷ ನಡೆಸಲು ಪ್ರೇರಣೆ ಆಗಲಿದೆ.

ಇದೇ ಸಂದರ್ಭದಲ್ಲಿ ರಾಜ್ಯ ಸಮಿತಿಯು ರಾಜ್ಯ ಪದಾಧಿಕಾರಿಗಳ ಸಮಿತಿಯನ್ನು ಪುನರ್ರಚಿಸಿದ್ದು

ನೂತನ ಪದಾಧಿಕಾರಿಗಳ ಸಮಿತಿ ಈ ಕೆಳಕಂಡಂತೆ ಇದೆ.

ಅಧ್ಯಕ್ಷರು -ಯು ಬಸವರಾಜ

ಪ್ರಧಾನ ಕಾರ್ಯದರ್ಶಿ-ಟಿ. ಯಶವಂತ.

ಉಪಾಧ್ಯಕ್ಷರಾಗಿ ಬಿ.ಎಸ್. ಸೊಪ್ಪಿನ್,

ಶಾಂತರಾಮ ಎಸ್. ನಾಯಕ,

ಪಿ.ಆರ್. ಸೂರ್ಯನಾರಾಯಣ,

ಎನ್. ವೆಂಕಟಾಚಲಯ್ಯ,

ಜಿ. ನಾಗರಾಜ, ಶರಣಬಸಪ್ಪ ಮಮಶೆಟ್ಟಿ.

ಜಂಟಿ ಕಾರ್ಯದರ್ಶಿಗಳಾಗಿ ಹೆಚ್.ಆರ್. ನವೀನ್ ಕುಮಾರ್ (ಹಣಕಾಸು ನಿರ್ವಹಣೆ), ಎನ್. ಎಲ್. ಭರತ್ ರಾಜ್, ಡಾ.ಸಾಯಬಣ್ಣಗುಡುಬಾ, ಚನ್ನಪ್ಪ ಆನೆಗುಂದಿ, ನರಸಣ್ಣ ನಾಯಕ ಹಾಗೂ ಎನ್. ಪ್ರಭಾ ಬೆಳವಂಗಲ ಆಯ್ಕೆಯಾಗಿದ್ದಾರೆ.

ನದಿಯ ಜೊತೆಗೆ ಜನರ ಬದುಕನ್ನು ನಾಶ ಮಾಡಲು ಹೊರಟ ಮರಳುಕಳ್ಳರ ಹೆಡೆಮುರಿ ಕಟ್ಟಲು ಜಿಲ್ಲಾಡಳಿತ ಸಂಪೂರ್ಣ ವಿಫಲ

ಸುನಿಲ್ ಕುಮಾರ್ ಬಜಾಲ್

ಕೊಟ್ಟಾರಿಕುದ್ರು ಗಟ್ಟಿಕುದ್ರು ದ್ವೀಪಗಳಲ್ಲಿ ಯಾವುದೇ ತರದ ಮರಳುಗಾರಿಕೆಗೆ ಅನುಮತಿ ಇಲ್ಲದಿದ್ದರೂ ಬಲಾಢ್ಯ ಮರಳು ಮಾಫಿಯಾ ಅಕ್ರಮವಾಗಿ ಮರಳುಗಾರಿಕೆ ವ್ಯಾಪಕವಾಗಿ ನಡೆಸುತ್ತಿರುವುದರಿಂದ ಉಭಯ ದ್ವೀಪಗಳು ಕೊಚ್ಚಿಹೋಗುವ ಭೀತಿಗೆ ಗುರಿಯಾಗಿದೆ. ಸುಮಾರು 40ರಷ್ಟು ಕುಟುಂಬಗಳು ಹಲವು ತಲೆಮಾರುಗಳಿಂದ ವಾಸ ಇರುವ, ಕಾಂಡ್ಲಾ ಜಾತಿಯ ಸಸ್ಯವರ್ಗಗಳಿರುವ ಪರಿಸರದ ದೃಷ್ಟಿಯಿಂದ ಅತಿ ಸೂಕ್ಷ್ಮವಾಗಿರುವ ಇಂತಹ ದ್ವೀಪಗಳನ್ನು ರಕ್ಷಿಸಲು ತಕ್ಷಣದಿಂದಲೇ ಕ್ರಮ ವಹಿಸಬೇಕಾಗಿದೆ. ಆದರೆ ಇಲ್ಲಿನ ಬಲಾಢ್ಯ ಮರಳು ಕಳ್ಳರು ನದಿಯ ಜೊತೆಗೆ ಜನತೆಯ ಬದುಕನ್ನು ಕೂಡ ನಾಶ ಮಾಡಲು ಹೊರಟಿದ್ದಾರೆ. ಈ ಬಗ್ಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಗೆ ಸಂಪೂರ್ಣ ಮಾಹಿತಿಯಿದ್ದರೂ ಮರಳು ಕಳ್ಳರ ಹೆಡೆಮುರಿ ಕಟ್ಟಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳರವರು ಆಕ್ರೋಶ ವ್ಯಕ್ತಪಡಿಸಿದರು. ಮಾರ್ಚ್ 4, 2025 ರಂದು ಮಂಗಳೂರು ನಗರದ ಮಲ್ಲಿಕಟ್ಟೆಯಲ್ಲಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಚೇರಿಯೆದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.



ಕೊಟ್ಟಾರಿಕುದ್ರು ಗಟ್ಟಿಕುದ್ರು ದ್ವೀಪಗಳ ಉಳಿಸಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಜರುಗಿದ ಪ್ರತಿಭಟನೆಯಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಪ್ರತಿಭಟನಾಕಾರರು ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶಭರಿತರಾಗಿ ಘೋಷಣೆಗಳನ್ನು ಕೂಗುತ್ತಾ ಆಗ್ನೆಸ್ ಜಂಕ್ಷನ್ ನಿಂದ ಮೆರವಣಿಗೆಯಲ್ಲಿ ಸಾಗಿದರು.

ಪ್ರತಿಭಟನೆಯನ್ನು ಬೆಂಬಲಿಸಿ ಮಾತನಾಡಿದ ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿಗಳೂ, ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ಅಧ್ಯಕ್ಷರಾದ ರೋಯ್ ಕ್ಯಾಸ್ತಲಿನೋರವರು ಮಾತನಾಡಿ, ಕೊಟ್ಟಾರಿಕುದ್ರು ಗಟ್ಟಿಕುದ್ರು ದ್ವೀಪಗಳು ಪರಿಸರದ ದೃಷ್ಟಿಯಿಂದ ಅತಿ ಸೂಕ್ಷ್ಮ ಪ್ರದೇಶವಾಗಿದೆ. ಆದರೂ ಇಲ್ಲಿ ಕಳೆದ ಹಲವು ವರ್ಷಗಳಿಂದ ಪೊಲೀಸ್ ಹಾಗೂ ವಿವಿಧ ಇಲಾಖೆಗಳು, ರಾಜಕೀಯ ಹಿತಾಸಕ್ತಿಗಳ ಬೆಂಬಲದೊಂದಿಗೆ ವ್ಯಾಪಕ ಪ್ರಮಾಣದಲ್ಲಿ ಅಕ್ರಮ ಮರಳುಗಾರಿಕೆ ರಾಜಾರೋಷವಾಗಿ ನಡೆಯುತ್ತಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹೋರಾಟ ಸಮಿತಿಯ ಗೌರವ ಸಲಹೆಗಾರರಾದ ಸುನಿಲ್ ಕುಮಾರ್ ಬಜಾಲ್ ರವರು ದ್ವೀಪವಾಸಿಗಳ ಸಂಕಷ್ಟಗಳನ್ನು ಎಳೆಎಳೆಯಾಗಿ ವಿವರಿಸುತ್ತಾ, ಈ ಹಿಂದಿನ ಜಿಲ್ಲಾಧಿಕಾರಿಗಳು ಸ್ಕ್ಯಾಟ್ಸ್ ಎಂಬ ನಾಮ ಫಲಕವನ್ನು ಕೂಡ ಕೊಟ್ಟಾರಿಕುದ್ರುನಲ್ಲಿ ಸ್ಥಾಪಿಸಿರುತ್ತಾರೆ. ಆದರೆ ಇಲ್ಲಿನ ಮರಳು ಕಳ್ಳರು ಆ ನಾಮಫಲಕವನ್ನೇ ಕಿತ್ತೊಗೆದು ಅಕ್ರಮ ಮರಳುಗಾರಿಕೆಯನ್ನು ನಡೆಸುವುದಲ್ಲದೆ, ವಿರೋಧ ವ್ಯಕ್ತಪಡಿಸುವ ಸ್ಥಳೀಯರಿಗೆ ಜೀವ ಬೆದರಿಕೆ ಒಡ್ಡುವ ಮೂಲಕ ಕುದ್ರುವಿನಿಂದಲೇ ಒದ್ದೋಡಿಸುವ ಷಡ್ಯಂತ್ರವನ್ನು ನಡೆಸುತ್ತಿದ್ದಾರೆ ಎಂದು ಹೇಳಿದರು.

ಬಳಿಕ ಹೋರಾಟ ಸಮಿತಿಯ ಉನ್ನತ ಮಟ್ಟದ ನಿಯೋಗವೊಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನು ಭೇಟಿಯಾಗಿ ಮನವಿಯನ್ನು ಅರ್ಪಿಸಿತು. ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯ ಪರಿಹಾರಕ್ಕಾಗಿ ಕೂಡಲೇ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಸಂಪಾದಕರಾಗಿ ಕೆ.ನೀಲಾ, ಕಾರ್ಯನಿರತ ಸಂಪಾದಕರಾಗಿ ಎಸ್.ವೈ.ಗುರುಶಾಂತ್ ಆಯ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆಯ ಸಂಪಾದಕರಾಗಿ ಕಾಂ.ಕೆ. ನೀಲಾ ಮತ್ತು ಕಾರ್ಯನಿರತ ಸಂಪಾದಕರಾಗಿ ಕಾಂ.ಎಸ್.ವೈ.ಗುರುಶಾಂತ್ ರವರನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯು ಆಯ್ಕೆ ಮಾಡಿದೆ.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಸಂಪಾದಕ ಮಂಡಳಿಯಾಗಿ ಇರುತ್ತದೆ.

ಜಗತ್ಪ್ರಸಿದ್ಧ ಕಮ್ಯುನಿಸ್ಟ್ ಪ್ರಣಾಳಿಕೆ ಇಂದಿಗೂ ಪ್ರಸ್ತುತ

ಪ್ರಪಂಚದಲ್ಲಿ ಅತೀ ಹೆಚ್ಚು ಮುದ್ರಿತವಾಗಿರುವ ಪುಸ್ತಕಗಳ ಪೈಕಿ ಕಮ್ಯುನಿಸ್ಟ್ ಪ್ರಣಾಳಿಕೆ ಮೂರನೆಯ ಸ್ಥಾನವನ್ನು ಹೊಂದಿದೆ. ಕಾರ್ಲ್ ಮಾರ್ಕ್ಸ್ ಹಾಗೂ ಎಂಗೆಲ್ಸ್ ರವರ ಕಮ್ಯುನಿಸ್ಟ್ ಪ್ರಣಾಳಿಕೆ ಸಮಾಜವನ್ನು ಅಮೂಲಾಗ್ರವಾಗಿ ಬದಲಾಯಿಸುವ ವೈಜ್ಞಾನಿಕ ಪುಸ್ತಕವಾಗಿದೆ. ಹಾಗೂ ಅದು ಪ್ರಕಟವಾದ ದಿನವಾದ 1848ರ ಫೆಬ್ರವರಿ 21 ನ್ನು ಅಂತರಾಷ್ಟ್ರೀಯ ಕೆಂಪು ಪುಸ್ತಕ ದಿನವನ್ನಾಗಿ ಆಚರಿಸಲಾಗುತ್ತಿದೆ. 177 ವರ್ಷಗಳ ಹಿಂದೆ ಪ್ರಕಟವಾದ ಕಮ್ಯುನಿಸ್ಟ್ ಪ್ರಣಾಳಿಕೆಯು ಜ್ಯೋತಿಷ್ಯವೂ ಅಲ್ಲ, ಬ್ರಹ್ಮನ ಕಾಲಜ್ಞಾನವೂ ಅಲ್ಲ. ಅದು ಭವಿಷ್ಯದ ಸೂಚಕವಾಗಿದ್ದು, ಅದರಲ್ಲಿರುವ ಪ್ರತಿಯೊಂದು ಅಂಶಗಳೂ ಇಂದಿಗೂ ಪ್ರಸ್ತುತವಾಗಿದೆ ಎಂದು ಸಿಪಿಐ(ಎಂ) ದ.ಕ.ಜಿ.ಕಾ.ಮಂಡಳಿ ಸದಸ್ಯರಾದ ಸುಕುಮಾರ್ ತೊಕ್ಕೋಟ್ಟುರವರು ಅಂತರಾಷ್ಟ್ರೀಯ ಕೆಂಪು ಪುಸ್ತಕ ದಿನಾಚರಣೆಯ ಅಂಗವಾಗಿ ಸಿಪಿಐ(ಎಂ) ತೊಕ್ಕೋಟ್ಟು ಕಚೇರಿಯಲ್ಲಿ ಜರುಗಿದ ಸಂವಾದ ಕಾರ್ಯಕ್ರಮದಲ್ಲಿ ವಿಚಾರವನ್ನು ಮಂಡಿಸುತ್ತಾ ಈ ಮಾತುಗಳನ್ನು ಹೇಳಿದರು.

ಪ್ರತಿಕ್ರಿಯೆ ನೀಡಿದ ಪ್ರಗತಿಪರ ಚಿಂತಕರಾದ ರಮೇಶ್ ಉಳ್ಳಾಲರವರು ಮಾತನಾಡಿ, ದುಡಿಯುವ ವರ್ಗದ ಕಲ್ಯಾಣ ರಾಜ್ಯ ಉದಯವಾಗುವುದು ಅನಿವಾರ್ಯ ಬೆಳವಣಿಗೆಯಾಗಿದೆ ಎಂದು ಮಾರ್ಕ್ಸ್ ಈ ಮೊದಲೇ ಹೇಳಿದ್ದು, ಅದಕ್ಕಾಗಿ ಬಂಡವಾಳದಾರರಿಗೆ ಕಾರ್ಲ್ ಮಾರ್ಕ್ಸ್, ಕಮ್ಯುನಿಸಂ, ದುಡಿಯುವ ವರ್ಗದ ಪ್ರಭುತ್ವ ಎಂದರೆ ಪರಮದ್ವೇಷ. ಅದಕ್ಕಾಗಿ ಈ ಬಂಡವಾಳದಾರರು ಜಾಗತಿಕ ಮಟ್ಟದಲ್ಲಿ ತನ್ನೆಲ್ಲ ಶಕ್ತಿಯನ್ನು ಕ್ರೋಢೀಕರಿಸಿ ಕಮ್ಯುನಿಸಂನ ವಿರುದ್ಧ ಭಾರೀ ಅಪಪ್ರಚಾರವನ್ನು ನಡೆಸುತ್ತಿದ್ದಾರೆ ಎಂದರು.



ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, ಕಮ್ಯುನಿಸ್ಟ್ ಪ್ರಣಾಳಿಕೆ ಕಮ್ಯುನಿಸ್ಟರಿಗೆ ಮಾತ್ರ ಒಂದು ದಾಖಲೆಯಲ್ಲ, ಬದಲಾವಣೆಯನ್ನು ಬಯಸುವ ಎಲ್ಲರಿಗೂ ಆಶಾದಾಯಕವಾದ ಮಹಾಕಾವ್ಯವಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಿಂದ ಸೃಷ್ಟಿಯಾದ ಹಸಿವು ಬಡತನ ಅನಕ್ಷರತೆ ನಿರುದ್ಯೋಗ ಮುಂತಾದ ಅನಿಷ್ಟಗಳ ವಿರುದ್ಧದ ಅತ್ಯುತ್ತಮ ಔಷಧವಾಗಿದೆ ಈ ಕಮ್ಯುನಿಸ್ಟ್ ಪ್ರಣಾಳಿಕೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಹಿರಿಯ ಕಮ್ಯುನಿಸ್ಟ್ ನಾಯಕರಾದ ಕೃಷ್ಣಪ್ಪ ಸಾಲ್ಯಾನ್ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುನ್ನೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಮಹಾಬಲ ದೆಪ್ಪಲಿಮಾರ್, ಸಿಪಿಐ(ಎಂ) ಹಿರಿಯ ಮುಖಂಡರಾದ ಸುಂದರ ಕುಂಪಲ, ಯು.ಬಿ. ನಾರಾಯಣ, ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಸದಸ್ಯರಾದ ರೋಹಿದಾಸ್ ಭಟ್ನಗರ, ಜನಾರ್ದನ ಕುತ್ತಾರ್, ಪ್ರಮೋದಿನಿ ಕಲ್ಲಾಪು, ವಿಲಾಸಿನಿ, ಇಬ್ರಾಹಿಂ ಮದಕ ಮುಂತಾದವರಿದ್ದರು.

ಫ್ಯಾಶಿಸಂ ಮತ್ತು ನಿಯೋ ಫ್ಯಾಶಿಸ್ಟ್..... ಪುಟ 2 ರಿಂದ

ಅಪಾಯದ ಬಗ್ಗೆ ಒತ್ತಿ ಹೇಳುತ್ತದೆ.

ಆರೆಸ್ಸೆಸ್ ಫ್ಯಾಸಿಸ್ಟ್ ಸಿದ್ಧಾಂತವನ್ನು ಹೊಂದಿದೆ

ಭಾರತದಲ್ಲಿ 2014ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಫ್ಯಾಸಿಸಂ ಅಧಿಕಾರದಲ್ಲಿದೆ ಎಂದು ಭಾವಿಸುತ್ತಿರುವವರು, ಈ ರೀತಿ ವಾದಿಸುತ್ತಿರುವ ಹಲವು ಸಾಹಿತಿಗಳು, ಬುದ್ಧಿಜೀವಿಗಳು, ಎಡಪಂಥೀಯರು ಉಂಟು. ಅಂದಿನಿಂದಲೇ ಆಯಾ ಸಂದರ್ಭಗಳಲ್ಲಿ ಈ ಬಗ್ಗೆ ನಾನು ಮೇಲಿನ ವಿಷಯಗಳನ್ನು ಮಂಡಿಸಿದ್ದೇನೆ. ಅವುಗಳನ್ನು ಒಪ್ಪಿದವರು ಬಹಳ ಜನ ಇರುವಂತೆಯೇ, ಕೆಲವರು ಈ ವಿಶ್ಲೇಷಣೆಯನ್ನು ಕಿವಿಗೆ ಹಾಕಿಕೊಳ್ಳಲು, ಇವುಗಳ ಬಗ್ಗೆ ಚರ್ಚೆ, ಅಧ್ಯಯನ ಕೈಗೊಳ್ಳಲು ನಿರಾಕರಿಸಿ ತಮ್ಮ ಪೂರ್ವ ತೀರ್ಮಾನಗಳಿಗೇ ಅಂಟಿಕೊಂಡವರೂ ಉಂಟು. ಭಾರತದ ಇಂದಿನ ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಸ್ಥಿತಿಯನ್ನು ಮೇಲಿನ ಅಂತರರಾಷ್ಟ್ರೀಯ ಅನುಭವದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಿದರೆ ಹೊರಡುವ ಸಂಗತಿಗಳೇನು ?


ಮೋದಿಯ ಈ ಹನ್ನೆರಡು ವರ್ಷಗಳಿಗೂ ಮೊದಲೇ ಹಲವು ಪ್ರತಿಗಾಮಿ, ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಆಳುವ ಸರ್ಕಾರಗಳು ನಿಧಾನವಾಗಿ ಅಸ್ತಿತ್ವಕ್ಕೆ ತರಲಾರಂಭಿಸಿವೆ. ಮೋದಿಯ ಆರೆಸ್ಸೆಸ್– ಬಿಜೆಪಿ ಸರ್ಕಾರದ ಅಧಿಕಾರದಲ್ಲಿ ಇವು ಬಹಳ ವೇಗಗೊಂಡಿವೆ. ಆರೆಸ್ಸೆಸ್ ಸ್ಥಾಪನೆಯ ಮೊದಲ ದಶಕದಿಂದಲೇ ಫ್ಯಾಸಿಸ್ಟ್ ಸಿದ್ಧಾಂತವನ್ನು ಹೊಂದಿದೆ. 1939ರಲ್ಲಿ ಗೋಳ್ವಾಳ್ಕರ್ 'ವಿ ಆರ್ ಅವರ್ ನೇಷನ್ಹುಡ್' ಎಂಬ ಪುಸ್ತಕ ಬರೆದು ಈ ಫ್ಯಾಸಿಸ್ಟ್ ಚಿಂತನೆಯನ್ನು ಮತ್ತಷ್ಟು ವಿಸ್ತರಪಡಿಸಿದರು. ಆಗಿನಿಂದ ಅವರ ಗುರಿ, ಉದ್ದೇಶ, ಚಟುವಟಿಕೆ ಭಾರತದಲ್ಲಿ ಫ್ಯಾಸಿಸಂ ಸ್ಥಾಪಿಸುವುದೇ ಆಗಿದೆ. ಆದರೆ ಅದು ಹೆಚ್ಚು ಫಲಪ್ರದವಾಗತೊಡಗಿದ್ದು 80ರ ದಶಕದ ಮಧ್ಯ ಭಾಗದಿಂದ. ವಾಜಪೇಯಿ ಅಧಿಕಾರ ಮತ್ತೊಂದು ಹಂತ. ಈಗ ಮೋದಿ ಸರ್ಕಾರ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದುದು ಮತ್ತೆ ಹಲವು ಪಟ್ಟು ಹೆಚ್ಚಿನ ಹಂತ.

ಭಾರತದಲ್ಲಿ ಫ್ಯಾಸಿಸಂ ಅಧಿಕಾರದಲ್ಲಿದೆಯೇ?

ಮೋದಿ ಸರ್ಕಾರ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ನಂತರದ ಈ ಪ್ರಭುತ್ವದ ಹಲ ಹಲವು ಕ್ರಮಗಳು ಸರ್ಕಾರದ ಎಲ್ಲ ಅಂಗಗಳ ಮೇಲೆ ಹಿಡಿತ ಸ್ಥಾಪಿಸುವತ್ತ ನಡೆದಿವೆ, ಫ್ಯಾಸಿಸ್ಟ್ ದಾರಿಯಲ್ಲಿ ವೇಗವಾಗಿ ಸಾಗುತ್ತಿದೆ ಎಂಬುದೂ ನಿಜ. ಆರೆಸ್ಸೆಸ್, ಮೋದಿ, ಶಾ ಉದ್ದೇಶ ಫ್ಯಾಸಿಸಂ ಸ್ಥಾಪನೆ ಎಂಬುದು ನಿಜ ಎಂದ ಕೂಡಲೇ ಫ್ಯಾಸಿಸಂ ಅನ್ನು ಅದರ ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸಲು ಯಶಸ್ವಿಯಾಗಿದೆಯೇ?

ಆದರೆ, ಅದೇ ಸಮಯದಲ್ಲಿ ಮೋದಿ ಸರ್ಕಾರ ಪ್ರಜಾಪ್ರಭುತ್ವವನ್ನು ಸಂಪೂರ್ಣ ನಾಶಮಾಡಲು ಸಾಧ್ಯವಾಗಿದೆಯೇ? ರಾಜಕೀಯ ಪಕ್ಷಗಳ ವಿರುದ್ಧ ವಿಷ ಕಾರುತ್ತಿದೆ. ಆದರೆ ಬ್ಯಾನ್ ಮಾಡಲಾಗಿದೆಯೇ? ತಾನು ಮಾತ್ರ ಪ್ರಭುತ್ವ ಪಕ್ಷ ಆಗಿದೆಯೇ? ಚಳುವಳಿಗಳನ್ನು ಹತ್ತಿಕ್ಕಲು ಹಲ ಹಲವು ಪ್ರಯತ್ನ, ಕುತಂತ್ರ ನಡೆಸಿರಬಹುದು, ಆದರೆ ಚಳುವಳಿಗಳೇ ನಡೆಯದಂತೆ, ಆ ಸಂಘಟನೆಗಳೇ ಇಲ್ಲವಾಗಿಸುವಂತೆ ಮಾಡಲಾಗಿದೆಯೇ? ➚

ಅಲೆಮಾರಿ ಸಮುದಾಯದ ಯುವತಿಯರ ಸಾವು: ಅತ್ಯಾಚಾರದ ಕೊಲೆಯೋ?



ಲವಿತ್ರ ವಸ್ತ್ರದ

ಅಲೆಮಾರಿ ಸಮುದಾಯದ ಜನರು ತಮ್ಮನ್ನು ತಾವು ಅನೇಕ ಕಟ್ಟಳೆಗಳಲ್ಲಿ ಹಾಗೂ ಅನೇಕ ಆಯಾಮದ ಹೆದರಿಕೆಯನ್ನು ಮನದೊಳಗೆ ಹುದುಗಿಸಿಟ್ಟು ತಮ್ಮ ಜೀವನ ನಡೆಸುತ್ತಿದ್ದಾರೆ. ಊರಿಂದ ಊರಿಗೆ ಅಲೆಯುವ ಈ ಸಮುದಾಯಗಳಲ್ಲಿ ಅನೇಕ ಜನಾಂಗಗಳಿವೆ. ಪ್ರತಿಯೊಂದು ಜನಾಂಗಗಳು ತಮ್ಮದೇ ಆದ ಕೆಲಸಗಳನ್ನು ಮಾಡುತ್ತಾರೆ. ಕುರುಬ ಜನಾಂಗದವರು ಕುರಿ ಕಾಯುವ ಕೆಲಸ ಮಾಡಿದರೆ, ಹಾವಾಡಿಗರು ಹಾವಿನ ಆಟ ತೋರಿಸುತ್ತಾರೆ ಹೀಗೆ ಡೊಂಬರು, ಬುಡುಬುಡಿಕೆ, ಕೊಂಚರು ಎನ್ನುವಂತೆ ಅನೇಕ ಅಲೆಮಾರಿ ಸಮುದಾಯದವರು ಕರ್ನಾಟಕದ ಅನೇಕ ಭಾಗಗಳಲ್ಲಿ ನೆಲೆಸಿದ್ದಾರೆ.

ಇಂತಹದೇ ಒಂದು ಬುಡ್ಗಜಂಗಮ ಸಮುದಾಯವು ಯಾದಗಿರ ಜಿಲ್ಲೆಯ ಗುರಮಿಟಕಲ್ ನ ಇಂದಿರಾ ನಗರದಲ್ಲಿ ನೆಲೆಸಿದೆ. ಸರಿಸುಮಾರು 110 ರಷ್ಟು ಮನೆಗಳೆಂಬ ಗೂಡುಗಳಿವೆ. ಮನೆ ತುಂಬ ಚಿಂದಿ ಆಯ್ದು ತುಂಬಿಸಲು ಸಣ್ಣ ದೊಡ್ಡ ಚೀಲಗಳಿವೆ. ಅವೇ ಅವರ ಆದಾಯದ ಸಂಪನ್ಮೂಲ. ಏನೂ ಅಂದರೆ ಏನೂ ಸೌಲಭ್ಯಗಳಿಲ್ಲದ ಕೇರಿಯದು. ಅಕ್ಷರಗಳು ಅಪರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಭಾಷೆಯಂತೂ ಬಲು ಕಷ್ಟ. ತೆಲುಗು ಮತ್ತು ಚೂರುಪಾರು ಹಿಂದಿ ಬಿಟ್ಟರೆ ಮತ್ತೇನೂ ಬಾರದು. ಚಿಂದಿ, ಹಳೆ ಬಾಟಲಿ, ಪೇಪರು ಇತ್ಯಾದಿ ಆಯುವುದೇ ಪ್ರದಾನ ಕಾಯಕ. ಆದರೆ ಊರುಗಳಲ್ಲಿ ಎಲ್ಲೇ ಕಳ್ಳತನವಾದರೂ ಪೋಲಿಸ್ ಇಲಾಖೆ ಮತ್ತು ನಾಗರೀಕರೆನಿಸಿಕೊಂಡವರ ದಿಟ್ಟ ಇವರತ್ತಲೇ ತಿರುಗುವುದು. ಹೀಗಾಗಿ ಯಾವಾಗಲೂ ಭಯದಲ್ಲಿಯೇ ಇರುವ ಅಲೆಮಾರಿ ಸಮುದಾಯವಿದು. ಭಯ ಮತ್ತು ಹಿಂಜರಿಕೆ, ಇತರರೊಂದಿಗೆ ಬೆರೆಯದೆ ತಪ್ಪಿಸಿಕೊಂಡು ತಮ್ಮ ಲೋಕದಲ್ಲಿಯೇ ಮತ್ತೆ ಮತ್ತೆ ಮುಳುಗುವ ಪ್ರವೃತ್ತಿ ಇದೆ.

ಹೀಗಿದ್ದಾಗ 2025 ಫೆಬ್ರವರಿ 11 ರಂದು ನಡೆದ ಹೃದಯವಿದ್ರಾವಕ ಘಟನೆಯು ಎಲ್ಲರ ಮನದಲ್ಲಿ ಆತಂಕ, ದುಃಖ ಮೂಡಿಸಿದೆ. 15 ವರ್ಷದ ಬಾಲಕಿ ಹಾಗೂ 19 ವರ್ಷದ ಯುವತಿ, ಇವರಿಬ್ಬರ ಅನುಮಾನಾಸ್ಪದ ಸಾವು ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

ಅಲ್ಲಿನ ಸಾಮಾಜಿಕ ಪರಿಸ್ಥಿತಿ ನೋಡಿದರೆ ಅಲ್ಲಿನ ಮಕ್ಕಳಿಗೆ ಎಂತಹ ಭವಿಷ್ಯ ಇದೆ ಎಂಬುದು ಆಘಾತಕಾರಿ ವಿಷಯ. ಇರುವ ಸ್ವಲ್ಪ ಜಾಗದಲ್ಲಿ ಕೋಳಿ, ಹಂದಿ ಕುರಿಗಳೊಂದಿಗೆ ಮಕ್ಕಳೂ ಬೆಳೆಯುತ್ತಿದ್ದಾರೆ. ಶಾಲೆಯ ಮುಖವೇ ನೋಡದ ಮಕ್ಕಳಿಗೆ ಭವಿಷ್ಯದ ಕನಸುಗಳೇ ಇಲ್ಲದಂತಾಗಿದೆ.

ಇಂತಹದೇ ಪ್ರದೇಶದಲ್ಲಿ ಬೆಳೆದ ಪ್ರತಿದಿನದಂತೆ ಎಲ್ಲರಿಗೂ ಚಿಂದಿ ಆಯಲು ಬಿಡುವಾಗ ಇವರಿಬ್ಬರಿಗೂ ನೀಲಹಳ್ಳಿಗೆ ಅಣ್ಣ ಬಿಟ್ಟು ಹೋಗಿದ್ದಾನೆ. ಕೆಲಸ ಮುಗಿದ ಮೇಲೆ ಮನೆಗೆ ವಾಪಸ್ಸಾಗುವ ಸಂದರ್ಭದಲ್ಲಿ ಅವರು ಸಿಗಲಿಲ್ಲ. ಅವರಿಗಾಗಿ ಸ್ವಲ್ಪ ಹೊತ್ತು ಕಾದು, ಹುಡುಕಾಟ ಪ್ರಾರಂಭಿಸಿದಾಗ ಅವರ ಚಪ್ಪಲಿಗಳು ಹಾಗೂ ಚಿಂದಿ ಆಯಲು ತೆಗೆದುಕೊಂಡು ಹೋದ ಚೀಲಗಳು ಕೆರೆಯ ದಂಡೆಯ ಮೇಲೆ ಸಿಕ್ಕವು. ರಾತ್ರಿ ಹೊತ್ತಿನವರೆಗೂ ನಡೆದ ಈ ಹುಡುಕಾಟದಲ್ಲಿ ನೀಲಹಳ್ಳಿಯ ನಿವಾಸಿಗಳಾದವರೊಬ್ಬರು ಅವರು ಯಾರೊಂದಿಗೋ ಬೈಕ್ ನಲ್ಲಿ ಹೋಗಿದ್ದಾರೆ ಎಂದು ಹೇಳಿದ್ದಾರೆ. ಮತ್ತೆ ಮರುದಿನ ಮನೆಯವರು ಹುಡುಕಲು ಅದೇ ನೀಲಹಳ್ಳಿಗೆ ಹೋದಾಗ ಇಬ್ಬರೂ ಅದೇ ಕೆರೆಯಲ್ಲಿ ಶವವಾಗಿ ತೇಲುತ್ತಿದ್ದರು. ಇದನ್ನು ನೋಡಿದ ಮನೆಯವರ ಆಕ್ರಂದನ ಮುಗಿಲು ಮುಟ್ಟಿತ್ತು.



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕೆ.ನೀಲಾ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ರಾಜ್ಯ ಅಧ್ಯಕ್ಷರಾದ ಲವಿತ್ರ ವಸ್ತ್ರದ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಚನ್ನಪ್ಪ ಆನೆಗುಂದಿ ಅವರೊಂದಿಗೆ ಡಿ.ವೈ. ಎಫ್.ಐ ನ ಪ್ರಿಯಾಂಕ ಮಾವಿನಕರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಮನೆಯವರೊಂದಿಗೆ ನಿಜ ಸ್ಥಿತಿ ಅರಿತು ಸಾಂತ್ವನ ಹೇಳಿದರು. ಭೇಟಿಯಾದ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳು ಎದುರಾಗಿವೆ.

ಅನುಮಾನಾಸ್ಪದ ರೀತಿಯಲ್ಲಿ ಶವಗಳಾಗಿ ಪತ್ತೆಯಾಗಿರುವ ಇಬ್ಬರು ಹುಡುಗಿಯರ ಈ ಪ್ರಕರಣ ಕೂಲಂಕುಷವಾಗಿ ತನಿಖೆಯಾಗಬೇಕು ಮತ್ತು ಸತ್ಯಾಂಶವನ್ನು ಪತ್ತೆ ಹಚ್ಚಬೇಕು. ಪೊಲೀಸ್ ಅವರು ಡಿಸಿಆರ್ ನಲ್ಲಿ ಯುವತಿ ನೀರಿನಲ್ಲಿ ಕೈಕಾಲು ಮುಖ ತೊಳೆಯಲು ಹೋದಾಗ ಫಿಟ್ಸ್ ಬಂದು ಹೊರಬರಲು ಕಷ್ಟ ಪಡುತ್ತಿರುವಾಗ, 15 ವರ್ಷದ ಬಾಲಕಿ ಅವಳನ್ನು ರಕ್ಷಿಸಲು ಹೋಗಿ ಇವಳೂ ಸಹ ಕೆರೆಯಲ್ಲಿ ಮುಳಗಿದ್ದಾರೆ ಎಂದು ಬರೆದಿದ್ದಾರೆ. ಆದರೆ ಕುಟುಂಬದವರ ಪ್ರಕಾರ ಅವಳಿಗೆ ಫಿಟ್ಸ್ ಇರುವ ಯಾವ ಲಕ್ಷಣಗಳೂ ಇರಲಿಲ್ಲ. ಇದಲ್ಲದೇ ಯುವತಿಯರ ಮೈ ಮೇಲೆ ಅನೇಕ ಗಾಯಗಳು ಹಾಗೂ ಮೂಗಿನಿಂದ ರಕ್ತ ಬಂದಿರುವ ಫೋಟೋಗಳನ್ನು ತೋರಿಸಿದ್ದಾರೆ. ಇದನ್ನೆಲ್ಲ ನೋಡಿದರೆ ಇದೊಂದು ಸಹಜವಾಗಿ ನೀರಿನಲ್ಲಿ ಮುಳುಗಿ ಆದಂತಹ ಸಾವಲ್ಲ ಎಂಬುದು ಕಂಡುಬರುತ್ತದೆ.

ಹಾಗಾದರೆ ಅಮಾಯಕ ಬಾಲಕಿರ ಜೀವಕ್ಕೆ ಬೆಲೆಯೇ ಇಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಯುವತಿಯ ಅಣ್ಣ ‘ಇಂತಹ ಪ್ರಕರಣ ನಮ್ಮಲ್ಲಿ ಇದೇ ಮೊದಲು. ಹಿಂದೆಂದೂ ಈ ರೀತಿಯ ಘಟನೆಗಳು ಸಂಭವಿಸಿಲ್ಲ. ನನ್ನ ತಂಗಿಗೆ ನ್ಯಾಯ ಸಿಗಬೇಕು. ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು’ ಎಂದು ಶ್ಯಾಮಪ್ಪ ತನ್ನ ನೋವನ್ನು ಹೇಳಿಕೊಂಡರು.

ಪೊಲೀಸ್ ಇಲಾಖೆಯು ತನಿಖೆ ನಡೆಸಿ ಸತ್ಯ ಹೊರ ತರುವ ಧೋರಣೆ ಹೊಂದಬೇಕಿದೆ. ಯುವತಿಯರೊಂದಿಗೆ ಅತ್ಯಾಚಾರ ಮತ್ತು ಕೊಲೆ ನಡೆದಿಲ್ಲ ಎಂಬ ನಿರ್ಣಯ ಮಾಡಿಕೊಂಡಂತೆ ಕಂಡು ಬರುತ್ತಿದೆ. ಇದು ಪೂರ್ವಾಗ್ರಹ ಪೀಡಿತ ಧೋರಣೆಯಾಗುವುದು. ಕೆರೆಯಿಂದ ಶವಗಳು ತೆಗೆವಾಗಲೂ ಹೊತ್ತು ಮನೆಗೆ ತರುವಾಗಲೂ ಪೊಲೀಸರು ಇರಲಿಲ್ಲ. ಶವಗಳು ಅವರವರ ಮನೆಗೆ ತಂದಾದ ಮೇಲೆ ಸೈದಾಪುರ ಠಾಣೆಯ ಪೊಲೀಸರು ಬಂದು ಶವಗಳನ್ನು ಸರಕಾರಿ ದವಾಖಾನೆಗೆ ರವಾನಿಸಿದ್ದಾರೆ. ಆದರೆ ಇಲಾಖೆಯು ತಮ್ಮ ಸಿಬ್ಬಂದಿಗಳು ಮುಷ್ಠಿಯಲ್ಲಿ ಅಲ್ಲಿದ್ದರು ಎನ್ನುತ್ತದೆ. ಯುವತಿಯ ಪ್ರಿಯಕರ ಎನ್ನುವ ಒಬ್ಬ ಯುವಕನ ಮೇಲೆ ಜಾತಿ ನಿಂದನೆ ಕೇಸು ಹಾಕಿದ್ದು ಇಡೀ ಪ್ರಕರಣವನ್ನು ಡೈವರ್ಟ್ ಮಾಡುವ ತಂತ್ರದಂತೆ ಕಾಣಿಸುವುದು. ಜಾತಿ ಸಂಘಟನೆಗಳ ಭಿನ್ನ ಭಿನ್ನ ನಿಲುವುಗಳಿಂದ ಪೊಲೀಸ್ ಇಲಾಖೆ ಪೂರ್ವಾಗ್ರಹ ಪೀಡಿತ ಆಗಿದೆ ಅನಿಸುತ್ತದೆ. ಪರಿಹಾರ ಧನಕ್ಕಾಗಿ ಕೊಲೆ ಅತ್ಯಾಚಾರ ನಡೆದಿರಬಹುದೆಂದು ಪಾಲಕರು ಬಿಂಬಿಸುತ್ತಿದ್ದಾರೆ ಎಂಬ ತಪ್ಪು ನಿಲುವು ಇಲಾಖೆ ಹೊಂದಿದಂತೆ ತೋರುತ್ತಿದೆ.

ಯಾದಗಿರಿ ಜಿಲ್ಲೆಯ ಸರಕಾರಿ ಆಸ್ಪತ್ರೆಯಲ್ಲಿ ಪೋಸ್ಟ್ ಮಾರ್ಟಮ್ ಆಗಿದೆ. ಇನ್ನೂ ಫಾರೆನ್ಸಿಕ್ ವರದಿ ಬರಬೇಕಿದೆ.

ಜಾತಿ ಹೆಸರನ್ನು ಹೇಳಿಕೊಂಡು ಬರುವ ಕೆಲವು ಸಂಘಟನೆಗಳು ಈ ಪ್ರಕರಣವನ್ನು ಲಾಭಕ್ಕಾಗಿ ಬಳಸಿಕೊಳ್ಳದೇ ಹೆಣ್ಣುಮಕ್ಕಳಿಗೆ ನ್ಯಾಯ ಒದಗಿಸುವತ್ತ, ಸತ್ಯ ಹೊರ ಬರುವತ್ತ ಹೋರಾಟ ಮಾಡಬೇಕಿದೆ. ಸೈದಾಪುರ ಠಾಣೆಯ ಪೊಲೀಸ್ ಸಿಬ್ಬಂದಿಗಳು ಸತ್ಯ ಹೊರತರುವತ್ತ ಕಾರ್ಯಾಚರಣೆ ಮಾಡಬೇಕು.

ಅಲ್ಲಿಯ ಜನರಸ್ಥಿತಿ ಧಾರುಣ ಇದೆ. ಅಲ್ಲಿನ ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಅವರ ಸರ್ವಾಂಗೀಣ ಪ್ರಗತಿಗೆ ನಾಗರಿಕ ಸಮಾಜದತ್ತಲ್ಲಿ ಸಮಾನತೆಯಿಂದ ಘನತೆಯ ಬದುಕನ್ನು ಕಟ್ಟಿಕೊಳ್ಳಲು ಸರ್ಕಾರ, ಸಮಾಜ ಕ್ರಮ ವಹಿಸಬೇಕು. ಇವರೆಲ್ಲರೂ ತಮ್ಮ ಹೆಜ್ಜೆಗಳನ್ನು ಪ್ರಗತಿಯತ್ತ ಇಡುವಂತೆ ಮಾಡಬೇಕು.

ಪ್ರತಿಭಟನೆ

ಈ ಪ್ರಕರಣದ ಸತ್ಯಾ ಸತ್ಯತೆ ಹೊರ ಬರಬೇಕು, ಆಳವಾದ ತನಿಖೆ ನಡೆದು ಭಾಗಿಯಾದವರ ಮೇಲೆ ಕಠಿಣ ಕ್ರಮ ಕೈಗೊಳ್ಳ ಬೇಕು, ಈ ಸಮುದಾಯದವರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿ ಡಿ.ವೈ. ಎಫ್.ಐ. ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಹೋರಾಟ ಮುಂದುವರಿದಿದೆ.

ಚಳುವಳಿಗಳು ತೀರ್ವಗೊಳ್ಳುತ್ತಿರುವ ಹಲವು ಉದಾಹರಣೆಗಳಿಲ್ಲವೇ? ಇವೆಲ್ಲವುಗಳ ಪರಿಣಾಮವಾಗಿ ಮತ್ತೆ ಬಿಜೆಪಿ ಬಹುಮತ ಕಳೆದುಕೊಳ್ಳುವಂತೆ ಆಗಿದೆಯಲ್ಲವೇ? ಕೆಲವು ರಾಜ್ಯಗಳಲ್ಲಿ ಸೋಲೊಪ್ಪುವಂತಾಗಿಲ್ಲವೇ? ಹೀಗೆ ಹಲ ಹಲವು ಅಂಶಗಳನ್ನು ಪರಿಗಣಿಸಬೇಕು.

ಅದಕ್ಕೆ ಬದಲು ಈಗಾಗಲೇ ಫ್ಯಾಸಿಸಂ ಅಧಿಕಾರಕ್ಕೆ ಬಂದಿದೆ ಎಂದು ತೀರ್ಮಾನಿಸಿದರೆ, ಇನ್ನೂ ಉಳಿದಿರುವ ಪ್ರಜಾಪ್ರಭುತ್ವದ ಹಕ್ಕುಗಳು, ಸಂಸ್ಥೆಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಇರುವ ಅವಕಾಶಗಳನ್ನು ನಿರಾಕರಿಸಬೇಕೆ?

ಫ್ಯಾಸಿಸಂ ಸ್ಥಾಪನೆಯಾಗಿದೆ, ಪ್ರಜಾಪ್ರಭುತ್ವದ ಅವಕಾಶಗಳು ಯಾವುದೂ ಇಲ್ಲ ಎಂದು ಭಾವಿಸಿದರೆ ಆಗ ತಕ್ಷಣದಿಂದ ಎಲ್ಲ ಪ್ರಜಾಪ್ರಭುತ್ವ ಪಕ್ಷ, ಶಕ್ತಿಗಳು, ಚಳುವಳಿಗಳು ಭೂಗತವಾಗಿ ಕೆಲಸ ಮಾಡಬೇಕೆ? ಜನರಲ್ಲಿ ಕೋಮುವಾದ, ಫ್ಯಾಸಿಸಂ, ಆರ್ಥಿಕ ನೀತಿಗಳ ಬಗ್ಗೆ ಅರಿವು ಮೂಡಿಸಲು ಇರುವ ಒಂದಷ್ಟು ಅವಕಾಶಗಳನ್ನು ಕೈ ಬಿಡಬೇಕೇ?

ಹೀಗೆ ಹಲವು ಪ್ರಶ್ನೆಗಳನ್ನು ನಾವು ಕೇಳಿಕೊಂಡು ಪಡೆಯುವ ಉತ್ತರವೇ ಫ್ಯಾಸಿಸಂ ಸ್ಥಾಪನೆಯ ಯಾವ ಪೂರ್ವಭಾವಿ ಹಂತದಲ್ಲಿದ್ದೇವೆ ಎಂಬುದಕ್ಕೆ ಉತ್ತರ ಸಿಗುತ್ತದೆ. ಫ್ಯಾಸಿಸಂ ಸಂಪೂರ್ಣ ಸ್ಥಾಪನೆಯಾಗದಿರಲು ಅವಶ್ಯ ಕಾರ್ಯತಂತ್ರ ರೂಪಿಸಲು ಸಹಾಯಕವಾಗುತ್ತದೆ. ಪ್ರಬಲ ಪ್ರಜಾಸತ್ತಾತ್ಮಕ ಚಳುವಳಿ ರೂಪಿಸೋಣ. ಫ್ಯಾಸಿಸಂ ಸಂಪೂರ್ಣ ಸ್ಥಾಪನೆಯಾಗುವುದನ್ನು ತಡೆಗಟ್ಟುವುದರಲ್ಲಿ ಯಶಸ್ವಿಯಾಗೋಣ

ಹಸಿರು ಉಸಿರಿನ ನಡುವೆ ಅಕ್ಷರ ಬಿತ್ತಿದ–ನಿರಂಜನ

ನಾ ದಿವಾಕರ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯದಿಂದ ಸತ್ಯೋತ್ತರ ಯುಗದ ದಲಿತ–ಬಂಡಾಯ ಸಾಹಿತ್ಯದವರೆಗಿನ ಅಕ್ಷರ ಕೃಷಿಯನ್ನು ಗಮನಿಸುವಾಗ ಒಂದು ಹೆಸರು ನೆನಪಾಗಲೇಬೇಕೆಂದರೆ ಅದು 'ನಿರಂಜನ' ಎಂದೇ ಗುರುತಿಸಲ್ಪಡುವ ಕುಳಕುಂದ ಶಿವರಾಯರು. ಸ್ವಾತಂತ್ರ್ಯೋತ್ತರ ಭಾರತದ ಕನ್ನಡ ಸಾಹಿತ್ಯ ಲೋಕದಲ್ಲಿ ಆರಂಭದ ದಿನಗಳಿಂದಲೂ ವ್ಯವಸ್ಥಿತವಾಗಿ ರೂಪುಗೊಂಡಿರುವ 'ಸಾಹಿತ್ಯ ಕೂಟ'ದ ಒಂದು ಬೌದ್ಧಿಕ ಪರಂಪರೆಯಲ್ಲಿ ಸಾಹಿತ್ಯ ಪರಿಚಾರಕರೂ ಸಹ ತತ್ವ, ಸಿದ್ಧಾಂತ ಮತ್ತು ಸಾಮಾಜಿಕ ಅಸ್ಮಿತೆಗಳ ಚೌಕಟ್ಟಿನೊಳಗೆ ಬಂಧಿಸಲ್ಪಟ್ಟಿರುವುದನ್ನು ವಿಷಾದದಿಂದಲೇ ಗುರುತಿಸಬೇಕಿದೆ. ಕಳೆದ ಐದು ದಶಕಗಳಲ್ಲಿ ಜಾತಿ ಅಸ್ಮಿತೆಯೂ ಇದರ ಒಂದು ಭಾಗವಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

> **ಕನ್ನಡ ಸಾಹಿತ್ಯವನ್ನು ಜನಮುಖಿ ಮಾಡಿದ ಮೊದಲಿಗರಲ್ಲಿ 'ಚಿರಸ್ಮರಣೀಯ' ನಿರಂಜನ ಒಬ್ಬರು**

ಈ ಕೂಟ ವ್ಯವಸ್ಥೆಯ ಒಂದು ಭಾಗವಾಗಿಯೇ ಕನ್ನಡದ ವಿಮರ್ಶಾ ಲೋಕವೂ ಸಹ ತನ್ನದೇ ಆದ ಬೇಲಿಗಳನ್ನು ನಿರ್ಮಿಸಿಕೊಂಡಿರುವುದೂ ಸತ್ಯ. ನವೋದಯ, ನವ್ಯ, ಬಂಡಾಯ–ದಲಿತ ಇತ್ಯಾದಿಗಳ ವರ್ಗೀಕರಣದ ನಡುವೆ ಪ್ರಧಾನವಾಗಿ ಕೇಳಿಬರದ ಒಂದು ಸಾಹಿತ್ಯ ಪ್ರಕಾರ ಎಂದರೆ ಪ್ರಗತಿಶೀಲ ಸಾಹಿತ್ಯ. ಆದರೂ ಒಂದು ಚಳುವಳಿಯ ರೂಪದ ಪ್ರಗತಿಶೀಲ ಸಾಹಿತ್ಯ ಕೆಲವೇ ಸಾಹಿತಿಗಳ ಮೂಲಕ ಅಂದಿನ ಸಮಾಜದಲ್ಲಿನ ತಲ್ಲಣಗಳಿಗೆ, ಆತಂಕಗಳಿಗೆ ಸ್ಪಂದಿಸಿದ್ದನ್ನು ಮರೆಮಾಚಲಾಗುವುದಿಲ್ಲ. ಬಸವರಾಜ ಕಟ್ಟಿಮನಿ, ಅನಕೃ, ಚದುರಂತ, ಕುಮಾರ ವೆಂಕಣ್ಣ ಮುಂತಾದವರೊಡನೆ ಈ ಪ್ರಗತಿಶೀಲ ವಾತಾವರಣದಲ್ಲಿ ಪ್ರಧಾನವಾಗಿ ಕಾಣುವುದು ಕುಳಕುಂದ ಶಿವರಾಯರು, ಅಂದರೆ 'ನಿರಂಜನ'ರು.

ತಮ್ಮ 'ನಿರಂಜನ' ಕಾವ್ಯನಾಮದಿಂದಲೇ ಪ್ರಸಿದ್ಧರಾದ ಶಿವರಾಯರನ್ನು ಒಂದು ನಿರ್ದಿಷ್ಟ ಕಾಲಘಟ್ಟದ ಸಾಹಿತ್ಯಕ ಪ್ರಕಾರಕ್ಕೆ ಅಥವಾ ಚಳುವಳಿಗೆ ಕಟ್ಟಿಹಾಕುವುದು ತಪ್ಪಾಗುತ್ತದೆ. ಅಂದಿನ ಸನ್ನಿವೇಶದಲ್ಲಿ ಸಮತಾವಾದ ಅಥವಾ ಮಾರ್ಕ್ಸ್‌ವಾದದ ಚಿಂತನೆಗಳಿಗೆ ಮುಕ್ತವಾಗಿ ತೆರೆದುಕೊಂಡಿದ್ದೇ ಅಲ್ಲದೆ, ಅದೇ ಸೈದ್ಧಾಂತಿಕ ಚೌಕಟ್ಟಿನೊಳಗೆ ಭಾರತದ ಸಮಸ್ತ ಶ್ರಮಜೀವಿ ವರ್ಗಗಳತ್ತ ನೋಡುವ ಒಂದು ಸಾಹಿತ್ಯಕ ದೃಷ್ಟಿಕೋನವನ್ನು ಬೆಳೆಸಿದವರಲ್ಲಿ ನಿರಂಜನ ಮುಂಚೂಣಿಯಲ್ಲಿ ಕಾಣುತ್ತಾರೆ. ಬಸವರಾಜ ಕಟ್ಟಿಮನಿ ನಗರ ಕೇಂದ್ರಿತ ಶ್ರಮಿಕರತ್ತ ಗಮನಹರಿಸಿದಂತೆ ನಿರಂಜನ ಹಳ್ಳಿಗಾಡಿನ ರೈತ ಬಾಂಧವರೆಡೆಗೆ ತಮ್ಮ ಅಕ್ಷರ ಕೃಷಿಯನ್ನು ಕೊಂಡೊಯ್ಯುತ್ತಾರೆ. ಸ್ವಾತಂತ್ರ್ಯ ಸಂಗ್ರಾಮವನ್ನು ಮತ್ತು ತದನಂತರದ ಸಮಾಜವನ್ನು ತಳಸಮಾಜದ ನಡುವೆ ನಿಂತು ನೋಡುವ ಒಂದು ಚಿಂತನಾ ಕ್ರಮವನ್ನು ನಿರಂಜನರ ಸಾಹಿತ್ಯದಲ್ಲಿ ಗುರುತಿಸಬಹುದು.

ಸೃಜನಶೀಲ ಕ್ರಾಂತಿಯ ದನಿ

ತಮ್ಮ ಸಾಹಿತ್ಯಕ ಸೃಜನಶೀಲತೆಯನ್ನು ಸಮಾಜಮುಖಿಯಾಗಿಸುತ್ತಲೇ 13ನೇ ವಯಸ್ಸಿನಿಂದಲೇ ಅಕ್ಷರ ಕೃಷಿಯನ್ನು ಆರಂಭಿಸಿದ ನಿರಂಜನರ ಸಾಹಿತ್ಯಕ ವೈವಿಧ್ಯತೆ ಅಪಾರ. ಅನುವಾದ, ಕಥೆ, ಕಾದಂಬರಿ, ಚಾರಿತ್ರಿಕ ಕಥನ, ವಿಶ್ವಕೋಶ, ಸಂಪಾದನೆ ಹೀಗೆ ವಿಸ್ತರಿಸಿಕೊಳ್ಳುವ ನಿರಂಜನರು ಸಾಮಾನ್ಯವಾಗಿ ನೆನಪಾಗುವುದು ಅವರ ಚಿರಸ್ಮರಣೆ ಮತ್ತು ಮೃತ್ಯುಂಜಯ ಕಾದಂಬರಿಗಳಿಂದ. ಮಾಕ್ಸಿಂ ಗೋರ್ಕಿ ಅವರ ಮದರ್ ಕಾದಂಬರಿಯನ್ನು ಕನ್ನಡಕ್ಕೆ 'ತಾಯಿ' ಹೆಸರಿನಲ್ಲಿ ಹೊರತಂದ ನಿರಂಜನರಿಗೆ ಸಮತಾವಾದ ಕೇವಲ ಬೌದ್ಧಿಕ ವಾಹಿನಿಯಾಗಿರಲಿಲ್ಲ. ಅದು ಭಾರತದ ಜನಸಾಮಾನ್ಯರ ನಿತ್ಯಬದುಕಿನಲ್ಲಿ ಕಾಣಬೇಕಾದ ಒಂದು ದರ್ಶನದಂತೆ ಭಾವಿಸಿದ್ದರು. ಈ ಕಾರಣಕ್ಕಾಗಿಯೇ ಅವರ ಕೃತಿಗಳಲ್ಲಿ ತಳಸಮುದಾಯಗಳ ಬದುಕು, ಸ್ವಾತಂತ್ರ್ಯ ಹೋರಾಟದ ವಿಭಿನ್ನ ಜನಾಂದೋಲನಗಳು, ಗ್ರಾಮೀಣ ಭಾರತದ ರೈತಾಪಿಯ ಜೀವನ ಇವೆಲ್ಲವೂ ಮೇಳೈಸುತ್ತವೆ. ಕನ್ನಡದ ವಿಮರ್ಶಾ ಲೋಕದ ಕಾಣ್ಕೆಗೆ ಗೋಚರಿಸದ ನಿರಂಜನರ ಸಾಹಿತ್ಯವನ್ನು ಭವಿಷ್ಯದ ತಲೆಮಾರಿಗಾದರೂ ದಾಟಿಸುವ ಗುರುತರ ಜವಾಬ್ದಾರಿ ವರ್ತಮಾನದ ಜವಾಬ್ದಾರಿ ಎನ್ನುವುದು ಸತ್ಯ.

ನಿರಂಜನರು ರಚಿಸಿದ ಈಜಿಪ್ಟ್ ಕ್ರಾಂತಿಯ ಸುತ್ತ ಹೆಣೆದ ಮೃತ್ಯುಂಜಯ, ಕಯ್ಯೂರು ಹುತಾತ್ಮರ ವೀರೋಚಿತ ಹೋರಾಟವನ್ನು ದಾಖಲಿಸುವ ಚಿರಸ್ಮರಣೆ, ಅಮರಸುಳ್ಯ ದಂಗೆಯ ವಿಭಿನ್ನ ಆಯಾಮಗಳನ್ನು ತೆರೆದಿಡುವ ಸ್ವಾಮಿ ಅಪರಂಪಾರ ಮತ್ತು ಕಲ್ಯಾಣ ಸ್ವಾಮಿ ಈ ಕೃತಿಗಳು ಸಾರ್ವಕಾಲಿಕ ಶ್ರೇಷ್ಠತೆಯನ್ನು ಹೊಂದಿದ್ದರೂ, ಇವುಗಳನ್ನು ವಿಮರ್ಶಾತ್ಮಕವಾಗಿ ನೋಡಿ, ವರ್ತಮಾನದ ಸಾಹಿತ್ಯ ಜಗತ್ತಿನಲ್ಲಿ ಚರ್ಚೆಗೊಳಪಡಿಸುವ ಕೆಲಸಗಳು ಆಗಬೇಕಿವೆ. ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎನ್ನುವುದು ವಾಸ್ತವ. ರೈತ ಚಳುವಳಿಗಳನ್ನು ಈಗಲೂ ವಕ್ರದೃಷ್ಟಿಯಿಂದಲೇ ನೋಡುವ ಭಾರತದ ರಾಜಕೀಯ ಚಿಂತನೆಗಳ ನಡುವೆ, ಸ್ವಾತಂತ್ರ್ಯಪೂರ್ವದ ತೆಲಂಗಾಣ, ತೇಭಾಗದಿಂದ ಸ್ವಾತಂತ್ರ್ಯೋತ್ತರದ ರೈತ ಹೋರಾಟಗಳವರೆಗೂ ತಮ್ಮ ಒಳನೋಟಗಳನ್ನು ಸಾಹಿತ್ಯಕ ನೆಲೆಯಲ್ಲಿ ಬಿಟ್ಟುಹೋಗಿರುವುದು ನಿರಂಜನರ ಕ್ರಾಂತಿಕಾರಕ, ಜನಮುಖಿ ಚಹರೆಯನ್ನು ನಮಗೆ ಪರಿಚಯಿಸುತ್ತದೆ.

ಒಂದು ದಾಖಲಾರ್ಹ ಕೃತಿಯ ಮೂಲಕ

ಈ ದೃಷ್ಟಿಯಿಂದಲೇ ಸಮಕಾಲೀನ ರೈತ ಹೋರಾಟಗಳಲ್ಲಿ ಸಕ್ರಿಯವಾಗಿರುವ ಹಾಸನದ ಎಚ್.ಆರ್. ನವೀನ್ ಕುಮಾರ್ ಅವರು ತಮ್ಮ 'ಕದನ ಕಣ'ದ ಮುಂದುವರಿಕೆಯಾಗಿ, ಕರ್ನಾಟಕದ ಅನ್ನದ ಕಣದಲ್ಲಿ ನಿರಂಜನ ಅವರ 'ರೈತ ಮುಖಿ' ಸಾಹಿತ್ಯವನ್ನು ಪರಿಚಯಿಸುವ ಮಹತ್ತರ ಪ್ರಯತ್ನವನ್ನು ಮಾಡಿದ್ದಾರೆ. ನಿರಂಜನರು ಪ್ರತಿನಿಧಿಸಿದ್ದ 'ಪ್ರಗತಿಶೀಲ' ಎಂಬ ಸಾಹಿತ್ಯ ಪ್ರಕಾರದೊಳಗೇ ಅವರಲ್ಲಿದ್ದ ರೈತಪರ ಕಾಳಜಿ ಮತ್ತು ರೈತರ ಬದುಕಿನ ಒಳಸುಳಿಗಳನ್ನು ನಿರಂಜನರ ಕಥೆಗಳು ಹೇಗೆ, ವಿಭಿನ್ನ ಆಯಾಮಗಳಲ್ಲಿ ಬಿಂಬಿಸುತ್ತವೆ ಎನ್ನುವುದನ್ನು ಹೊರತೆಗೆಯಲು ನವೀನ್ ಕುಮಾರ್ ಪ್ರಯತ್ನಿಸಿದ್ದಾರೆ. ನವ ಉದಾರವಾದಿ ಆರ್ಥಿಕತೆಯಲ್ಲಿ ಭಾರತೀಯ ರೈತರು ಆಳ್ವಿಕೆಯೊಡನೆ ನಿರಂತರ ಸಂಘರ್ಷದಲ್ಲಿರುವ ಈ ಹೊತ್ತಿನಲ್ಲಿ, ನಿರಂಜನರ ಕಥೆಗಳಲ್ಲಿನ ಒಳನೋಟಗಳನ್ನು ವರ್ತಮಾನದಲ್ಲಿಟ್ಟು ನೋಡುವುದು ಅಗತ್ಯವೂ ಹೌದು.

ಈ ನೆಲೆಯಲ್ಲಿ ನವೀನ್ ಕುಮಾರ್ ಅವರ ಪ್ರಯತ್ನ ಶ್ಲಾಘನೀಯ–ಸ್ವಾಗತಾರ್ಹ. ಸುಮಾರು 150 ಪುಟಗಳ ಪುಟ್ಟ ಕೃತಿಯೊಳಗೆ ನಿರಂಜನರ ಕಥೆಗಳಲ್ಲಿ ಬರುವ ರೈತಾಪಿಯ ಬದುಕು, ವ್ಯಕ್ತಿತ್ವ ಹಾಗೂ ಸಾಮಾಜಿಕ–ಆರ್ಥಿಕ ಪರಿಸರವನ್ನು ಪರಿಚಯಿಸುವ ಕೆಲಸವನ್ನು ನವೀನ್ ಮಾಡಿದ್ದಾರೆ. ಈ ವೇಳೆಗಾಗಲೇ ವಿಮರ್ಶೆಗೊಳಗಾಗಬೇಕಾಗಿದ್ದ ಈ ಕಥೆಗಳನ್ನು ಮರು ಓದಿಗೆ ಒಪ್ಪಿಸುವ ಮೂಲಕ ನವೀನ್ ಕುಮಾರ್, ನಿರಂಜನರ ಸೈದ್ಧಾಂತಿಕ ಚಿಂತನಾಧಾರೆಯನ್ನೂ ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. "ರೈತರಿಗಾಗಿ ನಿರಂಜನ ಯಾಕೆ" ಎಂಬ ಪ್ರವೇಶಿಕೆಯ ಮೂಲಕ ಆರಂಭಿಸುವ ನವೀನ್ ಕುಮಾರ್, ಈ ಅಧ್ಯಾಯದಲ್ಲೇ ನಿರಂಜನರ ಬಾಲ್ಯ ಮತ್ತು ಕಮ್ಯುನಿಸ್ಟ್ ಹೋರಾಟಗಳ ಹಿನ್ನೆಲೆ, ಭೂಗತ ಬದುಕು, ಅದರ ನಡುವೆ ನಡೆಸಿದ ಕೃಷಿ ಬೇಸಾಯ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅವರು ತೊಡಗಿಕೊಂಡ ಮಾರ್ಕ್ಸ್‌ವಾದಿ–



ಜನಪರ ಆಂದೋಲನಗಳು ಇವೆಲ್ಲವನ್ನೂ ಪರಿಚಯಿಸಿರುವುದು, ಸಾಹಿತ್ಯಾಸಕ್ತರಿಗೆ ಮತ್ತು ಅಧ್ಯಯನಶೀಲ ಸಂಶೋಧಕರಿಗೆ ನೆರವಾಗುವಂತಿದೆ.

'ಪ್ರಗತಿಶೀಲ' ಎಂಬ ಕಡಿಮೆ ವ್ಯಾಪ್ತಿಯಿಂದ ದಾಟಿ ನೋಡಿದಾಗ ನಿರಂಜನ ನಮಗೆ ಕ್ರಾಂತಿಕಾರಿ ಸಾಹಿತಿ–ಬರಹಗಾರ–ಅಂಕಣಕಾರರಾಗಿ ಕಾಣಲು ಸಾಧ್ಯ. ಆದರೆ ಕನ್ನಡ ಸಾಹಿತ್ಯದಲ್ಲಿ ಈ ಒಂದು 'ಪ್ರಕಾರ' ಈವರೆಗೂ ಅಧಿಕೃತವಾಗಿ ಘೋಷಿಸಲ್ಪಟ್ಟಿಲ್ಲವಾದ್ದರಿಂದ, ದಲಿತ–ಬಂಡಾಯ ಸಂದರ್ಭದ ಕ್ರಾಂತಿಕಾರಿ ಸಾಹಿತ್ಯವೂ ಸಹ 'ಬಂಡಾಯ' ಎಂಬ ಬ್ರಾಕೆಟ್‌ನ ಒಳಗೇ ನಿರ್ವಚಿಸಲ್ಪಟ್ಟಿದೆ. ಇದು ನಿರಂಜನರ ಕಾಲಘಟ್ಟಕ್ಕೂ ಸತ್ಯ. ಸಹಜವಾಗಿಯೇ ನವೀನ್ ಕುಮಾರ್ ನಿರಂಜನರ 'ಚಿರಸ್ಮರಣೆ', 'ಮೃತ್ಯುಂಜಯ', ಕೃತಿಗಳನ್ನು 'ಕಲ್ಯಾಣಸ್ವಾಮಿ–ಸ್ವಾಮಿ ಅಪರಂಪಾರ' ಪರಿಚಯಿಸುವ ಮೂಲಕ ಈವರೆಗಿನ ಹೆಜ್ಜೆಗಳೊಂದಿಗೆ ಹೆಜ್ಜೆ ಹಾಕಿದ್ದಾರೆ. ಆದರೆ ನವೀನ್ ಕುಮಾರ್ ಅವರ ಈ ಕೃತಿ ಮುಖ್ಯವಾಗುವುದು ಇಲ್ಲಿ ಪ್ರಕಟಿಸಲಾಗಿರುವ ನಿರಂಜನರ ರೈತ ಕಥೆಗಳು ಮತ್ತು ಅವುಗಳ ಪ್ರಸ್ತುತತೆಗಾಗಿ.

ರೈತ ಬದುಕಿನ ಸಮಕಾಲೀನತೆ

ಸಮಕಾಲೀನ ಸಂದರ್ಭದಲ್ಲಿ ಕೆಲವು ವರ್ಷಗಳ ಹಿಂದೆ ದೆಹಲಿಯಲ್ಲಿ ಒಂದು ವರ್ಷದ ಕಾಲ ನಡೆದ ರೈತ ಮುಷ್ಕರ ಸ್ವತಂತ್ರ ಭಾರತದ ಅತಿ ದೀರ್ಘ ಜನಾಂದೋಲನ. ಈ ಸಂಘರ್ಷವು ಹುಟ್ಟುಹಾಕಿದ ಪ್ರಶ್ನೆಗಳು, ತಾತ್ವಿಕವಾಗಿ ಹಾಗೂ ಹೋರಾಟಗಳ ನೆಲೆಯಲ್ಲಿ ಸಾರ್ವಕಾಲಿಕವಾಗಿ ಭಾರತವನ್ನು ಕಾಡಲಿರುವುದು ಸ್ಪಷ್ಟ. ಆದರೆ ಈ ನಾಲ್ಕು ವರ್ಷಗಳಲ್ಲಿ ರೈತ ಮುಷ್ಕರ–ಕೋವಿಡ್ ಸಂದರ್ಭದ ವಲಸೆ ಕಾರ್ಮಿಕರ ಸುತ್ತ ಸಾಹಿತ್ಯಕ ಕೃತಿಗಳು ಮೂಡಿಬರದೆ ಇರುವುದು ದೊಡ್ಡ ಕೊರತೆ. ಅಲ್ಲಲ್ಲಿ ಕವಿತೆ, ಸಣ್ಣ ಕಥೆಗಳು ಬಂದಿದ್ದರೂ, ನವ ಉದಾರವಾದದ ಮಾರುಕಟ್ಟೆ ಪರಿಸರದಲ್ಲಿ ರೈತಾಪಿ ಎದುರಿಸುತ್ತಿರುವ ಜೀವನ–ಜೀವನೋಪಾಯದ ಸಿಕ್ಕುಗಳನ್ನು ಸಮಾಜದ ಮುಂದಿಡುವ ಒಂದು ಸಾಹಿತ್ಯಕ ಪ್ರಯತ್ನವು ಕಾದಂಬರಿಯ ರೂಪದಲ್ಲಿ ಕನ್ನಡದ ಬೌದ್ಧಿಕ ವಲಯವನ್ನು ಅಲಂಕರಿಸಬೇಕಿದೆ ಅಥವಾ ಇನ್ನೂ ಬರುವ ನಿರೀಕ್ಷೆಯಲ್ಲಿರಬೇಕೆನಿಸುತ್ತದೆ.

ಈ ಕೊರತೆಯ ನಡುವೆಯೇ ನವೀನ್ ಕುಮಾರ್ 'ರೈತರಿಗಾಗಿ ನಿರಂಜನ' ಕೃತಿ ಮೂಲಕ, ರೈತರ ಬದುಕನ್ನು ಹಾಗೂ ಸಮಸ್ಯೆಗಳನ್ನು ಒಳಹೊಕ್ಕು ನೋಡುವ ನಿರಂಜನರ ತೀಕ್ಷ್ಣಮತಿ ಸೈದ್ಧಾಂತಿಕ ಚಿಂತನೆಗಳನ್ನು ಅವರ ರೈತರ ಕಥೆಗಳ ಮೂಲಕ ಓದುಗರ ಮುಂದಿರಿಸಿದ್ದಾರೆ. ನಿರಂಜನರ ಹನ್ನೊಂದು ರೈತ ಕಥೆಗಳನ್ನು ಆರಂಭದಲ್ಲಿ ಪರಿಚಯಿಸಿ ನಂತರ ಪ್ರಕಟಿಸಿರುವುದು ಒಂದು ರೀತಿಯಲ್ಲಿ ಓದುಗರಿಗೆ ಪ್ರವೇಶಿಕೆಯಂತೆ ಕಾಣಬಹುದು. ಆದರೆ 21ನೇ ಶತಮಾನದಲ್ಲೂ ಭಾರತದ ರೈತರು ಎದುರಿಸುತ್ತಿರುವ ಬರಗಾಲ, ಸಾಲದ ಹೊರೆ, ತುಂಡುಭೂಮಿ ಉಳಿಸಿಕೊಳ್ಳುವ ಹೋರಾಟ, ಊಳಿಗಮಾನ್ಯದ ವಿರುದ್ಧ ಸಂಘರ್ಷ, ರೈತ ಸಂಘಟನೆಯ ರಚನಾತ್ಮಕ ಸಮಸ್ಯೆಗಳು, ಭೂಮಿಗಾಗಿ ಪರಿತಪಿಸುವ ಭೂರಹಿತರ ಹಪಹಪಿ ಹೀಗೆ ಎಲ್ಲ ಸಮಸ್ಯೆಗಳನ್ನೂ ನಿರಂಜನರ ಈ ಹನ್ನೊಂದು ಕಥೆಗಳಲ್ಲಿ, ವಿಭಿನ್ನ ಕಥಾವಸ್ತುಗಳ ಮೂಲಕ ಕಾಣಬಹುದು. 77 ವರ್ಷಗಳ ಸ್ವತಂತ್ರ ಆಳ್ವಿಕೆಯ ನಂತರವೂ ಈ ಸಮಸ್ಯೆಗಳ ಸಂಕೀರ್ಣ–ಜಟಿಲ ಸ್ವರೂಪ ಬಹುಮಟ್ಟಿಗೆ ಯಥಾಸ್ಥಿತಿಯಲ್ಲಿರುವುದು, ಭಾರತದ ಅಭಿವೃದ್ಧಿ ಪಥವನ್ನು ಮರುಪರಿಶೀಲನೆಗೊಳಪಡಿಸುವಂತೆ ಮಾಡುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ವಸಾಹತು ಆಳ್ವಿಕೆಯೊಂದಿಗೆ ಸಂಘರ್ಷದಲ್ಲಿದ್ದ ಭಾರತದ ರೈತರು, ಲಕ್ಷಾಂತರ ಆತ್ಮಹತ್ಯೆಗಳ ನಡುವೆಯೂ, ಪ್ರಜಾಸತ್ತಾತ್ಮಕ ಆಳ್ವಿಕೆಯ ವಿರುದ್ಧ, ಬೆಂಬಲ ಬೆಲೆಗಾಗಿ, ಭೂಮಿಗಾಗಿ, ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರಕ್ಕಾಗಿ, ಸೂಕ್ತ ಸಾಲ ಸೌಲಭ್ಯಗಳಿಗಾಗಿ ಹೋರಾಡುತ್ತಲೇ ಇರುವುದು ಚಾರಿತ್ರಿಕ ವಿಡಂಬನೆ ಎನಿಸಿದರೂ ವಾಸ್ತವ. ಗ್ರಾಮೀಣ ರೈತರ ಬದುಕಿನಲ್ಲಿ ಎದುರಾಗುವ ಅಪೌಷ್ಟಿಕತೆ, ಶಿಕ್ಷಣದ ಕೊರತೆ, ನಿರಕ್ಷರತೆ, ಯುವ ಸಮೂಹದ ನಿರುದ್ಯೋಗ ಹಾಗೂ ಎಲ್ಲಕ್ಕಿಂತಲೂ ಮಿಗಿಲಾಗಿ ಮಹಿಳಾ ಕೃಷಿಕರು ಎದುರಿಸುವ ಪಿತೃಪ್ರಧಾನತೆ ಮತ್ತು ಜಾತಿ ದಬ್ಬಾಳಿಕೆಗಳನ್ನು ನಾವು ಒಳಹೊಕ್ಕು ನೋಡಬೇಕಿದೆ. ನಿರಂಜನರ ಕಥೆಗಳಲ್ಲಿ ಇದರ ಚಾರಿತ್ರಿಕ ಸುಳಿವು ಕಾಣುತ್ತದೆ. ಆದರೆ ವರ್ತಮಾನದಲ್ಲಿ ರೂಪಾಂತರಗೊಂಡ ಶೋಷಣೆಯ ಮಾರ್ಗಗಳನ್ನು ನಾವು ಮರುಪರಿಷ್ಕರಣೆಗೊಳಪಡಿಸಿ, ರೈತರ ನಡುವೆ ನಿಂತು ನೆಲದ ವಾಸ್ತವಗಳನ್ನು ↗

ಯು.ಎಸ್.ಏಡ್. ನಿಧಿ ಹೆಸರಿನಲ್ಲಿ ಮುಸುಕಿನ ಸಮರ

ಪ್ರಕಾಶ್ ಕಾರತ್

ಯುನೈಟೆಡ್ ಸ್ಟೇಟ್ಸ್ ಏಜನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ (ಯುಎಸ್‌ಏಡ್) ಸಂಸ್ಥೆಯನ್ನು ಮುಚ್ಚಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧರಿಸಿರುವುದರಿಂದ ಭಾರತದ ಆಳುವ ವರ್ಗಗಳ ಎರಡು ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಜಟಾಪಟಿ ಆರಂಭವಾಗಿದೆ. ನಿರ್ಧಾರವನ್ನು ಪ್ರಕಟಿಸುವ ವೇಳೆ ಯುಎಸ್‌ಎಐಡಿ ಫಲಾನುಭವಿಗಳ ಒಂದು ಪಟ್ಟಿಯನ್ನೂ ಬಹಿರಂಗಪಡಿಸಲಾಗಿದೆ. ಅದನ್ನು ಉಲ್ಲೇಖಿಸಿದ ಟ್ರಂಪ್, ಭಾರತದಲ್ಲಿ 'ಮತದಾನದ ಪ್ರಮಾಣವನ್ನು ಹೆಚ್ಚಿಸಲು' 183 ಕೋಟಿ ರೂಪಾಯಿ (21 ದಶಲಕ್ಷ ಡಾಲರ್) ಹಣವನ್ನು ನೀಡಲಾಗಿತ್ತು ಎಂದು ಹೇಳಿದ್ದಾರೆ. ಅಷ್ಟು ಮಾತ್ರವಲ್ಲದೆ, 'ಯಾರೋ ಒಬ್ಬರನ್ನು ಚುನಾಯಿಸುವುದು' ಅದರ ಉದ್ದೇಶವಾಗಿತ್ತು ಎಂದೂ ಟ್ರಂಪ್ ಹೇಳಿದ್ದಾರೆ. ಅದಾದ ನಂತರ ನಡೆದ ಒಂದು ಸಾರ್ವಜನಿಕ ಸಂವಾದದಲ್ಲಿ ಮಾತನಾಡಿದ ಟ್ರಂಪ್, 'ಮತದಾನ ಹೆಚ್ಚಳಕ್ಕಾಗಿ ಈ ಹಣ ನನ್ನ ಗೆಳೆಯ ಪ್ರಧಾನಿ ನರೇಂದ್ರ ಮೋದಿಗೆ ಹೋಗಿದೆ' ಎಂದು ಕೂಡ ಹೇಳಿದ್ದಾರೆ.



ಈ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಸಮಗ್ರವಾಗಿ ತನಿಖೆಗೆ ಒಳಪಡಿಸಬೇಕು. ಅದು ನಿಜವೆಂದು ಸಾಬೀತಾದಲ್ಲಿ, ನಮ್ಮ ದೇಶದ ಆಂತರಿಕ ಜನತಾಂತ್ರಿಕ ವ್ಯವಹಾರಗಳಲ್ಲಿ ವಿದೇಶಿ ಶಕ್ತಿಗಳು ನೇರವಾಗಿ ಹಸ್ತಕ್ಷೇಪ ನಡೆಸಿದ್ದನ್ನು ಅದು ಸೂಚಿಸುತ್ತದೆ. ಈ ಹಣವನ್ನು ಯಾರು ಪಡೆದರು ಹಾಗೂ ಅದರ ಉದ್ದೇಶ ಏನಾಗಿತ್ತು ಎಂದು ತಿಳಿಯುವ ಹಕ್ಕು ನಮಗಿದೆ.

ಯುಎಸ್‌ಎಐಡಿ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಅರ್ಹ ಫಲಾನುಭವಿ ದೇಶಗಳಿಗೆ ಸುಖಾಸುಮ್ಮನೆ ವಿದೇಶಿ ನೆರವನ್ನು ವಿತರಿಸುವ ಮುಗ್ಧ ಸಂಸ್ಥೆಯಲ್ಲ. ವಿದೇಶಿ ನೀತಿ ಗುರಿಗಳನ್ನು ಆಕ್ರಮಣಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಅದು ಅಮೆರಿಕದ ವಿದೇಶಾಂಗ ಇಲಾಖೆಯ ವಿಸ್ತರಣೆಯಾಗಿ ಕಾರ್ಯ ನಿರ್ವಹಿಸುತ್ತದೆ. ಸೋವಿಯತ್ ಒಕ್ಕೂಟದ ಹೆಚ್ಚುತ್ತಿರುವ ಪ್ರಭಾವವನ್ನು ಎದುರಿಸಲು ಶೀತಲ ಸಮರದ ಸಮಯದಲ್ಲಿ ಅಧ್ಯಕ್ಷ ಜಾನ್ ಎಫ್ ಕೆನಡಿ ಸ್ಥಾಪಿಸಿದ್ದ ಯುಎಸ್‌ಎಐಡಿ, ಹಲವು ದೇಶಗಳಲ್ಲಿ ಸರಕಾರಗಳ ಬದಲಾವಣೆ, ಅಮೆರಿಕದ ಕಾರ್ಪೊರೇಟ್ ಹಿತಗಳ ರಕ್ಷಣೆ ಮತ್ತು ಸಮಾಜವಾದಿ ಚಳವಳಿಗಳನ್ನು ಹತ್ತಿಕ್ಕುವ ಕೆಲಸಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

2023ರಷ್ಟು ಈಚೆಗೆ, ಮೆಕ್ಸಿಕೋದ ಅಂದಿನ ಅಧ್ಯಕ್ಷ ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಾಡರ್, ತಮ್ಮ ದೇಶದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕದ ಹಸ್ತಕ್ಷೇಪವನ್ನು ಖಂಡಿಸಿದ್ದರು. ಹಾಗೂ ತಮ್ಮ ಸರಕಾರಕ್ಕೆ ವಿರುದ್ಧವಾಗಿರುವ ಶಕ್ತಿಗಳಿಗೆ ಯುಎಸ್‌ಎಐಡಿ ಯಿಂದ ನೆರವು ಒದಗಿಸುವುದನ್ನು ಅಮೆರಿಕ ನಿಲ್ಲಿಸಬೇಕು ಎಂದು ಆಗ್ರಹಿಸಿದ್ದರು. ಅಶಾಂತಿಯನ್ನು ಸೃಷ್ಟಿಸಿ ಸಮಾಜವಾದಿ ಕ್ಯೂಬಾವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಜನರನ್ನು ಪ್ರಚೋದಿಸಲಿಕ್ಕಾಗಿ 'ಝುನ್‌ಝುನೆವೊ' ಎಂಬ ಹೆಸರಿನ 'ಕ್ಯೂಬನ್ ಟ್ವಿಟರ್' ವೇದಿಕೆಯನ್ನು 2014ರಲ್ಲಿ ಯುಎಸ್‌ಎಐಡಿ ಹುಟ್ಟುಹಾಕಿತ್ತು.

ಕೇರಳದ ಪ್ರಥಮ ಚುನಾಯಿತ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸುವಲ್ಲಿ

ಸರಕಾರಗಳ ಬದಲಾವಣೆ ಅಥವಾ ಉರುಳಿಸುವ ಸಾಧನವಾಗಿ ನೆರವನ್ನು ಬಳಸಿಕೊಳ್ಳುವುದು ಹೊಸ ವಿಷಯವೇನೂ ಅಲ್ಲ ಅಥವಾ ಅದಕ್ಕೆ ಭಾರತ ಹೊರತಾದುದೂ ಅಲ್ಲ. ಕೇರಳದ ಪ್ರಥಮ ಚುನಾಯಿತ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸುವಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಮೆರಿಕ 'ನೆರವು' ನೀಡಿದ್ದಕ್ಕೆ ಪುರಾವೆಗಳು ಲಭ್ಯವಾಗಿವೆ. ಇಎಂಎಸ್ ನಂಬೂದಿರಿಪಾದ್ ನೇತೃತ್ವದ ಸಿಪಿಐ ಸರಕಾರ ಚುನಾಯಿತವಾಗಿ ನಂತರ ವಜಾಗೊಂಡ 1957ರಿಂದ 1959ರ ಅವಧಿಯಲ್ಲಿ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಎಲ್ಸ್‌ವರ್ತ್ ಬಂಕರ್, ಸಂದರ್ಶನವೊಂದರಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. 'ಕಾಂಗ್ರೆಸ್ ಪಕ್ಷಕ್ಕೆ ನಾವು ಆರ್ಥಿಕ ನೆರವು ನೀಡಿದ್ದು ವಾಸ್ತವವಾಗಿದೆ' ಎಂದವರು ಹೇಳಿದ್ದರು. ಅಮೆರಿಕದ ಮಾಜಿ ರಾಯಭಾರಿಯ ಈ ಗಾಬರಿ ಹುಟ್ಟಿಸುವ ಹೇಳಿಕೆಯುಳ್ಳ ಸಂದರ್ಶನದ ಲಿಪಿರೂಪ (ಟ್ರಾನ್‌ಸ್ಕ್ರಿಪ್ಟ್) ಕೊಲಂಬಿಯಾ ವಿಶ್ವವಿದ್ಯಾಲಯದ ಓರಲ್ ಹಿಸ್ಟರಿ ಆಫ್ ಆರ್ಕೈವ್ಸ್‌ನಲ್ಲಿ ಲಭ್ಯವಿದೆ.

ಭಾರತದಲ್ಲಿ ಕಮ್ಯೂನಿಸ್ಟ್ ಪ್ರಭಾವವನ್ನು ತಡೆಯಲು

ಅದೇ ರೀತಿ, 1973ರಿಂದ 1975ರ ಅವಧಿಯಲ್ಲಿ ಭಾರತಕ್ಕೆ ಅಮೆರಿಕ ರಾಯಭಾರಿಯಾಗಿದ್ದ ಡೇನಿಯಲ್ ಪ್ಯಾಟ್ರಿಕ್ ಮೊಯ್ನಿಹಾನ್ ಕೂಡ ಇದೇ ರೀತಿಯಲ್ಲಿ ತಪ್ಪೊಪ್ಪಿಕೊಂಡಿದ್ದಾರೆ. ಭಾರತದಲ್ಲಿ ಕಮ್ಯೂನಿಸ್ಟ್ ಪ್ರಭಾವವನ್ನು ತಡೆಯಲು ಅಮೆರಿಕ ಎರಡು ಬಾರಿ ಕಾಂಗ್ರೆಸ್‌ಗೆ ಹಣ ನೀಡಿತ್ತು ಎಂದು ತಮ್ಮ 'ಎ ಡೇಂಜರಸ್ ಪ್ಲೇಸ್' ಎಂಬ ನೆನಪಿನ ಕಥನದಲ್ಲಿ ಮೊಯ್ನಿಹಾನ್ ಹೇಳಿದ್ದಾರೆ. ಒಮ್ಮೆ ಕೇರಳ ಹಾಗೂ ಇನ್ನೊಮ್ಮೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್‌ಗೆ ಹಣ ನೀಡಲಾಗಿತ್ತು. ಭಾರತದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕ ಸಕ್ರಿಯವಾಗಿ ಹಸ್ತಕ್ಷೇಪ ಮಾಡಿದೆ ಮತ್ತು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಲು ಸಕ್ರಿಯ ಪಾತ್ರ ವಹಿಸಿದೆ ಎಂಬುದು ಅಮೆರಿಕದ ಇಬ್ಬರು ಮಾಜಿ ರಾಜತಾಂತ್ರಿಕರು ಮಾಡಿರುವ ಈ ತಪ್ಪೊಪ್ಪಿಗೆಗಳಿಂದ ನಿಚ್ಚಳವಾಗುತ್ತದೆ.

ಕಾಂಗ್ರೆಸ್ ಮತ್ತು ಬಿಜೆಪಿ (ಅಥವಾ ಅದರ ಹಿಂದಿನ ಅವತಾರವಾದ ಜನಸಂಘ) ಇವೆರಡಕ್ಕೂ ಈ ರೀತಿಯ ಹಸ್ತಕ್ಷೇಪಕ್ಕೆ ಯಾವುದೇ ಆಕ್ಷೇಪಣೆ ಇಲ್ಲದಿರುವುದು ಭಾರತದ ಸಾರ್ವಭೌಮತೆ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳ ರಕ್ಷಣೆ ಕುರಿತು ಬದ್ಧತೆ ಇಲ್ಲದಿರುವುದನ್ನು ಅಥವಾ ಕೊರತೆ ಇರುವುದನ್ನು ಸ್ಪಷ್ಟಪಡಿಸುತ್ತದೆ.

ನಿರ್ಲಕ್ಷಿಸಲಾಗದ ಗಂಭೀರ ಆರೋಪ

ಈ ಹಿನ್ನೆಲೆಯಲ್ಲಿ, 'ಮತದಾರರ ಹೆಚ್ಚಳ'ದ ಮೇಲೆ ಪ್ರಭಾವ ಬೀರಲು 21 ದಶಲಕ್ಷ ಡಾಲರ್ ಹಣವನ್ನು ಭಾರತಕ್ಕೆ ನೀಡಲಾಗಿದೆ ಎಂಬ ಅಮೆರಿಕ ಅಧ್ಯಕ್ಷರ ಹೇಳಿಕೆಯು ನಿರ್ಲಕ್ಷಿಸಲಾಗದ ಅಥವಾ ತಿರಸ್ಕರಿಸಲಾಗದ ಒಂದು ಗಂಭೀರ ಆರೋಪವಾಗಿದೆ. ಅದೆಲ್ಲಕ್ಕಿಂತ ಹೆಚ್ಚಾಗಿ, ಬಿಜೆಪಿ ಅಥವಾ ಕಾಂಗ್ರೆಸ್ ಪಕ್ಷಗಳ 'ಪರಸ್ಪರರನ್ನು ದೂಷಿಸುವ' (ವಾಟ್‌ಅಬೌಟರಿ) ಪ್ರಕ್ರಿಯೆಯ ಭಾರದಡಿ ಅದು ಹೂತು ಹೋಗಬಾರದು.

ಟ್ರಂಪ್ ಆಡಳಿತದ ಹೇಳಿಕೆಯು 'ಕಳವಳಕಾರಿಯಾದುದು' ಎಂದು ವಿದೇಶ ವ್ಯವಹಾರಗಳ ಸಚಿವರು ಹೇಳಿದ್ದು ಸರಕಾರ ಆ ಬಗ್ಗೆ ಪರಿಶೀಲಿಸುತ್ತಿದೆ ಎಂದಿದ್ದಾರೆ. ಅದರಾಚೆ ಅವರು ಸಂಪೂರ್ಣವಾಗಿ ಮೌನವಹಿಸಿದ್ದಾರೆ. ಅಮೆರಿಕ ಅಧ್ಯಕ್ಷರ ಹೇಳಿಕೆಯಲ್ಲಿ ಏನಾದರೂ ಸತ್ಯವಿದೆಯೇ ಎನ್ನುವ ಬಗ್ಗೆ ತುಟಿ ಬಿಚ್ಚಿಲ್ಲ. ಪ್ರಶ್ನಿತ ನಿಧಿಯು ಭಾರತಕ್ಕೆ ಉದ್ದೇಶಿತವಾಗಿರಲಾರದು; ಬದಲಿಗೆ ಬಾಂಗ್ಲಾದೇಶದ್ದಾಗಿರಬಹುದು ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಟ್ರಂಪ್ ಅವರು 'ಢಾಕಾ'ವನ್ನು 'ದೆಹಲಿ' ಎಂದು ತಪ್ಪು ತಿಳಿದಿರಬೇಕು ಎಂಬುದು ಅವುಗಳ ಅರ್ಥವಾಗಿದೆ. ಈ ವಿವರಣೆಯು ತುಂಬಾ ತಮಾಷೆಯಾಗಿ ಕಾಣಿಸುತ್ತದೆ. ಆದರೆ, ಅಂತಿಮವಾಗಿ ಭಾರತದಲ್ಲಿ ಯುಎಸ್‌ಎಐಡಿಯ ಒಳಗೊಳ್ಳುವಿಕೆ ಮತ್ತು ಚಟುವಟಿಕೆಗಳ ಕುರಿತು ಸ್ಪಷ್ಟ ಹಾಗೂ ಪಾರದರ್ಶಕ ವಿಚಾರವನ್ನು ಒದಗಿಸುವುದು ಸರಕಾರದ ಹೊಣೆಯಾಗಿದೆ.

ಹಣಕಾಸು ಸಚಿವಾಲಯದ ಮೌನ

ಟ್ರಂಪ್ ಹೇಳಿಕೆಗಳ ಬಗ್ಗೆ ಹಣಕಾಸು ಸಚಿವಾಲಯ ಕೂಡ ಮೌನವಾಗಿದೆ. 2023-24ರಲ್ಲಿ ಏಳು ಯೋಜನೆಗಳಿಗೆ ಯುಎಸ್‌ಎಐಡಿಯಿಂದ 750 ಮಿಲಿಯ ಡಾಲರ್ (ಅಂದಾಜು 6,501 ಕೋಟಿ ರೂಪಾಯಿ) ಹಣವನ್ನು ಪಡೆಯಲಾಗಿದೆ ಎಂದು ಹಣಕಾಸು ಸಚಿವಾಲಯದ ವಾರ್ಷಿಕ ವರದಿ ನಮೂದಿಸಿದೆ. ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಯೋಜನೆಗಳು ಅವುಗಳಲ್ಲಿ ಸೇರಿವೆ. ಆದರೆ, 21 ದಶಲಕ್ಷ ಡಾಲರ್‌ಗೆ ಸಂಬಂಧಿಸಿ ವರದಿ ಏನನ್ನೂ ಹೇಳಿಲ್ಲ.

ಯುಎಸ್‌ಎಐಡಿ ಸ್ಥಾಪನೆಯಾದಾಗಿನಿಂದ ಇದುವರೆಗೆ ಭಾರತಕ್ಕೆ 17 ಶತಕೋಟಿ ಡಾಲರ್ (1.5 ಲಕ್ಷ ಕೋಟಿ ರೂಪಾಯಿ) ಹಣವನ್ನು ನೀಡಿದೆ. ವಿವಿಧ ಕ್ಷೇತ್ರಗಳಲ್ಲಿ 555ಕ್ಕೂ ಹೆಚ್ಚು ಯೋಜನೆಗಳಿಗೆ ಅವು ಬೆಂಬಲವಾಗಿವೆ. ಯಾವ ಪಕ್ಷ ಎಂಬುದರ ಪರಿಗಣನೆಯಿಲ್ಲದೆ ಸತತವಾಗಿ ಆಡಳಿತ ನಡೆಸಿದ ಸರ್ಕಾರಗಳು ಯುಎಸ್‌ಎಐಡಿ ನಿಧಿಯ ನೆರವನ್ನು ಪಡೆದಿವೆ ಎಂದು ಸರಕಾರದ ವರದಿಗಳು ಹೇಳುತ್ತವೆ.

ಬಿಜೆಪಿಯ ಇಬ್ಬಗೆ ನೀತಿ ಬಹಿರಂಗ

ಈ ನಡುವೆ, ಅನೇಕ ಸಂಶೋಧನಾ ಸಂಸ್ಥೆಗಳು ಮತ್ತು ಎನ್‌ಜಿಒಗಳು ವಿದೇಶಿ ನಿಧಿಗಳನ್ನು ಪಡೆಯುವುದನ್ನು ತಡೆಯಲು ವಿದೇಶಿ ದೇಣಿಗೆ (ನಿಯಂತ್ರಣ) ಕಾನೂನನ್ನು (ಎಫ್‌ಸಿಆರ್‌ಎ) ಒಂದು ಆಯುಧವಾಗಿ ಬಿಜೆಪಿ ಬಳಸಿಕೊಂಡಿದೆ. ಅದೇ ಹೊತ್ತಿಗೆ, ತನ್ನ ಸಿದ್ಧಾಂತಕ್ಕೆ ಪೂರಕವಾದ ಆರ್‌ಎಸ್‌ಎಸ್ ಮತ್ತು ಇತರ ಸಂಸ್ಥೆಗಳು ಯಾವುದೇ ಲಂಗುಲಗಾಮಿಲ್ಲದೆ ಹಣವನ್ನು ಪಡೆಯಲು ಅದು ಅವಕಾಶ ಕಲ್ಪಿಸಿದೆ. ಕಣ್ಣಿಗೆ ರಾಚುವಂಥ ಈ ದ್ವಂದ್ವವು ಬಿಜೆಪಿಯ ಇಬ್ಬಗೆ ನೀತಿಯನ್ನು ಬಹಿರಂಗಪಡಿಸುತ್ತದೆ. ಮತ್ತು ಬಹುಸಂಖ್ಯಾತ ಸೈದ್ಧಾಂತಿಕ ಅಜೆಂಡಾವನ್ನು ಮುಂದೊತ್ತಲು ವಿದೇಶಿ ನಿಧಿಗಳನ್ನು ಬಳಸುವಲ್ಲಿ ಅದು ಶಾಮೀಲಾಗಿರುವುದನ್ನು ತೋರಿಸುತ್ತದೆ.

ಯುಎಸ್‌ಎಐಡಿ ನಿಧಿಯ ಪೂರ್ಣ ವಿವರಗಳು, ಯೋಜನೆಗಳ ಸ್ವರೂಪ, ಮತ್ತು ಭಾರತದ ಆಂತರಿಕ ವ್ಯವಹಾರಗಳಲ್ಲಿ ಅದರ ಒಳಗೊಳ್ಳುವಿಕೆಯನ್ನು ಬೆಳಕಿಗೆ ತರಬೇಕಿದೆ. ತನ್ನ ವ್ಯವಹಾರಗಳ ಹಿತಾಸಕ್ತಿಯನ್ನು ಬೆಳೆಸಿಕೊಳ್ಳುವಲ್ಲಿ ಅಮೆರಿಕದಿಂದ ಸರಕಾರದ ನೀತಿಗಳು ಹೇಗೆ ಪ್ರಭಾವಿತವಾಗಿವೆ ಎಂದು ತಿಳಿಯುವ ಹಕ್ಕು ಭಾರತದ ಜನರಿಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಯುಎಸ್‌ಎಐಡಿ ಮೂಲಕ ಅಮೆರಿಕ ಎಷ್ಟರ ಮಟ್ಟಿನ ರಾಜಕೀಯ ಪ್ರಭಾವವನ್ನು ಬೀರಿದೆ ಎಂದು ತಿಳಿಯುವ ಹಕ್ಕು ಕೂಡ ನಮಗಿದೆ. ನಮ್ಮ ದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಸಂರಕ್ಷಿಸಲು ಸರಕಾರ ತಾನು ಪರಿಶುದ್ಧ ಎಂದು ಸಾಬೀತು ಪಡಿಸಬೇಕಿದೆ.

ಅನು: ವಿಶ್ವ

ಅರ್ಥಮಾಡಿಕೊಳ್ಳಬೇಕಿದೆ.

ಕೃತಿಯ ಸಮಕಾಲೀನ ಪ್ರಸ್ತುತತೆ

ಈ ದೃಷ್ಟಿಯಿಂದ ನೋಡಿದಾಗ ನವೀನ್ ಕುಮಾರ್ ಅವರ 'ರೈತರಿಗಾಗಿ ನಿರಂಜನ' ಕೃತಿಯು ನಿರಂಜನರ ಕಣ್ನೋಟ-ಒಳನೋಟವನ್ನು ನಮ್ಮ ಮುಂದಿರಿಸುತ್ತದೆ. ಅಂದಿನ ಪರಿಹಾರೋಪಾಯಗಳು ಇಂದು ಯಥಾವತ್ತಾಗಿ ಪ್ರಸ್ತುತ ಎನಿಸದಿದ್ದರೂ, ಸಮಸ್ಯೆಗಳ ಪ್ರಸ್ತುತತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಇದು ನಾವು ನೋಡುವ ದೃಷ್ಟಿಯನ್ನು ಅವಲಂಬಿಸುತ್ತದೆ. ದೆಹಲಿ ರೈತ ಮುಷ್ಕರದ ಸಂದರ್ಭದಲ್ಲಿ ಭಾರತದ ಮೇಲ್ಪದರದ ಗಣ್ಯ ಸಮಾಜ ಮತ್ತು ಕನ್ನಡದ ಸ್ಥಾಪಿತ ಸಾಹಿತ್ಯ ವಲಯ ಸ್ಪಂದಿಸಿದ ಪರಿಯನ್ನು ನಾವು ಕಂಡಿದ್ದೇವೆ. ಆ ಕಣ್ನೋಟವೇನೂ ಬದಲಾಗಿಲ್ಲ. ಆದರೆ ಮುಂದಿನ ತಲೆಮಾರಿಗಾಗಿ ಈ ಕಣ್ನೋಟಕ್ಕೆ ಹೊಸ ದಿಕ್ಕು, ಸ್ಪರ್ಶ ನೀಡುವ ಅವಶ್ಯಕತೆ ಇದೆ. ಮಣ್ಣಲ್ಲೇ ಬದುಕಿ ದೇಶಕ್ಕೆ ಅನ್ನ ನೀಡುವ ರೈತ-ಕಾರ್ಮಿಕರ ಬದುಕಿನ ಒಳಸೂಕ್ಷ್ಮಗಳನ್ನು ಅರಿಯಬೇಕಾದರೆ, ಮೇಲ್ಪದರದ ಸಮಾಜದ ನೆಲದ ಮೇಲೆ ನಿಂತು ಯೋಚಿಸಬೇಕಾಗುತ್ತದೆ.

ಎಚ್.ಆರ್. ನವೀನ್ ಕುಮಾರ್ ನಿರಂಜನರ ರೈತ ಕಥೆಗಳನ್ನು ಹೊರತೆಗೆದು ಓದುಗರ ಮುಂದಿಟ್ಟಿರುವುದು ಈ ದೃಷ್ಟಿಯಿಂದ ಮಹತ್ವದ ಸಾಹಿತ್ಯಕ ಸೇವೆ. ನಾವು ನಿರಂಜನರನ್ನೇ ಇನ್ನೂ ಪೂರ್ತಿಯಾಗಿ ಅರ್ಥಮಾಡಿಕೊಳ್ಳಬೇಕಿದೆ, ವಿಮರ್ಶಿಸಬೇಕಿದೆ, ಅವರೊಂದಿಗೆ ಸೈದ್ಧಾಂತಿಕವಾಗಿ ಮುಖಾಮುಖಿಯಾಗಬೇಕಿದೆ. ಇದು ಸ್ಥಾಪಿತ ಸಾಹಿತ್ಯ ವಲಯದಿಂದ ಆಗದೆ ಹೋದರೂ, ಸಾಮಾಜಿಕ ನೆಲೆಯಲ್ಲಿ ಯುವ ಸಮೂಹ ಈ ನಿಟ್ಟಿನಲ್ಲಿ ಹೆಜ್ಜೆ ಇಡಬೇಕಿದೆ. ಪರ್ವಕಾಲದಲ್ಲಿರುವ ವಿಕಸಿತ ಭಾರತಕ್ಕೆ ಇದು ಅತ್ಯವಶ್ಯವಾದ ಒಂದು ಹಾದಿಯೂ ಆಗಿದೆ. ಈ ನೆಲೆಯಲ್ಲಿ ನಿಂತಾಗ, ನವೀನ್ ಕುಮಾರ್ ಅವರ 'ರೈತರಿಗಾಗಿ ನಿರಂಜನ' ಪುಸ್ತಕವು ಒಂದು ಚಾರಿತ್ರಿಕ ದಾಖಲೆಯಾಗಿ ಉಳಿಯಲಿದೆ. ಇದನ್ನು ಹೋರಾಟ ನಿರತರಷ್ಟೇ ಅಲ್ಲದೆ, ಸಾಮಾಜಿಕ ಕಳಕಳಿ ಇರುವ, ಅನ್ಯಾಯಗಳ ವಿರುದ್ಧ ಹೋರಾಡುವ ಮನಸ್ಸಿರುವ ಪ್ರತಿ ವ್ಯಕ್ತಿಯೂ ಓದಬೇಕಿದೆ, ಚರ್ಚಿಸಬೇಕಿದೆ ಮತ್ತು ನಿರಂಜನರ ಚಿಂತನೆಗಳನ್ನು ಮುಂದೊಯ್ಯಬೇಕಿದೆ.

'ರೈತರಿಗಾಗಿ ನಿರಂಜನ' ಈ ದೃಷ್ಟಿಯಿಂದ ಒಂದು ಪ್ರಶಂಸಾರ್ಹ ಬೌದ್ಧಿಕ ಕ್ರಿಯೆ. ಯುವ ಲೇಖಕ ಎಚ್.ಆರ್. ನವೀನ್ ಕುಮಾರ್ ಅಭಿನಂದನಾರ್ಹರು. ನವೀನ್ ಅವರ ಸಾಹಿತ್ಯ ಕೃಷಿ ಮತ್ತು ಕೃಷಿ ಸಾಹಿತ್ಯ ಇನ್ನಷ್ಟು ವೃದ್ಧಿಸಿ ಸಮೃದ್ಧವಾಗಲಿ ಎಂದು ಹಾರೈಸುತ್ತೇನೆ.

2025ರ ಮಾರ್ಚ್ 3ರಿಂದ 7ರವರೆಗೆ

ಕರ್ನಾಟಕದ ಶ್ರಮಜೀವಿಗಳಿಂದ ಅಹೋರಾತ್ರಿ ಹೋರಾಟಗಳ ಪರ್ವ

ಆಳುವವರಿಂದ "ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ", "ಮೂರು ಟ್ರಿಲಿಯನ್ ಆರ್ಥಿಕತೆ" ಮುಂತಾದ ಶೀರ್ಷಿಕೆಗಳ ಘೋಷಣೆಗಳನ್ನು ನೋಡುತ್ತಿರುತ್ತೇವೆ. ಆದರೆ, ಇದರ ಭಾರವನ್ನು ಹೊತ್ತಿರುವ ಕೋಟ್ಯಾಂತರ ಕಾರ್ಮಿಕರ ಬದುಕಿನ ಭವಣೆಗಳನ್ನು ಇವರು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ತಮ್ಮ ಭವಣೆಗಳನ್ನು ಆಳುವವರಿಗೆ ತಲುಪಿಸಲು, ಅವುಗಳಿಗೆ ಪರಿಹಾರ ಪಡೆಯಲು ಕಾರ್ಮಿಕರು ಹೋರಾಟ ನಡೆಸುತ್ತಲೇ ಇರುತ್ತಾರೆ. ಈಗ ಕರ್ನಾಟಕ ರಾಜ್ಯದ ವಿವಿಧ ವಲಯಗಳ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ಮತ್ತೊಮ್ಮೆ ಹೋರಾಟಕ್ಕಿಳಿದಿದ್ದಾರೆ. ಈ ಬಾರಿ ವಿವಿಧ ವಲಯಗಳ ಕಾರ್ಮಿಕರು 6 ದಿನಗಳ ಅಹೋರಾತ್ರಿ ಹೋರಾಟ ನಡೆಸುತ್ತಿದ್ದಾರೆ. ರಾಜ್ಯದ ರಾಜಧಾನಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ 2025ರ ಮಾರ್ಚ್ 3ರಿಂದ 7ರವರೆಗೆ ಸತತವಾಗಿ 6 ದಿನಗಳ ಕಾಲ ಹೋರಾಟ ನಡೆಯಲಿದೆ.



ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕಾರ್ಮಿಕರು ಮತ್ತೊಮ್ಮೆ ಹೋರಾಟಕ್ಕೆ ಇಳಿದಿದ್ದಾರೆ. ಈ ಬಾರಿ 6 ದಿನಗಳ ಅಹೋರಾತ್ರಿ ಹೋರಾಟ ನಡೆಸುತ್ತಿದ್ದಾರೆ. ರಾಜ್ಯದ ರಾಜಧಾನಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ 2025ರ ಮಾರ್ಚ್ 3ರಿಂದ 7ರವರೆಗೆ ಹೋರಾಟ ನಡೆಯಲಿದೆ. ಹಗಲು ರಾತ್ರಿ ನಡೆಯುವ ಈ ಹೋರಾಟದಲ್ಲಿ ವಿವಿಧ ವಲಯಗಳಿಗೆ ಸೇರಿದ ಕಾರ್ಮಿಕರು ಸರದಿಯಂತೆ ಹೋರಾಟದ ಕಣಕ್ಕಿಳಿದಿದ್ದಾರೆ. ಮೊದಲ ದಿನದ ಹೋರಾಟದಲ್ಲಿ, ಅಂದರೆ ಮಾರ್ಚ್ 3 ರಂದು ಗ್ರಾಮ ಪಂಚಾಯ್ತಿ ಕಾರ್ಮಿಕರು ಅಹೋರಾತ್ರಿ ಹೋರಾಟ ನಡೆಸುತ್ತಾರೆ. 4ರಂದು ಅಕ್ಷರ ದಾಸೋಹ ಕಾರ್ಮಿಕರು, 5ರಂದು ಕಟ್ಟಡ ನಿರ್ಮಾಣ ಕಾರ್ಮಿಕರು, 6ರಂದು ಸಂಘಟಿತ ವಲಯದ ಕಾರ್ಮಿಕರು ಹಾಗೂ ಗುತ್ತಿಗೆ ಕಾರ್ಮಿಕರು ಮತ್ತು ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರು, 7ರಂದು ಅಂಗನವಾಡಿ ಕಾರ್ಮಿಕರು ಭಾಗವಹಿಸುತ್ತಾರೆ. ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ನೇತೃತ್ವದಲ್ಲಿ ಈ ಹೋರಾಟ ನಡೆಯುತ್ತಿದೆ.

ಸಾರ್ವಜನಿಕ ಉದ್ದಿಮೆಗಳ ನೌಕರರು, ಐಟಿ ವಲಯದ ಉದ್ಯೋಗಿಗಳು, ಅಂಗನವಾಡಿ ಮತ್ತು ಬಿಸಿಯೂಟ ನೌಕರರು, ಮುನಿಸಿಪಲ್ ಕಾರ್ಮಿಕರು, ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರು, ಆಟೋ ಚಾಲಕರು, ಖಾಸಗಿ ಸಾರಿಗೆ ನೌಕರರು, ಬೀಡಿ ಕಾರ್ಮಿಕರು, ತೋಟ ಕಾರ್ಮಿಕರು, ಗಿಗ್ ಕಾರ್ಮಿಕರು, ಸೇಲ್ಸ್ ಪ್ರಮೋಷನ್ ಕಾರ್ಮಿಕರು, ಮೀನುಗಾರರು, ಜೀವ ವಿಮಾ ಪ್ರತಿನಿಧಿಗಳು, ಕೃಷಿ ಕೂಲಿಕಾರರು, ಹಮಾಲಿ ಕಾರ್ಮಿಕರು, ಹೀಗೆ ಎಲ್ಲಾ ವಯಲದ ಕಾರ್ಮಿಕರು ಈ ಹೋರಾಟದಲ್ಲಿ ಭಾಗಿಯಾಗುತ್ತಿದ್ದಾರೆ.

ನಿರಂತರವಾಗಿ ಕುಸಿಯುತ್ತಿರುವ ಕಾರ್ಮಿಕರ ವೇತನದ ಪಾಲು

ಆರ್ಥಿಕ ಅನಿಶ್ಚಿತತೆ, ಹಣದುಬ್ಬರ, ಇದರಿಂದಾಗಿ ಆಹಾರ, ಇಂಧನ, ವಿದ್ಯುತ್, ಔಷಧ ಇತರೆ ದೈನಂದಿನ ಜೀವನಕ್ಕೆ ಅಗತ್ಯವಾದ ವಸ್ತುಗಳ ಬೆಲೆಗಳು ಹೆಚ್ಚುತ್ತಿವೆ. ಸಾಮಾನ್ಯ ಜನರ ಸರಾಸರಿ ಆದಾಯ ಮಟ್ಟದಲ್ಲಿ ತೀವ್ರ ಕುಸಿತವಾಗಿದೆ. ನಿರುದ್ಯೋಗವು ಆತಂಕಕಾರಿ ಮಟ್ಟಕ್ಕೆ ಏರಿದ್ದು, ನಿರಂತರ ಉದ್ಯೋಗ ನಷ್ಟ ಮತ್ತು ಉದ್ಯೋಗದ ಗುಣಮಟ್ಟ ಕ್ಷೀಣಿಸುತ್ತಿದೆ. ಇದೂ ಅಲ್ಲದೆ, ಕಾರ್ಮಿಕರ ವೇತನದ ಪಾಲು ನಿರಂತರವಾಗಿ ಕುಸಿಯುತ್ತಿದೆ. ಇದು ದೊಡ್ಡ ಪ್ರಮಾಣದ ಬಡತನ, ನಿರ್ಗತಿಕತೆ ಮತ್ತು ಹಸಿವಿಗೆ ಕಾರಣವಾಗಿದೆ.

ರಾಜ್ಯದಲ್ಲಿ ಸುಮಾರು 2.5 ಕೋಟಿ ಜನರು ಸಂಘಟಿತ, ಅನೌಪಚಾರಿಕ ವಲಯಗಳಲ್ಲಿ ದುಡಿಯುತ್ತಿದ್ದಾರೆ. ಖಾಯಂ ಸ್ವರೂಪದ ಕೆಲಸಗಳಲ್ಲಿ ಖಾಯಂ ಅಲ್ಲದ ಕಾರ್ಮಿಕರ ದುಡಿಮೆ ದೊಡ್ಡ ಪ್ರಮಾಣದಲ್ಲಿದೆ. ಕನಿಷ್ಠ ವೇತನವನ್ನು ಹೆಚ್ಚಿಸದೇ ಇವರನ್ನು ಸತತವಾಗಿ ಶೋಷಣೆ ಮಾಡಲಾಗುತ್ತಿದೆ. ಭಾರತದ ಸಂಘಟಿತ ವಲಯದ ನಿವ್ವಳ ಮೌಲ್ಯ ವರ್ಧನೆಯಲ್ಲಿ 2022–23 ರಲ್ಲಿ ಭಾರತದ ಮಾಲೀಕರ ಪಾಲು ಶೇ. 51.92ಕ್ಕೆ ಹೆಚ್ಚಿದೆ. ಮತ್ತೊಂದಡೆ, ಕಾರ್ಮಿಕರ ವೇತನದ ಪಾಲು ಶೇ. 15.94ಕ್ಕೆ ಕುಸಿದಿದೆ. ರಾಜ್ಯದಲ್ಲಿ ಮಾಲಿಕರ ಪಾಲು ಶೇ. 48.84 ಕ್ಕೆ ಹೆಚ್ಚಿದ್ದರೆ, ಕಾರ್ಮಿಕರ ವೇತನದ ಪಾಲು ಶೇ. 17.10ಕ್ಕೆ ಕುಸಿದಿದೆ. 1948 ರಲ್ಲಿ ಭಾರತ ಸರ್ಕಾರವು ನ್ಯಾಯೋಚಿತ ವೇತನ ಜಾರಿ ಮಾಡಲು ತ್ರಿಪಕ್ಷೀಯ ಸಮಿತಿ ರಚಿಸಿತ್ತು. ಈ ಸಮಿತಿ ಅಂದು ದೇಶದ ಆರ್ಥಿಕತೆ ಮತ್ತು ಕೈಗಾರಿಕೆಗಳ ಶಕ್ತಿ ಹೆಚ್ಚಿಲ್ಲದ ಕಾರಣ ನ್ಯಾಯೋಚಿತ ವೇತನದ ಬದಲಿಗೆ ಕನಿಷ್ಠ ವೇತನ ಕೊಡಲು ತೀರ್ಮಾನಿಸಿತ್ತು. ಆದರೆ, ಬಹಳಷ್ಟು ಕಾರ್ಮಿಕರಿಗೆ



ಕನಿಷ್ಟ ವೇತನವೂ ಸಿಗುತ್ತಿಲ್ಲ. ಕೃಷಿಯಿಂದ ಜೀವನ ನಡೆಸಲು ಸಾಧ್ಯವಿಲ್ಲದೆ ರೈತರು ಮತ್ತು ಕೃಷಿ ಕೂಲಿ ಕೆಲಸ ಸಿಗದೆ ಕೃಷಿ ಕೂಲಿಕಾರರು, ಹಳ್ಳಿಗಳಿಂದ ನಗರ, ಪಟ್ಟಣಗಳಿಗೆ ವಲಸೆ ಬಂದು ಹಲವು ವಯಲಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವ ಬಹಳಷ್ಟು ಜನರು ನಿರಾಶೆಯನ್ನು ಎದುರಿಸಿದ್ದಾರೆ. ಉದ್ಯೋಗ ಭದ್ರತೆ, ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಪರಿಸ್ಥಿತಿಗಳು ಮತ್ತು ಇತರ ಕಾರ್ಮಿಕ ಸೌಲಭ್ಯಗಳಿಲ್ಲದೆ ಬಹಳಷ್ಟು ಸಂಕಷ್ಟಗಳನ್ನು ಇವರು ಎದುರಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ), ಬಯೋಟೆಕ್ನಾಲಾಜಿ (ಬಿಟಿ)ಯಂತಹ 750 ಬಹುರಾಷ್ಟ್ರೀಯ ಕಂಪನಿಗಳಿವೆ. ದೇಶದ ಜಿಡಿಪಿಗೆ ಶೇ. 8.2ರಷ್ಟು ಕಾಣಿಕೆ ಕರ್ನಾಟಕದ್ದಾಗಿದೆ. ಜಿಎಸ್ ಟಿ ತೆರಿಗೆ ಸಂಗ್ರಹದಲ್ಲಿ 2ನೇ ಸ್ಥಾನ ಕರ್ನಾಟಕ್ಕಿದೆ. ಆದರೂ ರಾಜ್ಯದ ಜನರ ಜೀವನ ಮಟ್ಟ ಹೆಚ್ಚಾಗಿಲ್ಲ.

ಮತ್ತೊಂದಡೆ, ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಇಲ್ಲಿ ಬಹುತೇಕ ಖಾಯಂ ಉದ್ಯೋಗಗಳ ನೇಮಕಾತಿ ಇಲ್ಲದಂತಾಗಿದೆ. ಹಳೆಯ ಪಿಂಚಣಿ ಯೋಜನೆ ರದ್ದುಗೊಳಿಸಿ ಹೊಸ ಪಿಂಚಣಿ ಯೋಜನೆ ತರುವ ಮೂಲಕ ಕಾರ್ಮಿಕರ ವೃದ್ದಾಪ್ಯ ಜೀವನವನ್ನು ಸಂಕಷ್ಟಕ್ಕೆ ಸಿಲುಕಿಸಲಾಗಿದೆ.

ರಾಜ್ಯಾದ್ಯಂತ ವ್ಯಾಪಕ ಪ್ರಚಾರ

ಮಾರ್ಚ್ ಮೊದಲ ವಾರದ ಹೋರಾಟದ ಕುರಿತು ರಾಜ್ಯಾದ್ಯಂತ ವ್ಯಾಪಕ ಪ್ರಚಾರ ನಡೆಯುತ್ತಿದೆ. ವಿವಿಧ ಸಂಘಟನೆಗಳ ಕಾರ್ಯಕರ್ತರು ತಮ್ಮದೇ ಬೇಡಿಕೆಗಳ ಜೊತೆಗೆ, ವಿದ್ಯುತ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ, ಶಿಕ್ಷಣದ ಖಾಸಗೀಕರಣ, ಜನಸಾಮಾನ್ಯರಿಗೆ ಸಂಬಂಧಿಸಿದ ಬೇಡಿಕೆಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಮೆಟ್ರೋ ರೈಲು ಪ್ರಯಾಣ ದರ ಹೆಚ್ಚಳದ ವಿರುದ್ಧ ಪ್ರತಿಭಟನೆ ನಡೆಸುತ್ತಲೇ, ಕಾರ್ಮಿಕರ ಅಹೋರಾತ್ರಿ ಹೋರಾಟವನ್ನು ಬೆಂಬಲಿಸುವಂತೆ ಜನರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಬೆಂಗಳೂರು ಸೇರಿದಂತೆ ಹಲವು ನಗರ ಮತ್ತು ಪಟ್ಟಣಗಳಲ್ಲಿನ, ಗ್ರಾಮಗಳಲ್ಲಿನ ರಸ್ತೆ ಬದಿಗಳ ಗೋಡೆಗಳ ಮೇಲೆ ಬೇಡಿಕೆಗಳನ್ನು ಒಳಗೊಂಡ ಪೋಸ್ಟರ್ ಗಳು ಪ್ರದರ್ಶನಗೊಳ್ಳುತ್ತಿವೆ. ಬೆಂಗಳೂರು ಸೇರಿದಂತೆ ಕೆಲವು ನಗರ ಪಟ್ಟಣಗಳ ಆಟೋರಿಕ್ಷಾಗಳ ಮೇಲೂ ಪೋಸ್ಟರುಗಳನ್ನು ಹಾಕಿಕೊಳ್ಳುವ ಮೂಲಕ ಆಟೋ ಚಾಲಕರು ಪ್ರಚಾರಕ್ಕೆ ಮೆರುಗು ನೀಡಿದ್ದಾರೆ.

ರಾಜ್ಯದೆಲ್ಲೆಡೆ ಕಾರ್ಮಿಕರು ಬೇಡಿಕೆಗಳ ಪಟ್ಟಿ ಇರುವ ಕರಪತ್ರಗಳನ್ನು ಕಾರ್ಮಿಕರ ಮತ್ತು ಜನರ ನಡುವೆ ಕೊಂಡೊಯ್ಯುತ್ತಿದ್ದಾರೆ. ಸಂಘಟನೆಗಳ ಕಾರ್ಯಕರ್ತರು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮನೆ ಮನೆಗೆ ಬೇಟಿ ನೀಡಿ ಜನತೆಯ ಸಮಸ್ಯೆಗಳನ್ನು ವಿವರಿಸುತ್ತಿದ್ದಾರೆ. ಆಟೋಗಳಲ್ಲಿ, ಜೀಪ್ ಗಳಲ್ಲಿ ಮತ್ತು ಇತರೆ ವಾಹನಗಳಲ್ಲಿ ಮೈಕ್ ಕಟ್ಟಿ, ಹೋರಾಟದ ಕುರಿತು ಪ್ರಚಾರ ಮಾಡತೊಡಗಿದ್ದಾರೆ. ಬೀದಿ ಬದಿಗಳಲ್ಲಿ ನಿಂತು ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಪ್ರಚಾರ ನಡೆಯುತ್ತಿದೆ. ಕಾರ್ಮಿಕರು ಹೋರಾಟ ಮತ್ತು ಬೇಡಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಮತ್ತು ತಾವೂ ಪ್ರಚಾರದಲ್ಲಿ ತೊಡಗಿಕೊಂಡಿರುವ ಚಿತ್ರಗಳನ್ನು ತಮ್ಮದೇ ವಾಟ್ಸಫ್, ಫೇಸ್ಬುಕ್ ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆ ಮಾಡಿಕೊಂಡು ಪ್ರಚಾರಕ್ಕೆ ಮೆರುಗು ನೀಡತೊಡಗಿದ್ದಾರೆ.

ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಅನುದಾನ ನೀಡಿ

ಕನಿಷ್ಟ ವೇತನವನ್ನು ತಿಂಗಳಿಗೆ 35 ಸಾವಿರ ರೂ.ಗಳಿಗೆ ಪರಿಷ್ಕರಿಸಬೇಕು, ಗುತ್ತಿಗೆ ಪದ್ದತಿ ಎಂಬ ಜೀತಪದ್ಧತಿಯಿಂದ ಕಾರ್ಮಿಕರನ್ನು ಹೊರತರಲು ಗುತ್ತಿಗೆ ಕೆಲಸಗಾರನ್ನು ಖಾಯಂ ಮಾಡಬೇಕು. ಮನೆಗೆಲಸ ಮಾಡುವವರು, ಬೀದಿಬದಿ ವ್ಯಾಪಾರಸ್ಥರು, ಕಟ್ಟಡ ಕಾರ್ಮಿಕರು, ಆಟೋರಿಕ್ಷಾ, ಟ್ಯಾಕ್ಸಿ, ಲಾರಿ, ಖಾಸಗಿ ಬಸ್ಸು ಸೇರಿದಂತೆ ಸಾರಿಗೆ ನೌಕರರಿಗೆ ಕಾರ್ಮಿಕರ ಕಲ್ಯಾಣ ಮಂಡಳಿಗಳು ಮತ್ತು ಯೋಜನೆಗಳನ್ನು ಖಚಿತಪಡಿಸಿಕೊಳ್ಳಬೇಕು. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ರಾಜ್ಯ ಸರ್ಕಾರ ಕನಿಷ್ಟ 500 ಕೋಟಿ ರೂ.ಗಳ ಅನುದಾನ ನೀಡಬೇಕು. ಅಂಬೇಡ್ಕರ್ ಸ್ಮಾರ್ಟ್ ಕಾರ್ಡ್ ಪಡೆದವರಿಗೆ ಕನಿಷ್ಟ 3,000 ರೂ. ಮಾಸಿಕ ಪಿಂಚಣಿ ನೀಡಬೇಕು. ಇವರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಬೇಕು. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ 2 ಲಕ್ಷ ರೂ. ಜೀವವಿಮೆ, ಆರೋಗ್ಯ ವಿಮೆಗೆ 2 ಲಕ್ಷ ರೂ, ಆಸ್ಪತ್ರೆಗೆ ದಾಖಲಾದಾಗ ಸಂಪೂರ್ಣ ವೈದ್ಯಕೀಯ ವೆಚ್ಚ, ಇಎಸ್ ಐ, ಭವಿಷ್ಯ ನಿಧಿ ಹಾಗೂ ಪಿಂಚಣಿ ಸೌಲಭ್ಯ, ವಸತಿ ಮತ್ತು ಮದುವೆ ಸಹಾಯಧನ, ವೃತ್ತಿ ಆದಾರಿತವಾಗಿ ಅಗತ್ಯ ಉಪಕರಣಗಳನ್ನು ಖರೀದಿಸಲು ಸಹಾಯಧನ ನೀಡಬೇಕು.

ಪುಟ 14 ಕ್ಕೆ





ಜನಸಂಖ್ಯೆಯ ಆಧಾರದ ಮೇಲೆ ದಕ್ಷಿಣ ಭಾರತದ ಕ್ಷೇತ್ರಗಳನ್ನು ಕಡಿಮೆ ಮಾಡುವುದು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ

ಭಾರತದ ಒಕ್ಕೂಟವು ಜಟಿಲ ಸಮಸ್ಯೆಯನ್ನು ಎದುರಿಸುತ್ತಿದೆ. 2026ರಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಸಂಸದೀಯ ಸ್ಥಾನಗಳ ಪುನರ್ ವಿಂಗಡಣೆ ಪ್ರಕ್ರಿಯೆಯು 'ದಕ್ಷಿಣದವರ ತಲೆಯ ಮೇಲೆ ತೂಗುಗತ್ತಿ' ಎಂದು ತಮಿಳುನಾಡು ಮುಖ್ಯಮಂತ್ರಿ ಎಚ್ಚರಿಸಿದ್ದಾರೆ. ಉತ್ತರದ ರಾಜ್ಯಗಳಲ್ಲಿನ ಸ್ಥಾನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತದೆ. ಆದರೆ, ದಕ್ಷಿಣ ರಾಜ್ಯಗಳಲ್ಲಿ ಸ್ಥಾನಗಳ ಸಂಖ್ಯೆ ಕಡಿಮೆಯಾಗುತ್ತದೆ ಅಥವಾ ಅದು ಹೆಚ್ಚಾದರೂ ಅವುಗಳ ಪಾಲು ಹೆಚ್ಚಾಗಬೇಕಾದಷ್ಟು ಹೆಚ್ಚಾಗುವುದಿಲ್ಲ ಎಂದು ದಕ್ಷಿಣ ಭಾರತದ ರಾಜ್ಯಗಳ ಮುಖ್ಯಮಂತ್ರಿಗಳು ಟೀಕಿಸುತ್ತಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ದಕ್ಷಿಣ ರಾಜ್ಯಗಳನ್ನು ಮೌನಗೊಳಿಸಲು ಮರುವಿಂಗಡಣೆಯ ಅಸ್ತ್ರವನ್ನು ಬಳಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಸಿಪಿಎಂ ಪಾಲಿಟ್ಬ್ಯೂರೋ ಸದಸ್ಯೆ ಬೃಂದಾ ಕಾರತ್ ಕೂಡ ಕೇಂದ್ರವು ಎಲ್ಲರೊಂದಿಗೂ ಚರ್ಚಿಸಿ ಕ್ರಮ ಕೈಗೊಳ್ಳಬೇಕು, ಅನುಮಾನಗಳನ್ನು ನಿವಾರಿಸಬೇಕು ಎಂದು ಪ್ರತಿಕ್ರಿಯಿಸಿದ್ದಾರೆ.

ಸಿ.ಸಿದ್ದಯ್ಯ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯು ಹೊಸ ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ದೇಶದ ಭವಿಷ್ಯ ಮತ್ತು ರಾಜಕೀಯ ದಿಕ್ಕಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಸಹಾ, ಪಾರದರ್ಶಕ ಹಾಗೂ ಸಮಗ್ರ ಚರ್ಚೆ ನಡೆಸದೆ ಕೇಂದ್ರ ಸರ್ಕಾರ ಏಕಪಕ್ಷೀಯ ನಿರ್ಧಾರಗಳನ್ನು ಹೇರುವುದು ವಾಡಿಕೆಯಾಗಿಬಿಟ್ಟಿದೆ. ಪ್ರತಿ ಹಂತದಲ್ಲೂ ತನ್ನ ಸ್ವಂತ ಹಿತಾಸಕ್ತಿಗಳಿಗಾಗಿ ಪ್ರಜಾಪ್ರಭುತ್ವ ವಿಧಾನಗಳನ್ನು ದುರ್ಬಲಗೊಳಿಸಿ, ಎಲ್ಲವನ್ನೂ ತನ್ನ ಕೈಗೆ ತೆಗೆದುಕೊಳ್ಳುವುದು ಸರ್ಕಾರದ ನೀತಿಯಾಗಿದೆ. ಇದು ರಾಜ್ಯಗಳ ಹಕ್ಕುಗಳ ಮೇಲಿನ ದಾಳಿಗಳು ಮತ್ತು ಅಧ್ಯಕ್ಷೀಯ ಮಾದರಿಯನ್ನು ಹೋಲುವ ಕೇಂದ್ರೀಕೃತ ಆಡಳಿತದ ಪ್ರವೃತ್ತಿಯಿಂದ ನಿರೂಪಿಸಲ್ಪಟ್ಟಿದೆ. ಅದೇ ಸಮಯದಲ್ಲಿ, ಎಲ್ಲವೂ ಸಾಂವಿಧಾನಿಕವಾಗಿ ಮತ್ತು ಕಾರ್ಯವಿಧಾನದ ಪ್ರಕಾರ ನಡೆಯುತ್ತಿದೆ ಎಂದು ಜನರನ್ನು ಮನವೊಲಿಸಲು ಅನೇಕ ಪ್ರಯತ್ನಗಳು ನಡೆಯುತ್ತಿವೆ.

ಕ್ಷೇತ್ರಗಳ ಪುನರ್ವಿಂಗಡಣೆಯೂ ಈ ಚಕ್ರದಲ್ಲಿ ಸಿಲುಕಿಕೊಂಡಿದ್ದು, ಹೊಸ ಸವಾಲುಗಳಿಗೆ ಕಾರಣವಾಗಿದೆ. ಜನಗಣತಿಯ ನಂತರ ಸಾಂವಿಧಾನಿಕವಾಗಿ ಕಡ್ಡಾಯಗೊಳಿಸಲಾದ ಪುನರ್ವಿಂಗಡಣೆಯು ಹಲವಾರು ಕಾರಣಗಳಿಂದ ಪ್ರಶ್ನಾರ್ಹವಾಗಿದೆ. ದಕ್ಷಿಣ ರಾಜ್ಯಗಳಲ್ಲಿ ಸ್ಥಾನಗಳ ಸಂಖ್ಯೆ ಕಡಿಮೆಯಾಗುತ್ತದೆ ಮತ್ತು ಅದು ಹೆಚ್ಚಾದರೂ ಅವರ ಪಾಲು ಹೆಚ್ಚಾಗಬೇಕಾದಷ್ಟು ಹೆಚ್ಚಾಗುವುದಿಲ್ಲ ಎಂದು ಈ ರಾಜ್ಯಗಳ ಮುಖ್ಯಮಂತ್ರಿಗಳು ಟೀಕಿಸುತ್ತಿದ್ದಾರೆ. ಈ ವಿಷಯದ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಾರ್ಚ್ 5 ರಂದು ಸರ್ವಪಕ್ಷ ಸಭೆ ಕರೆದರು. ಯಾರ ಸೀಟುಗಳೂ ಕಡಿಮೆಯಾಗುವುದಿಲ್ಲ ಎಂದು ಗೃಹ ಸಚಿವ ಅಮಿತ್ ಶಾ ಹೇಳುತ್ತಾರೆ. ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಈ ಭರವಸೆಯನ್ನು ನಂಬಲು ನಿರಾಕರಿಸಿ, ನಿಜವಾದ ಮರುವಿಂಗಡಣೆಯನ್ನು ಯಾವ ಆಧಾರದ ಮೇಲೆ ಕೈಗೊಳ್ಳಲಾಗುತ್ತದೆ ಎಂದು ತಿಳಿಸಬೇಕೆಂದು ಒತ್ತಾಯಿಸಿದರು. ಇದು ದಕ್ಷಿಣದ ವಿರುದ್ಧ ಬಿಜೆಪಿ ಮತ್ತು ಕೇಂದ್ರ ಸರ್ಕಾರ ನಡೆಸಿದ ರಾಜಕೀಯ ಪಿತೂರಿ ಎಂದೂ ಆರೋಪಿಸಿದರು. ಅಮಿತ್ ಶಾ ಅವರ ಭರವಸೆಗಳನ್ನು ನಂಬಲು ಸಾಧ್ಯವಿಲ್ಲ ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಪ್ರತಿಕ್ರಿಯಿಸಿದ್ದಾರೆ. ದಕ್ಷಿಣ ರಾಜ್ಯಗಳನ್ನು ಮೌನಗೊಳಿಸಲು ಮರುವಿಂಗಡಣೆಯ ಅಸ್ತ್ರವನ್ನು ಬಳಸಲಾಗುತ್ತಿದೆ ಎಂದು ಅವರು ಆರೋಪಿಸಿದರು. ಕೇಂದ್ರವು ನಿಜವಾಗಿಯೂ ಪ್ರಾಮಾಣಿಕವಾಗಿದ್ದರೆ, ಈ ಪುನರ್ವಿಂಗಡಣೆಯನ್ನು ಯಾವ ಆಧಾರದ ಮೇಲೆ ಮಾಡಲಾಗುತ್ತದೆ ಎಂದು ಅವರು ಪ್ರಶ್ನಿಸಿದರು. ಸಿಪಿಎಂ ಪಾಲಿಟ್ಬ್ಯೂರೋ ಸದಸ್ಯೆ ಬೃಂದಾ ಕಾರತ್ ಕೂಡ ಕೇಂದ್ರವು ಎಲ್ಲರೊಂದಿಗೂ ಚರ್ಚಿಸಿ ಕ್ರಮ ಕೈಗೊಳ್ಳಬೇಕು, ಅನುಮಾನಗಳನ್ನು ನಿವಾರಿಸಬೇಕು ಎಂದು ಪ್ರತಿಕ್ರಿಯಿಸಿದ್ದಾರೆ.

ಜನಸಂಖ್ಯಾ ಸಮಸ್ಯೆಯ ಹಿನ್ನೆಲೆ

ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ಆಧರಿಸಿದ ಪ್ರಜಾಪ್ರಭುತ್ವವು ಭಾರತೀಯ ಸಂವಿಧಾನದ ಅಡಿಪಾಯವಾಗಿದೆ. ಅದರಂತೆ, ಸಂವಿಧಾನದ 82ನೇ ವಿಧಿಯ ಪ್ರಕಾರ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ನಡೆಯಬೇಕು ಮತ್ತು ಬದಲಾವಣೆಗಳಿಗೆ ಅನುಗುಣವಾಗಿ ಶಾಸಕಾಂಗ ಕ್ಷೇತ್ರಗಳ ಸಂಖ್ಯೆ ಮತ್ತು ಗಡಿಗಳನ್ನು ಪರಿಷ್ಕರಿಸಬೇಕು. ಇತರ ಪ್ರಭಾವಗಳಿದ್ದರೂ 1976ರವರೆಗೆ ಹಾಗೆಯೇ ನಡೆಯಿತು.

1951 ಜನಗಣತಿ: 494 ಸ್ಥಾನಗಳು । ಜನಸಂಖ್ಯೆ: 36.1 ಕೋಟಿ (ಪ್ರತಿ ಸ್ಥಾನಕ್ಕೆ 7.3 ಲಕ್ಷ ಜನರು)

1961 ಜನಗಣತಿ: 522 ಸ್ಥಾನಗಳು । ಜನಸಂಖ್ಯೆ: 43.9 ಕೋಟಿ (ಪ್ರತಿ ಸ್ಥಾನಕ್ಕೆ 8.4 ಲಕ್ಷ ಜನರು)

1971 ಜನಗಣತಿ: 543 ಸ್ಥಾನಗಳು । ಜನಸಂಖ್ಯೆ: 54.8 ಕೋಟಿ (ಪ್ರತಿ ಸ್ಥಾನಕ್ಕೆ 10.1 ಲಕ್ಷ ಜನರು)

1971 ರ ಜನಗಣತಿಯಿಂದಲೂ ಲೋಕಸಭಾ ಸ್ಥಾನಗಳ ಸಂಖ್ಯೆ ಸ್ಥಗಿತಗೊಂಡಿದೆ. 1976 ರಲ್ಲಿ, ಕುಟುಂಬ ಯೋಜನಾ ಅಭಿಯಾನವು ಉತ್ತುಂಗದಲ್ಲಿದ್ದಾಗ, ಹೆಚ್ಚು ಸಮತೋಲಿತ ವ್ಯಾಯಾಮವನ್ನು ಮಾಡಲು ಅದನ್ನು 25 ವರ್ಷಗಳ ಕಾಲ ಮುಂದೂಡಲು ನಿರ್ಧರಿಸಲಾಯಿತು. ಜನಸಂಖ್ಯಾ ನಿಯಂತ್ರಣವನ್ನು ಉತ್ತೇಜಿಸಲು ಮತ್ತು ಹೆಚ್ಚಿನ ಜನಸಂಖ್ಯೆಯ ಬೆಳವಣಿಗೆ ಹೊಂದಿರುವ ರಾಜ್ಯಗಳು ಹೆಚ್ಚಿನ ಸ್ಥಾನಗಳನ್ನು ಪಡೆಯುವುದನ್ನು ತಡೆಯಲು ಇದನ್ನು ಮಾಡಲಾಯಿತು.

2000 ರವರೆಗೆ ಜಾರಿಯಲ್ಲಿದ್ದ ಈ ಸ್ಥಗಿತವನ್ನು 42 ನೇ ತಿದ್ದುಪಡಿ ಕಾಯ್ದೆಯಿಂದ ಪರಿಚಯಿಸಲಾಯಿತು. 2001 ರಲ್ಲಿ ಮತ್ತೆ, 84 ನೇ ತಿದ್ದುಪಡಿ ಕಾಯ್ದೆಯೊಂದಿಗೆ, ಇದನ್ನು ಇನ್ನೂ 25 ವರ್ಷಗಳ ಕಾಲ ಮುಂದೂಡಲಾಯಿತು, 2026 ರವರೆಗೆ ಇದು ಜಾರಿಯಲ್ಲಿದೆ.

ರಾಜ್ಯವಾರು ಜನಸಂಖ್ಯೆಯ ಏರಿಳಿತ

ಆದಾಗ್ಯೂ, ಜನಸಂಖ್ಯಾ ನಿಯಂತ್ರಣದ ಗುರಿಯತ್ತ ಎಲ್ಲಾ ರಾಜ್ಯಗಳು ಒಂದೇ ರೀತಿಯ ಪ್ರಗತಿಯನ್ನು ಸಾಧಿಸಿಲ್ಲ. ಸರಿಯಾದ ಆರೋಗ್ಯ ಮೂಲಸೌಕರ್ಯ, ಮಾನವ ಸಂಪನ್ಮೂಲ ಸೂಚಕಗಳಲ್ಲಿನ ಸುಧಾರಣೆ, ಸಾರ್ವಜನಿಕ ಕಲ್ಯಾಣ ಯೋಜನೆಗಳ ಅನುಷ್ಠಾನ ಮತ್ತು ಆರ್ಥಿಕ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ರಾಜ್ಯಗಳು ಮಾತ್ರ ಗುರಿಯತ್ತ ಪ್ರಗತಿ ಸಾಧಿಸಿದವು. ರಾಜ್ಯವಾರು ಜನಸಂಖ್ಯೆಯ ಏರಿಳಿತ, ಅದರಲ್ಲಿಯೂ ಉತ್ತರ ಮತ್ತು ದಕ್ಷಿಣ ಭಾರತದ ಜನಸಂಖ್ಯೆಯ ನಡುವಿನ ಏರಿಳಿತದ ವ್ಯತ್ಯಾಸಗಳು ಸಮಸ್ಯೆಗೆ ಕಾರಣವಾಗಿವೆ.

1976ರ ನಂತರದ ಕಾಲದಲ್ಲಿ ದಕ್ಷಿಣ ರಾಜ್ಯಗಳಾದ ಕೇರಳ, ತಮಿಳುನಾಡು, ಸಂಯುಕ್ತ ಆಂಧ್ರಪ್ರದೇಶ ಮತ್ತು ನಂತರ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಜನಸಂಖ್ಯಾ ನಿಯಂತ್ರಣದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದವು. ತಮಿಳುನಾಡಿನಲ್ಲಿ ಸಂತಾನೋತ್ಪತ್ತಿ ದರ 2001ರಲ್ಲಿ 2.0 ಇತ್ತು. ಅಂದರೆ, ಆ ರಾಜ್ಯದಲ್ಲಿ ಜನಸಂಖ್ಯೆಯು ಸ್ಥಿರತೆಯ ಹಂತವನ್ನು ತಲುಪಿದೆ ಎಂದು ಅಂದಾಜಿಸಲಾಗಿತ್ತು. ಅದೇ ಬಿಹಾರ ಮತ್ತು ಉತ್ತರ ಪ್ರದೇಶವನ್ನು ತೆಗೆದುಕೊಂಡರೆ, 2015ಲ್ಲಿ ಕೂಡಾ ಜನಸಂಖ್ಯಾ ಬೆಳವಣಿಗೆ ದರ 4.0 ರಷ್ಟಿತ್ತು. ಇತರ ಮಾನವಾಭಿವೃದ್ಧಿ ಸೂಚ್ಯಂಕಗಳಲ್ಲಿಯೂ ದಕ್ಷಿಣದ ರಾಜ್ಯಗಳು ಸ್ವಲ್ಪ ಉತ್ತಮವಾಗಿವೆ.

ದಕ್ಷಿಣ ಭಾರತದಲ್ಲಿ ಫಲವತ್ತತೆ ದರ ಕುಸಿತ

"ದಕ್ಷಿಣ ಭಾರತದ ಎಲ್ಲಾ ರಾಜ್ಯಗಳು ಫಲವತ್ತತೆ ದರ ಕುಸಿತದ ಬದಲಾಯಿಸಲಾಗದ ಬಿಕ್ಕಟ್ಟನ್ನು ಎದುರಿಸುತ್ತಿವೆ, ಇದು ರಾಷ್ಟ್ರೀಯ ಸರಾಸರಿ 2.1 ಕ್ಕಿಂತ ಬಹಳ ಕಡಿಮೆಯಾಗಿದೆ. ತಮಿಳುನಾಡು 1.4 ರ ಅತ್ಯಂತ ಕಡಿಮೆ ಫಲವತ್ತತೆ ದರವನ್ನು ಹೊಂದಿದೆ, ನಂತರ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕೇರಳದಲ್ಲಿ 1.5 ಮತ್ತು ಕರ್ನಾಟಕದಲ್ಲಿ 1.6 ಮಾತ್ರ" ಎಂದು ಮುಂಬೈನ ಅಂತರರಾಷ್ಟ್ರೀಯ ಜನಸಂಖ್ಯಾ ವಿಜ್ಞಾನ ಸಂಸ್ಥೆಯ (ಐಐಪಿಎಸ್) ವರದಿಯನ್ನು ಆದರಿಸಿ ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ 25, ಅಕ್ಟೋಬರ್ 2024ರಂದು ವರದಿ ಮಾಡಿದೆ.

ಪರಿಣಾಮವಾಗಿ, ಹಿಂದಿ ರಾಜ್ಯಗಳ, ಇನ್ನೂ ವಿಶೇಶವಾಗಿ ಹೇಳುವುದಾದರೆ, ದೊಡ್ಡ ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಬಿಹಾರದ ಜನಸಂಖ್ಯೆ ಮಾತ್ರ ಕಡಿಮೆಯಾಗದೆ ಹೆಚ್ಚುತ್ತಲೇ ಬಂದಿದೆ. ಜನಸಂಖ್ಯಾ ನಿಯಂತ್ರಣ ಕ್ರಮಗಳಲ್ಲಿ ನಿರ್ಲಕ್ಷ್ಯ, ಧಾರ್ಮಿಕ ಸಂಬಂಧಗಳನ್ನು ಒಳಗೊಂಡಂತೆ ಇದರ ಹಿಂದೆ ಹಲವು ರಾಜಕೀಯ ಕಾರಣಗಳು ಇರುವುದು ಸ್ಪಷ್ಟ. ಈಗಿರುವ ಕಾನೂನಿನ ಪ್ರಕಾರ, ಕ್ಷೇತ್ರಗಳ ಪುನರ್ವಿಂಗಡಣೆ ಕಾರ್ಯಸೂಚಿಯಲ್ಲಿ ಬರುತ್ತಿದೆ.

ಎರಡು ರೀತಿಯಲ್ಲಿ ಅನ್ಯಾಯ

ಅಮಿತ್ ಶಾ ಅವರ ಹೇಳಿಕೆಯನ್ನು ನೋಡಿದರೆ, 2026 ರಲ್ಲಿ ಚುನಾವಣಾ ಕ್ಷೇತ್ರಗಳ ಮರು ವಿಂಗಡಣೆಯ ಪ್ರಕ್ರಿಯೆ ಆರಂಭವಾಗುವ ಸಾಧ್ಯತೆ ಕಾಣುತ್ತಿದೆ. ಕೇವಲ ಜನಸಂಖ್ಯೆಯ ಆಧಾರದ ಮೇಲೆ ಸ್ಥಾನಗಳನ್ನು ನಿರ್ಧರಿಸಿದರೆ, ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ದಕ್ಷಿಣದಲ್ಲಿ ಸ್ಥಾನಗಳು ಕಡಿಮೆಯಾಗುತ್ತವೆ ಮತ್ತು ಈಗಾಗಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಯುಪಿ, ಬಿಹಾರದಂತಹ ರಾಜ್ಯಗಳಲ್ಲಿನ ಸ್ಥಾನಗಳು ಇನ್ನಷ್ಟು ಹೆಚ್ಚಾಗುತ್ತವೆ.

ನಾಲ್ಕು ಕೋಟಿ ಜನಸಂಖ್ಯೆ ಹೊಂದಿರುವ ತೆಲಂಗಾಣದಲ್ಲಿ 17 ಲೋಕಸಭಾ ಸ್ಥಾನಗಳಿವೆ. 12.6 ಕೋಟಿ ಜನಸಂಖ್ಯೆ ಹೊಂದಿರುವ ಬಿಹಾರದಲ್ಲಿ 40 ಸ್ಥಾನಗಳಿವೆ. ಸರಾಸರಿಯಾಗಿ, ತೆಲಂಗಾಣದಲ್ಲಿ ಪ್ರತಿ 23 ಲಕ್ಷ ಜನರಿಗೆ ಒಂದು ಸ್ಥಾನವಿದ್ದರೆ, ಬಿಹಾರದಲ್ಲಿ ಪ್ರತಿ 32 ಲಕ್ಷ ಜನರಿಗೆ ಒಂದು ಸ್ಥಾನ ಇದೆ ಎಂಬುದು ಇದರರ್ಥ. ಅದರಲ್ಲಿಯೂ ಸಹ ಜನಸಂಖ್ಯೆಯನ್ನು ಅವಲಂಬಿಸಿ ಅನುಪಾತದ ಆಧಾರದ ಮೇಲೆ ಹೆಚ್ಚಿಸಿದರೆ, ಆ ಸೂತ್ರದ ಪ್ರಕಾರ ಈ ವ್ಯತ್ಯಾಸ ಇನ್ನೂ ಬಹಳಷ್ಟು ಹೆಚ್ಚಾಗಬಹುದು. ಅಂದರೆ ಇಲ್ಲಿ ಒಂದು ಹೆಚ್ಚಾದರೆ, ಅಲ್ಲಿ ನಾಲ್ಕು ಹೆಚ್ಚಾಗುತ್ತದೆ.

ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುತ್ತದೆ

ಲೋಕಸಭೆಯ 543 ಸ್ಥಾನಗಳಲ್ಲಿ 129 ಸ್ಥಾನಗಳು ದಕ್ಷಿಣದ 5 ರಾಜ್ಯಗಳಿಗೆ ಸರಿಸುಮಾರು ಶೇಕಡಾ 24 ರಷ್ಟು ಪ್ರಾತಿನಿಧ್ಯವನ್ನು ನೀಡುತ್ತವೆ. ಈಗ, ಈ ರಾಜ್ಯಗಳಿಗೆ ಅಂದಾಜು ಸ್ಥಾನಗಳನ್ನು ನೋಡಿದರೆ, ಪ್ರತಿ ಕ್ಷೇತ್ರಕ್ಕೆ 20 ಲಕ್ಷ ಜನಸಂಖ್ಯಾ ಅನುಪಾತವನ್ನು ಮಾತ್ರ ಆಧರಿಸಿ, ಒಟ್ಟು ಲೋಕಸಭಾ ಸ್ಥಾನಗಳು 753 ಆಗುತ್ತವೆ. ಆ ಸಂದರ್ಭದಲ್ಲಿ, ಲೋಕಸಭೆಯಲ್ಲಿ ರಾಜ್ಯಗಳ ಪ್ರಾತಿನಿಧ್ಯವು ಸರಿಸುಮಾರು ಹೀಗಿರುತ್ತದೆ:

ಕರ್ನಾಟಕ ಈಗಿನ 28 ಸ್ಥಾನಗಳಿಂದ 36ಕ್ಕೆ,

ಪುಟ 10 ಕ್ಕೆ

ಜನಸಂಖ್ಯೆಯ ಆಧಾರದ ಮೇಲೆ..... ಪುಟ 9 ರಿಂದ

ತೆಲಂಗಾಣ ಈಗಿನ 17 ಸ್ಥಾನಗಳಿಂದ 20ಕ್ಕೆ, ಆಂಧ್ರಪ್ರದೇಶ ಈಗಿನ 25 ಸ್ಥಾನಗಳಿಂದ 28ಕ್ಕೆ, ತಮಿಳುನಾಡು ಈಗಿನ 39 ಸ್ಥಾನಗಳಿಂದ 41ಕ್ಕೆ ಹೆಚ್ಚಳವಾದರೆ, ಕೇರಳ ಈಗಿನ 20 ಸ್ಥಾನಗಳಿಂದ 19ಕ್ಕೆ ಇಳಿದು ಒಂದು ಸ್ಥಾನ ಕಡಿಮೆಯಾಗುತ್ತದೆ. ಅದನ್ನು ಒಟ್ಟುಗೂಡಿಸಿದರೆ 753 ರಲ್ಲಿ 144 ಆಗಿರುತ್ತದೆ. ಈ ರಾಜ್ಯಗಳ ಪ್ರಮಾಣಾನುಗುಣ ಹೆಚ್ಚಳದೊಂದಿಗೆ, ಶೇಕಡಾವಾರು ಪ್ರಾತಿನಿಧ್ಯವು ಮತ್ತಷ್ಟು ಕಡಿಮೆಯಾಗುತ್ತದೆ. ಈ ರಾಜ್ಯಗಳಿಗೆ ಒಟ್ಟು ಪ್ರಾತಿನಿಧ್ಯವು ಶೇಕಡಾ 19 ರಷ್ಟಾಗುತ್ತದೆ. ಅದು ಶೇಕಡಾ ಐದು ರಷ್ಟು ಕುಸಿತ.

ಉತ್ತರ ಪ್ರದೇಶದಲ್ಲಿ ಅತಿ ದೊಡ್ಡ ಏರಿಕೆ

ಒಂದು ಅಂದಾಜಿನ ಪ್ರಕಾರ ಉತ್ತರ ಪ್ರದೇಶದಲ್ಲಿ ಈಗಿನ 80ರಿಂದ 91ಕ್ಕೆ ಹೆಚ್ಚಾಗುತ್ತವೆ. ಬಿಹಾರಕ್ಕೆ 10 ಹೆಚ್ಚಾಗಲಿದ್ದು, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿಯೂ ಗಣನೀಯವಾಗಿ ಏರಿಕೆ ಕಂಡುಬರಲಿದೆ.

ಮತ್ತೊಂದು ಅಂದಾಜಿನ ಪ್ರಕಾರ, 20 ಲಕ್ಷ ಜನಸಂಖ್ಯಾ ಅನುಪಾತವನ್ನು ಅನುಸರಿಸಿ ಕ್ಷೇತ್ರ ವಿಂಗಡಣೆ ಮಾಡಿದರೆ, ಉತ್ತರ ಪ್ರದೇಶದಲ್ಲಿ 80 ರಿಂದ 128 ಕ್ಕೆ (ಆ ರಾಜ್ಯದ ಜನಸಂಖ್ಯೆ 2001ರಲ್ಲಿ 16 ಕೋಟಿ ಇದ್ದದ್ದು ಈಗ 24 ಕೋಟಿಗೆ ಹೆಚ್ಚಳವಾಗಿದೆ), ಬಿಹಾರದಲ್ಲಿ 40 ರಿಂದ 70 ಕ್ಕೆ, ಮಧ್ಯಪ್ರದೇಶದಲ್ಲಿ 29 ರಿಂದ 47 ಕ್ಕೆ, ಮಹಾರಾಷ್ಟ್ರದಲ್ಲಿ 48 ರಿಂದ 68 ಕ್ಕೆ ಮತ್ತು ರಾಜಸ್ಥಾನದಲ್ಲಿ 25 ರಿಂದ 44 ಸ್ಥಾನಗಳಿಗೆ ತೀವ್ರ ಏರಿಕೆ ಕಂಡುಬರಲಿದೆ.

1977 ರಲ್ಲಿ, ಸರಾಸರಿಯಾಗಿ ಪ್ರತಿಯೊಬ್ಬ ಸಂಸದರು 10.11 ಲಕ್ಷ ಮತದಾರರನ್ನು ಪ್ರತಿನಿಧಿಸುತ್ತಿದ್ದರು. ಸರಾಸರಿ ಮತದಾರರ ಸಂಖ್ಯೆಯು ಪ್ರತಿ ಕ್ಷೇತ್ರಕ್ಕೆ ಎಷ್ಟಿರಬೇಕು ಎಂಬುದರ ಮೇಲೆ ಯಾವುದೇ ನಿರ್ಬಂಧವಿಲ್ಲ. ಹೊಸ ಸಂಸತ್ತಿನಲ್ಲಿ 888 ಸದಸ್ಯರಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಆದ್ದರಿಂದ, ಹಳೆಯ ಅನುಪಾತ ಸೂತ್ರವು ಮಾನ್ಯವಾಗಿಲ್ಲ. ಇದರ ಹೊರತಾಗಿ, ಇನ್ನೊಂದು ಸಮಸ್ಯೆಯೂ ಇದೆ. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾದಾಗ ಅವರಿಗೆ ಮೀಸಲಿಡುವ ಮೂರನೇ ಒಂದು ಭಾಗದಷ್ಟು ಸೀಟುಗಳನ್ನು ಸೇರಿಸಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಎರಡೂ ಅಂಶಗಳಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದು ಸಹ ಒಂದು ಪ್ರಮುಖ ಅಂಶವಾಗಲಿದೆ. ಇದಕ್ಕೆ ಸಮಂಜಸವಾದ ಪರಿಹಾರವನ್ನು ಕಂಡುಹಿಡಿಯಲು, ಜನಸಂಖ್ಯಾ ಅನುಪಾತದ ಜೊತೆಗೆ ಇತರ ಪ್ರೋತ್ಸಾಹಕ ಸೂಚಕಗಳನ್ನು ನಿರ್ಧರಿಸಬೇಕು.

ಭಾಷೆ ಮತ್ತು ನಿಧಿ ಹಂಚಿಕೆಯ ಸಮಸ್ಯೆಗಳು

ಈ ಬದಲಾವಣೆಗಳು ತಾಂತ್ರಿಕವಾಗಿ ಮತ್ತು ರಾಜಕೀಯವಾಗಿ ಸಾಕಷ್ಟು ಪ್ರಭಾವ ಬೀರುತ್ತವೆ. ಬಿಜೆಪಿ ಎಷ್ಟೇ ಬಾರಿ ದಾಳ ಉರುಳಿಸಿದರೂ, ದಕ್ಷಿಣದಲ್ಲಿ ಸ್ವಂತವಾಗಿ ಅಧಿಕಾರಕ್ಕೆ ಬರುವಷ್ಟು ಬಲವನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕರ್ನಾಟಕವನ್ನು ಹೊರತುಪಡಿಸಿ, ಇತರ ರಾಜ್ಯಗಳಲ್ಲಿ ಅದು ಪ್ರತ್ಯಕ್ಷ ಮತ್ತು ಪರೋಕ್ಷ ಮಿತ್ರರನ್ನು ಅವಲಂಬಿಸಿದೆ. ಇಂತಹ ಸಮಯದಲ್ಲಿ, ಉತ್ತರ ಭಾರತದಲ್ಲಿ ಸೀಟುಗಳನ್ನು ಹೆಚ್ಚಿಸುವುದು ಮತ್ತು ದಕ್ಷಿಣ ಭಾರತದಲ್ಲಿ ಪುನರ್ವಿಂಗಡಣೆಯ ಹೆಸರಿನಲ್ಲಿ ಸೀಟುಗಳನ್ನು ಕಡಿಮೆ ಮಾಡುವುದು ರಾಜಕೀಯ ಪ್ರೇರಿತವಾಗಿರುತ್ತದೆ.

ಆದ್ದರಿಂದಲೇ, ಈ ವಿಷಯದಲ್ಲಿ ಮೋದಿ–ಶಾ ಜೋಡಿ ಯಾವ ತಂತ್ರಗಳನ್ನು ರೂಪಿಸುತ್ತಿದೆ ಎಂಬುದು ತಿಳಿದಿಲ್ಲ. ಜನಸಂಖ್ಯೆ ಹೆಚ್ಚಾಗಿರುವುದಕ್ಕೆ ಚಾರಿತ್ರಿಕ ಕಾರಣಗಳು ಇವೆಯಾದರೂ ಆ ಪ್ರತಿಪಾದನೆ ಮೂಲಕ ಉತ್ತರದ ರಾಜ್ಯಗಳಿಗೆ ಸೀಟುಗಳನ್ನು ಕಡಿಮೆ ಮಾಡುವುದು ಸರಿಯಲ್ಲ ಎಂದು ಬಿಜೆಪಿಯ ಬೆಂಬಲಿಗರು ವಾದಿಸುತ್ತಿದ್ದಾರೆ. ಉತ್ತರದಿಂದ ಕೂಲಿಕಾರರು ಬಂದು ಅಗ್ಗವಾಗಿ ದುಡಿಯುತ್ತಿರುವ ಕಾರಣದಿಂದಲೇ ತಮಿಳುನಾಡಿನ ಸಂಪತ್ತು ಹೆಚ್ಚಾಗಿದೆ ಎಂಬ ವಿಚಿತ್ರ ಹೇಳಿಕೆಯನ್ನೂ ಅವರು ನೀಡುತ್ತಿದ್ದಾರೆ. ಈಗಾಗಲೇ ಸ್ವಂತ ಬಹುಮತ ಕಳೆದುಕೊಂಡಿರುವ ಬಿಜೆಪಿ, ನಾಳೆ ಮತ್ತಷ್ಟು ಕಡಿತವಾಗದಂತೆ ಉತ್ತರ ಭಾರತದ ರಾಜಕೀಯ ನಡೆಸುತ್ತಿದೆಯೇ ಎಂಬ ಸಂಶಯವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. ನಿಜ ಹೇಳಬೇಕೆಂದರೆ, ನಿಧಿಗಳ ಹಂಚಿಕೆಯಲ್ಲೂ, ಹಿಂದಿ ಭಾಷೆಯ ಹೇರಿಕೆಯಲ್ಲೂ ಇದೇ ವೈರುಧ್ಯಗಳು ಸ್ಪಷ್ಟವಾಗುತ್ತಿದೆ. ಅದಕ್ಕಾಗಿಯೇ ಇದನ್ನು ಕೇವಲ ಚುನಾವಣಾ ಸ್ಥಾನಗಳ ಸಮಸ್ಯೆಯಾಗಿ ನೋಡುವುದು ತಪ್ಪಾಗುತ್ತದೆ. ಭಾರತ ದೇಶದ ಏಕತೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳುವುದು, ಫೆಡರಲ್ ಸಂವಿಧಾನದ ಅಡಿಯಲ್ಲಿ ರಾಜ್ಯಗಳ ಹಕ್ಕುಗಳನ್ನು ರಕ್ಷಿಸುವುದು ಇದರಲ್ಲಿ ಅಡಗಿವೆ. ಸೀಟುಗಳನ್ನು ಹೆಚ್ಚಿಸಿ, ದಕ್ಷಿಣ ಭಾರತವನ್ನು ದಕ್ಷಿಣ ರಾಜ್ಯಗಳನ್ನು ಮೌನಗೊಳಿಸು ಪ್ರಯತ್ನವು ಏಕತೆಯ ಭಾವಕ್ಕೆ ಭಂಗ ಬರಲಿದೆ. ನೀತಿ ನಿರ್ಧಾರಗಳಲ್ಲಿನ ಸಮತೋಲನದ ಮೇಲೆಯೂ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ದೇಶದ ಏಕತೆ ಮತ್ತು ಒಕ್ಕೂಟ ತತ್ವಗಳನ್ನು ರಕ್ಷಿಸಲು ಜನತೆ ಮುಂದಾಗಬೇಕಿದೆ.

ಕರ್ನಾಟಕದ ಶ್ರಮಜೀವಿಗಳಿಂದ ಅಹೋರಾತ್ರಿ ಹೋರಾಟಗಳ ಪರ್ವ... ಪುಟ 8 ರಿಂದ

2025ರಿಂದಲೇ ಆದ್ಯತೆ ಮೇರೆಗೆ ಹಮಾಲಿ ಕಾರ್ಮಿಕರು, ಆಟೋ ಮತ್ತು ಟ್ಯಾಕ್ಸಿ ಚಾಲಕರು, ಮನೆಕೆಲಸಗಾರರು, ಗಿಗ್ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ವಾಹನಗಳ ಮೆಕಾನಿಕ್ ಗಳು ಹಾಗೂ ಟೈಲರ್ ಗಳಿಗೆ ಭವಿಷ್ಯನಿಧಿ ಜಾರಿಗೆ ತರಬೇಕು. ರಾಜ್ಯದಲ್ಲಿ ಜೀವ ವಿಮಾ ಪ್ರತಿನಿಧಿಗಳನ್ನು ರಾಜ್ಯ ಸರ್ಕಾರದ ಕಲ್ಯಾಣ ಮಂಡಳಿಯಲ್ಲಿ ಸೇರ್ಪಡೆ ಮಾಡಬೇಕು.

ಕಾರ್ಮಿಕರ ಪರವಾದ ಕಾನೂನುಗಳು ಜಾರಿಯಾಗಬೇಕು

29 ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಿರುವ ಕೇಂದ್ರದ ಶಾಸನಗಳ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಜಾರಿಮಾಡಬಾರದು ಮತ್ತು ಕಾರ್ಮಿಕರ ಪರವಾದ ಕಾನೂನುಗಳು ಜಾರಿಯಾಗಬೇಕು, ಸಾರ್ವಜನಿಕ ಉದ್ದಿಮೆಗಳನ್ನು, ಸಾರ್ವಜನಿಕ ಸೇವೆಗಳು ಹಾಗೂ ವಿದ್ಯುಚ್ಛಕ್ತಿ ವಲಯ ಇವುಗಳನ್ನು ಖಾಸಗೀಕರಣ ಮಾಡುವ ನೀತಿಗಳನ್ನು ಕೈ ಬಿಡಬೇಕು, ವಿದ್ಯುತ್ ತಿದ್ದುಪಡಿ ಮಸೂದೆ 2020 ಅನ್ನು ತಿರಸ್ಕರಿಸಬೇಕು, ಅಕುಶಲ ಕಾರ್ಮಿಕರಿಗೆ ಸಮಾನ ಕನಿಷ್ಟ ವೇತನ 31,566 ರೂ ಜಾರಿ ಮಾಡಬೇಕು, ಗುತ್ತಿಗೆ ಕಾರ್ಮಿಕರ ಖಾಯಂ ಮಾಡಬೇಕು, ಸಾರ್ವಜನಿಕ ಉದ್ಯಮಗಳಲ್ಲಿ, ನಿಗಮ ಮಂಡಳಿಗಳಲ್ಲಿ ದುಡಿಯುವ ಗುತ್ತಿಗೆ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು, ಖಾಸಗಿ ವಲಯದ ಉದ್ಯೋಗದಲ್ಲೂ ಎಸ್.ಟಿ/ಎಸ್.ಟಿ ಗೆ ಮೀಸಲಾತಿ ಸೌಲಭ್ಯ ಒದಗಿಸಬೇಕು, ಅರಣ್ಯ ಹಕ್ಕುಗಳ ಕಾಯಿದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಮೂಲಕ ಆದಿವಾಸಿಗಳ ಬದುಕಿನ ಹಕ್ಕುಗಳ ರಕ್ಷಣೆ, ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್ ಕೆ ಜಿ, ಯುಕೆಜಿ ಪ್ರಾರಂಭಿಸಬೇಕು, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಮಿಕರಿಗೆ ವೇತನ ಪರಿಷ್ಕರಣೆ, ಗ್ರಾಚ್ಯುಟಿ ಪಾವತಿಗೆ ಕ್ರಮ, ನಿವೃತ್ತಿ ವೇತನ ಸೌಲಭ್ಯ ನೀಡಬೇಕು. ನರೇಗಾ ಯೋಜನೆಯಲ್ಲಿ 200 ದಿನಗಳ ಕೆಲಸ ಹಾಗೂ ದಿನಕ್ಕೆ 700 ರೂ ವೇತನ ನೀಡಬೇಕು ಮತ್ತು ಈ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಬೇಕು, ಇವು ಬೇಡಿಕೆಗಳ ಪಟ್ಟಿಯಲ್ಲಿವೆ.

ಕಟ್ಟಡ ಕಾರ್ಮಿಕರು

ಕಟ್ಟಡ ಕಾರ್ಮಿಕರ ಪ್ರಮುಖ ಬೇಡಿಕೆಗಳೆಂದರೆ, ಹೈಕೋರ್ಟ್ ತೀರ್ಪಿನಂತೆ ಮೂರು ವರ್ಷಗಳ ಶೈಕ್ಷಣಿಕ ಸಹಾಯಧನ ಬಿಡುಗಡೆ, ಕಟ್ಟಡ ಕಾರ್ಮಿಕರ ಕಾಯ್ದೆ–1996 ಮತ್ತು ಸೆಸ್ ಕಾಯ್ದೆ–1996 ಇವುಗಳನ್ನು ರದ್ದು ಮಾಡಬಾರದು, ಸಹಜ ಮರಣ ಪರಿಹಾರ ಧನವನ್ನು 2 ಲಕ್ಷಕ್ಕೆ ಮತ್ತು ಅಪಘಾತ ಮರಣ ಪರಿಹಾರವನ್ನು 10 ಲಕ್ಷ ರೂ. ಗಳಿಗೆ ಹೆಚ್ಚಿಸಬೇಕು, ಸ್ವಂತ ಮನೆ ಕಟ್ಟಿಕೊಳ್ಳಲು 5 ಲಕ್ಷ ರೂ. ಸಹಾಯಧನ ನೀಡಬೇಕು, ಕಾರ್ಮಿಕರ ನಿಧಿ ದುರ್ಬಳಕೆ ತಪ್ಪಿಸಲು ಎಲ್ಲ ರೀತಿಯ ಕಿಟ್ ಖರೀದಿ ನಿಲ್ಲಿಸಬೇಕು, ಬಾಕಿ ಇರುವ ಸೌಲಭ್ಯಗಳ



ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಬೇಕು ಎಂಬುದಾಗಿವೆ.

ಕಾರ್ಯನಿರತ ಪತ್ರಕರ್ತರ ಕಾಯ್ದೆಗೆ ತಿದ್ದುಪಡಿ ತರಬೇಕು

ಯೋಗ್ಯ ವೇತನ ಮತ್ತು ಉದ್ಯೋಗ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಮಾಧ್ಯಮ ಸಂಸ್ಥೆಗಳ ಪತ್ರಕರ್ತರು ಮತ್ತು ಕಾರ್ಮಿಕರನ್ನು ಸೇರಿಸಲು ಕಾರ್ಯನಿರತ ಪತ್ರಕರ್ತರ ಕಾಯಿದೆಗೆ ತಿದ್ದುಪಡಿ ತರಬೇಕು ಮತ್ತು ಮುದ್ರಣ, ಎಲೆಕ್ಟ್ರಾನಿಕ್, ಡಿಸಿಟಲ್ ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪತ್ರಕರ್ತರಿಗೆ ವೇತನ ಪರಿಷ್ಕರಿಸಲು ಅನುಕೂಲವಾಗುವಂತೆ ಹೊಸ ವೇತನ ಮಂಡಳಿ ರಚಿಸಬೇಕು ಎಂಬ ಬೇಡಿಕೆಯನ್ನೂ ಇಡಲಾಗಿದೆ.

–ಸಿಚಿ

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	No. 12, 18th Cross, Sampangirama Nagar, Bangalore 560027 (Karnataka)
2.	Periodicity of Publication	:	weekly
3.	Printer's Name	:	G.N.NAGARAJ
	(Whether Citizen of India? If Foreigner, State the Country of Origin)	:	Indian
4.	Address	:	No. 12, 18th Cross, Sampangirama Nagar, Bangalore 560027
5.	Editor`s Name	:	S.Y.GURUSHANTH
	(Whether Citizen of India? If Foreigner, State the Country of Origin)	:	Indian
	Address	:	No. 12, 18th Cross, Sampangirama Nagar, Bangalore 560027 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	No. 12, 18th Cross, Sampangirama Nagar, Bangalore 560027 (Karnataka)

I G.N.NAGARAJ, here by declare that the particulars given above are true to the best of my knowledge and belief.

Sd/-

G.N.NAGARAJ

Publisher

Date : March 5, 2025

Bangalore

ಸಿಪಿಎಂ ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿಯಾಗಿ ಮೊಹಮ್ಮದ್ ಸಲೀಂ ಮರು ಆಯ್ಕೆ

ಪಶ್ಚಿಮ ಬಂಗಾಳ ರಾಜ್ಯದ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿರುವ ಭಾರತ ಕಮ್ಯುನಿಸ್ಟ್ ಪಕ್ಷ–ಮಾರ್ಕ್ಸ್‌ವಾದಿಯ ಪಶ್ಚಿಮ ಬಂಗಾಳದ 27ನೇ ರಾಜ್ಯ ಸಮ್ಮೇಳನದಲ್ಲಿ ಮೊಹಮ್ಮದ್ ಸಲೀಂ ಅವರನ್ನು ಎರಡನೇ ಬಾರಿಗೆ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ. ಫೆಬ್ರವರಿ 22ರಿಂದ 25ರವರೆಗೆ ಹೂಗ್ಲಿ ಜಿಲ್ಲೆಯ ಡಂಕುಣಿಯಲ್ಲಿ ನಡೆದ ಸಮ್ಮೇಳನದಲ್ಲಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. 67 ವರ್ಷದ ಮೊಹಮ್ಮದ್ ಸಲೀಂ ಬಂಗಾಳಿ ರಾಜಕೀಯದಲ್ಲಿ ಅನುಭವಿ ಹೋರಾಟಗಾರ ಮತ್ತು ಶ್ರೇಷ್ಠ ವಾಗ್ಮಿ ಎಂದು ಹೆಸರುವಾಸಿಯಾಗಿದ್ದಾರೆ. ವಿದ್ಯಾರ್ಥಿ ಮತ್ತು ಯುವಜನ ಚಳವಳಿಯ ಮೂಲಕ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ ಸಲೀಂ, ಬಂಗಾಳಿ, ಇಂಗ್ಲಿಷ್, ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲರು. ಕೋಲ್ಕತ್ತಾದ ಗಿಡಾರ್ ಪುರದವರಾದ ಅವರು 2015ರಿಂದ ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರಾಗಿದ್ದಾರೆ.

ಸಲೀಂ ಅವರ ರಾಜಕೀಯ ಪ್ರಯಾಣ

ಸ್ಟುಡೆಂಟ್ ಫೆಡರೇಶನ್ ಆಫ್ ಇಂಡಿಯಾ(SFI) ಮೂಲಕ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದ ಸಲೀಂ, ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (ಡಿವೈಎಫ್ಐ)ದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ಅವರ ರಾಜಕೀಯ ಪ್ರಯಾಣದಲ್ಲಿ ಗಮನಾರ್ಹ ಮೈಲಿಗಲ್ಲುಗಳು ಹೀಗಿವೆ: 1990 ರಿಂದ ಎರಡು ಬಾರಿ ರಾಜ್ಯಸಭೆಗೆ ಆಯ್ಕೆ–2001–2004ರವರೆಗೆ ಬಂಗಾಳ ಸಚಿವ ಸಂಪುಟದ ಸದಸ್ಯರಾಗಿ–2004 ಮತ್ತು 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. 1998 ರಿಂದ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿದ್ದಾರೆ.

ಐತಿಹಾಸಿಕ ಸಮ್ಮೇಳನ

ಈ ಸಮ್ಮೇಳನವು ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಒಂದು ಮಹತ್ವದ ತಿರುವು ನೀಡಿತು. ಹಿರಿಯ ನಾಯಕ ಬಿಮನ್ ಬಸು ಅವರು ಧ್ವಜಾರೋಹಣ ನೆರವೇರಿಸುದರೊಂದಿಗೆ ಸಮ್ಮೇಳನವು ಪ್ರಾರಂಭವಾಯಿತು. ಪೊಲಿಟ್ ಬ್ಯೂರೊ ಸದಸ್ಯರು ಮತ್ತು ಸಂಯೋಜಕರಾದ ಪ್ರಕಾಶ್ ಕಾರಟ್ ಸಮ್ಮೇಳವನ್ನು ಉದ್ಘಾಟಿಸಿದರು. ರಾಷ್ಟ್ರೀಯ ಮಟ್ಟದಲ್ಲಿ ಮಹತ್ವದ ಈ ಸಮ್ಮೇಳನದಲ್ಲಿ ಪೊಲಿಟ್ ಬ್ಯೂರೊ ಸದಸ್ಯರುಗಳಾದ ಮಾಣಿಕ್ ಸರ್ಕಾರ್, ಬೃಂದಾ ಕಾರಟ್, ಸೂರ್ಯಕಾಂತ ಮಿಶ್ರಾ, ಎಂ.ಎ. ಬೇಬಿ, ತಪನ್ ಸೇನ್, ಅಶೋಕ್ ದಾವ್ಲೆ, ನಿಲೋತ್ಪಲ್ ಬಸು, ಮತ್ತು ರಾಮಚಂದ್ರ ಡೋಮ್ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸಿದ್ದರು.



ಬೃಹತ್ ಸಮಾರೋಪ ರ್‍ಯಾಲಿ

ಸಮ್ಮೇಳನದ ಸಮಾರೋಪ ಸಮಾರಂಭವು ಫೆಬ್ರವರಿ 25ರಂದು ಡಂಕುಣಿಯ ಫುಟ್ಬಾಲ್ ಕ್ರೀಡಾಂಗಣದಲ್ಲಿ ನಡೆಯಿತು. ಮಧ್ಯಾಹ್ನ 2 ಗಂಟೆಗೆ ಆರಂಭವಾಗಬೇಕಿದ್ದ ಕಾರ್ಯಕ್ರಮಕ್ಕೆ ಕೆಲವು ಗಂಟೆಗಳ ಮೊದಲು ಕ್ರೀಡಾಂಗಣವು ಜನರಿಂದ ತುಂಬಿತ್ತು. ಬುರ್ದ್ವಾನ್ ಮತ್ತು ಹೌರಾದಿಂದ ಸಾವಿರಾರು ಜನರು ಸೇರಿದ್ದರಿಂದ, ಡಂಕುಣಿಯ ಇತಿಹಾಸದಲ್ಲಿ ಇದುವರೆಗಿನ ಅತಿ ದೊಡ್ಡ ಜನಸಂದಣಿಯಾಗಿತ್ತು.

ಹತ್ತು ಅಂಶಗಳ ಯೋಜನೆಗೆ ಅನುಮೋದನೆ

ಪಕ್ಷವನ್ನು ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಬಲಪಡಿಸಲು ಮತ್ತು ಜನರ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಚಳುವಳಿಯನ್ನು ಬಲಪಡಿಸಲು ಕಾರಣವಾಗುವ ಹತ್ತು ಅಂಶಗಳ ಯೋಜನೆಯನ್ನು ಸಮ್ಮೇಳನವು ಸರ್ವಾನುಮತದಿಂದ ಅನುಮೋದಿಸಿತು. "ಆರ್‌ಎಸ್‌ಎಸ್–ಬಿಜೆಪಿ ಕೋಮು ವಿಕೋಪ ಮತ್ತು ತೃಣಮೂಲ ಕಾಂಗ್ರೆಸ್‌ನ ಪ್ರಜಾಪ್ರಭುತ್ವ ವಿರೋಧಿ ಆಡಳಿತವನ್ನು ಕೊನೆಗೊಳಿಸೋಣ" ಎಂಬ ಬಲವಾದ ಘೋಷಣೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು. ರಾಜಕೀಯ–ಸಾಂಸ್ಥಿಕ ಹೇಳಿಕೆಯ ಜೊತೆಗೆ, "ಬಂಗಾಳದ ಭವಿಷ್ಯವನ್ನು ಸುರಕ್ಷಿತಗೊಳಿಸಲು ಪಕ್ಷವನ್ನು ಹೇಗೆ ಬಲಪಡಿಸುವುದು" ಎಂಬ ಪ್ರತ್ಯೇಕ ದಾಖಲೆಯನ್ನು ಸಹ ಸಮ್ಮೇಳನದಲ್ಲಿ ಅನುಮೋದಿಸಲಾಯಿತು. ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಎಡ ಚಳುವಳಿಯನ್ನು ಮತ್ತೆ ಬಲಪಡಿಸುವ ಗುರಿಯೊಂದಿಗೆ ನಡೆದ ಈ ಸಮ್ಮೇಳನವು ಮುಂಬರುವ ದಿನಗಳಲ್ಲಿ ರಾಜ್ಯದ ರಾಜಕೀಯ ರಂಗದಲ್ಲಿ ಪ್ರಮುಖ ಬದಲಾವಣೆಗಳನ್ನು ತರುವ ನಿರೀಕ್ಷೆಯಿದೆ.

ಪೆನ್ಷನ್ 5,000 ರೂ, ಮತ್ತು ಇತರೆ ಬೇಡಿಕೆಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ

ದೆಹಲಿಯ ಜಂತರ್-ಮಂತರ್‌ನಲ್ಲಿ ಅಂಗವಿಕಲರ ಪ್ರತಿಭಟನೆ

ಇತ್ತೀಚಿಗೆ ದೇಶದ ವಿವಿಧ ಭಾಗಗಳಿಂದ 14 ಸಂಘ–ಸಂಸ್ಥೆಗಳನ್ನು ಪ್ರತಿನಿಧಿಸಿ ದೆಹಲಿಯ ಜಂತರ್–ಮಂತರ್‌ನಲ್ಲಿ ಸಾವಿರಾರು ಅಂಗವಿಕಲರು ತಮ್ಮ ಹಲವಾರು ಬೇಡಿಕೆಗಳ ಹಕ್ಕೊತ್ತಾಯಗಳಿಗಾಗಿ ಪ್ರತಿಭಟನೆ ನಡೆಸಿದರು.



ಮುಖ್ಯವಾಗಿ ಈ ಪ್ರತಿಭಟನೆ ಇಂದಿರಾಗಾಂಧಿ ರಾಷ್ಟ್ರೀಯ ಅಂಗವಿಕಲರ ಪೆನ್ಷನ್ ಯೋಜನೆಯಿಂದ ವಿತರಿಸಲಾಗುವ ಅಲ್ಪ ಮೊತ್ತದ ಮಾಸಾಶನ ಕುರಿತಂತೆ ಗಮನ ಸೆಳೆಯಿತು. 2012ರಿಂದ ಕೇಂದ್ರ ಸರ್ಕಾರ ಕೇವಲ 300ರೂಗಳನ್ನು ನೀಡುತ್ತಿದೆ.

ಈ ಪ್ರತಿಭಟನೆಗೆ ಧ್ವನಿಯಾಗಿ ಹಲವಾರು ರಾಜಕೀಯ ಪಕ್ಷಗಳ ಸಂಸದರು ಭಾಗವಹಿಸಿ ಬೆಂಬಲ ನೀಡಿ ನಾವೂ ಈ ಕುರಿತಂತೆ ಸಂಸತ್ತಿನಲ್ಲಿ ಮಾತನಾಡುವುದಾಗಿ ಎಂದು ಹೇಳಿ ಭರವಸೆ ನೀಡಿದ್ದಾರೆ. ಇದರಲ್ಲಿ ಪ್ರಮುಖವಾಗಿ ಸಿಪಿಎಂ ಪಕ್ಷದ ಸಂಸದರಾದ ಜಾನ್ ಬ್ರಿಟಾಸ್, ವಿ. ಶಿವದಾಸನ್, ಬಿಕಶ್ರಂಜನ್ ಭಟ್ಟಾಚಾರ್ಜಿ, ಎ.ಎ. ರಹೀಮ್. ಡಿಎಂಕೆ ಪಕ್ಷದ ಸಂಸದರಾದ ತಿರುಚಿ ಶಿವ. ಸಮಾಜವಾದಿ ಪಕ್ಷದ ಸಂಸದರಾದ ಜಾವೇದ್ ಅಲಿ ಖಾನ್. ಎನ್‌ಸಿಪಿ ಪಕ್ಷದ ಸಂಸದರಾದ ಫೌಜಿಯಾ ಖಾನ್. ಟಿಎಂಸಿ ಪಕ್ಷದ ಸಂಸದರಾದ ಮಾಸೂಮ್ ನೂರ್. ಸಿಪಿಐ ಪಕ್ಷದ ಸಂಸದರಾದ ಪಿ. ಸಂತೋಷಕುಮಾರ್. ಕೇರಳ ಕಾಂಗ್ರೆಸ್ ಪಕ್ಷದ ಸಂಸದರಾದ ಜೋಸ್ ಕೆ ಮಣಿ. ಐಯುಎಂಎಲ್ ಪಕ್ಷದ ಸಂಸದರಾದ ಹ್ಯಾರಿಸ್ ಬೀರನ್. ಜೆಎಂಎಂ ಪಕ್ಷದ ಸಂಸದರಾದ ಮಹುವಾ ಮಾಜಿ. ಪಕ್ಷೇತರ ಸಂಸದರಾದ ಅಜಿತ್‌ಕುಮಾರ ಬುಯಾನ್ ಮಾತನಾಡಿ ಅಂಗವಿಕಲರ ಬೇಡಿಕೆಗಳಿಗೆ ಒಗ್ಗಟ್ಟನ್ನು ವ್ಯಕ್ತಪಡಿಸಿದ್ದಾರೆ.

ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ (**NPRD**) ಯ ಪದಾಧಿಕಾರಿಗಳು, ರಾಜ್ಯಗಳನ್ನು ಪ್ರತಿನಿಧಿಸಿ ಮಾತನಾಡಿದ್ದಾರೆ.

ಇದೇ ಸಂದರ್ಭದಲ್ಲಿ ಅಂಗವಿಕಲರ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಸಚಿವ ವೀರೇಂದ್ರ ಕುಮಾರ್ ಅವರಿಗೆ ಸಲ್ಲಿಸಲಾಯಿತು.

ಮನವಿಯಲ್ಲಿ ಪ್ರಮುಖವಾಗಿ, ಶೇಕಡಾ 40 ಅಥವಾ ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳನ್ನು ಮಾನದಂಡದ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳೆಂದು ಗುರುತಿಸುತ್ತದೆ. ಇವರನ್ನು ವಿವಿಧ ಅರ್ಹತೆಗಳಿಗೆ ಅರ್ಹರನ್ನಾಗಿ ಮಾಡುತ್ತದೆ. ಆದರೆ ಕೇಂದ್ರ ಸರ್ಕಾರದ ಇಂದಿರಾಗಾಂಧಿ ರಾಷ್ಟ್ರೀಯ ಅಂಗವೈಕಲ್ಯ ಪಿಂಚಣಿ ಯೋಜನೆ (ಐಜಿಎನ್‌ಡಿಪಿಎಸ್) ಗೆ ಅರ್ಹರಾಗಲು ಶೇಕಡಾ 80 ಅಥವಾ ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರಬೇಕು. ಬಿಪಿಎಲ್ ಕಾರ್ಡು ಇರಬೇಕು, ಅಲ್ಲದೇ ಅವರಿಗೆ 18ವರ್ಷ ವಯಸ್ಸು ಆಗಿರಬೇಕು. ಇದು 2011 ರ ಜನಗಣತಿಯ ಪ್ರಕಾರದಂತೆ 100 ಜನ ಅಂಗವಿಕಲರಲ್ಲಿ 3.84 ಜನರಿಗೆ ಮಾತ್ರ ಈ ಯೋಜನೆಯ ಪ್ರಯೋಜನ ಪಡೆಯುತ್ತಿರುವ ಅಚ್ಚರಿ ಸಂಗತಿಯನ್ನು ಪ್ರಸ್ತಾಪಿಸಲಾಗಿದೆ. ಇದನ್ನು ಪರಿಗಣಿಸಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಇಲಾಖೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿದಂತೆ ಪಿಂಚಣಿ ಮೊತ್ತವನ್ನು "ಆವರ್ತಕ ಪರಿಷ್ಕರಣೆಗೆ ಅವಕಾಶ ಮಾಡಿ ಸಮಂಜಸವಾದ ಮೊತ್ತಕ್ಕೆ ಹೆಚ್ಚಿಸಬೇಕು. ಇದರಿಂದಾಗಿ ಅಗತ್ಯವುಳ್ಳ ಅಂಗವಿಕಲರು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಯೋಗ್ಯವಾದ ಪಿಂಚಣಿ ಪಡೆಯುತ್ತಾರೆ. ಇದನ್ನು ಮನವಿಯಲ್ಲಿ ಒತ್ತಾಯಿಸಲಾಗಿದೆ. ಪ್ರತಿಶತ 40 ಮತ್ತು ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರುವ ಎಲ್ಲರಿಗೂ ಪಿಂಚಣಿ ನೀಡುವಂತೆ ಒತ್ತಾಯಿಸಲಾಗಿದೆ.

ರಾಜ್ಯಗಳು ತಮ್ಮದೇ ಆದ ಯೋಜನೆಗಳನ್ನು ಹೊಂದಿದ್ದರೂ, ಅನೇಕ ರಾಜ್ಯಗಳಲ್ಲಿ ನಿಧಿಯ ಕೊರತೆ ಅಡಚಣೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಬಹು ಹಂತದ ಅಂಚಿನಲ್ಲಿರುವ ಅಂಗವಿಕಲರಿಗೆ ಪಿಂಚಣಿಯನ್ನು ಹೆಚ್ಚಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ.

ಅಂಗವಿಕಲರು ಘನತೆಯಿಂದ ಬದುಕಲು ಮತ್ತು ಅವರ ಮೂಲಭೂತ ಅಗತ್ಯಗಳನ್ನು ಪೂರೈಸಲು ಕೇಂದ್ರ ಸರ್ಕಾರ ಪಿಂಚಣಿಯನ್ನು 5,000ರೂಗಳಿಗೆ ಹೆಚ್ಚಿಸಬೇಕೆಂದು ಒತ್ತಾಯಿಸಲಾಗಿದೆ. ರಾಜಸ್ಥಾನದ ಶಾಸನಸಭೆಯಲ್ಲಿ ಅಂಗೀಕರಿಸಿದಂತೆ ಸಂಸತ್ತಿನಲ್ಲೂ ಅಂಗವಿಕಲರ ಪಿಂಚಣಿಯನ್ನು ಕಾನೂನು ಬದ್ಧ ಹಕ್ಕಾಗಿ ಖಾತರಿಪಡಿಸುವ ಕಾನೂನನ್ನು ಜಾರಿಗೆ ತರಬೇಕು. ಉದ್ಯೋಗ ಖಾತ್ರಿಯಲ್ಲಿ ನೊಂದಾಯಿತರಾದ ಅಂಗವಿಕಲರಿಗೆ ಉದ್ಯೋಗ ನೀಡಬೇಕು. ಅಂಗವಿಕಲರ ವ್ಯಕ್ತಿಗಳ ಹಕ್ಕುಗಳು ಸೆಕ್ಷನ್ 24(1)ರಲ್ಲಿ ಹೇಳಿದಂತೆ ಯಾವುದೇ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅಡಿಯಲ್ಲಿ ನೀಡುವ ಸಹಾಯದ ಪ್ರಮಾಣವು ಇತರರಿಗಿಂತ ಅಂಗವಿಕಲರಿಗೆ ಪ್ರತಿಶತ ಇಪ್ಪತ್ತೈದು ಹೆಚ್ಚಾಗಿರುವಂತೆ ಜಾರಿಗಾಗಿ ಒತ್ತಾಯಿಸಲಾಗಿದೆ.

ಕರ್ನಾಟಕದಿಂದ ಅಂಗವಿಕಲರು, ಪಾಲಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು.

ಕಲ್ಯಾಣ ಕರ್ನಾಟಕದ 'ಕಲ್ಯಾಣ'ವೆಂತು......... ಪುಟ 3 ರಿಂದ

ಇದು ಭಾರತ ಒಕ್ಕೂಟ ಸರ್ಕಾರದ ಹಾಗೂ ರಾಜ್ಯ ಸರ್ಕಾರಗಳ ಹೊಣೆಗಾರಿಕೆ.

ಮಂಡಳಿಗೆ ಸದ್ಯ ಕೇಂದ್ರ ಸರಕಾರದ ಕೊಡುಗೆ ಏನೂ ಇಲ್ಲವಾಗಿದ್ದು, ಕನಿಷ್ಟ ರಾಜ್ಯ ಸರಕಾರ ನೀಡುವ ಅನುದಾನದಷ್ಟೇ ಕೇಂದ್ರ ಸರಕಾರವೂ ಸಹ ಅನುದಾನ ನೀಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಇಲ್ಲಿಯ ಜನಸಂಖ್ಯೆಗನುಗುಣವಾಗಿ ಸುಸಜ್ಜಿತ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳನ್ನು ಮಂಜೂರು ಮಾಡಬೇಕಿದೆ.

ಭೂಮಿ ಇಲ್ಲದವರಿಗೆ ಭೂಮಿ ನೀಡುವ ಜೊತೆಗೆ ಈ ಭಾಗದ ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು ಪ್ರಾರಂಭಿಸಿ ಉದ್ಯೋಗ ಸೃಷ್ಟಿಸುವುದು ಇನ್ನು ಏನೇನೋ ಆಗಬೇಕಿದೆ. ಆದರೆ ಆಳುವ ಸರಕಾರಗಳ ಇಚ್ಚಾಶಕ್ತಿಯ ಕೊರತೆ, ಭ್ರಷ್ಟತೆ, ಬಲಾಢ್ಯರ ಪರವಾದ ನೀತಿಗಳು ಕಲ್ಯಾಣ ಕರ್ನಾಟಕದ ಹಿಂದುಳಿದಿರುವಿಕೆಯನ್ನು ಹಾಗೆಯೇ ಉಳಿಸುತ್ತವೆ. ಜನಜಾಗೃತಿ–ಪ್ರಬಲ ಪ್ರಜಾಸತ್ತಾತ್ಮಕ ಚಳುವಳಿ ಈ ಸಮಸ್ಯೆಗಳನ್ನು ನಿವಾರಿಸುವಂತಾಗಬೇಕು. ಅದೊಂದೆ ನಿಜವಾದ ಪರಿಹಾರ.

‘ವಿಕಸಿತ್ ಭಾರತ್’: ‘ಮಿಗ’ದ ನಂತರ ಈಗ ‘ಮಹಾಕುಂಭ’ದ ಬಾಲಂಗೋಚಿ!

ಇದು ಅಮೃತ ಕಾಲ

45 ದಿನಗಳ ‘ಮಹಾಕುಂಭ’ ಮುಗಿದಿದೆ. ಪ್ರಧಾನ ಮಂತ್ರಿಗಳು ಇದು ಐಕ್ಯತೆಯ ಮಹಾಯಜ್ಞವಾಗಿತ್ತು ಎಂದು ಈ ಸಂದರ್ಭದಲ್ಲಿ ಉದ್ಗರಿಸಿದ್ದಾರೆ. ಗುಲಾಮಿಕೆಯ ಮಾನಸಿಕತೆಯನ್ನು ಮುರಿದು ಒಂದು ಹೊಸ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿದೆ ಎಂದು ಹಾಡಿ ಹೊಗಳಿದ್ದಾರೆ. ನಿಜ, ಅಯೋಧ್ಯೆಯ ‘ಪ್ರಾಣ ಪತ್ರಿಷ್ಠಾಪನೆ’ ಸಂದರ್ಭದಲ್ಲೂ ಅವರು ಹೀಗೇ ಹೇಳಿದ್ದರು, ಆದರೆ ಲೋಕಸಭಾ ಚುನಾವಣೆಗಳ ಮೂಲಕ ಜನತೆ ಬೇರೆಯದೇ ಸಂದೇಶ ನೀಡಿದ್ದಾರೆ ಎಂಬುದು ಬೇರೆ ವಿಷಯ.

ಈ 45 ದಿನಗಳಲ್ಲಿ 65 ಕೋಟಿಗಿಂತಲೂ ‘ಹಿಂದೂ’ಗಳು ‘ಅಮೃತ ಸ್ನಾನ’ ಮಾಡಿದರು ಎಂದು ಉತ್ತರಪ್ರದೇಶದ ಮುಖ್ಯಮಂತ್ರಿಗಳು ಹೇಳಿದ್ದಾರೆ.

ತ್ರಿವೇಣಿ ಸಂಗಮದಲ್ಲಿ ಯಾತ್ರಾರ್ಥಿಗಳಿಗೆ ಸಲ್ಲಿಸಿದ ಸೇವೆಗಳಲ್ಲಿ ಏನಾದರೂ ಕುಂದು ಕೊರತೆಗಳಿದ್ದರೆ, ಗಂಗೆ, ಯಮುನೆ ಮತ್ತು ಸರಸ್ವತಿ ಕ್ಷಮಿಸಬೇಕು, ಇಂತಹ ಬೃಹತ್ ಏರ್ಪಾಟು ಮಾಡುವುದು ಸುಲಭದ ಕೆಲಸವೇನಲ್ಲ ಎಂದು ಭಾವುಕರಾಗಿ ಹೇಳಿದ ಪ್ರಧಾನಿಗಳು, ಈ ಸಂದರ್ಭದಲ್ಲಿ ಎರಡೆರಡು ಕಡೆಗಳಲ್ಲಿ ನಡೆದ ಕಾಲ್ತುಳಿತಗಳಲ್ಲಿ ಪ್ರಾಣ ಕಳಕೊಂಡವರ ಕುಟುಂಬಗಳ ಕ್ಷಮೆ ಕೇಳಲಿಲ್ಲ. ಇರಲಿ, ಅದು ಕೂಡ ಬೇರೆ ಸಂಗತಿ.

‘ಡಬಲ್ ಇಂಜಿನ್’ ಸರಕಾರದ ಪ್ರಕಾರವೇ ಕನಿಷ್ಟ 30 ಮಂದಿ ಮೌನಿ ಅಮಾವಾಸ್ಯೆಯ ದಿನ(ಜನವರಿ28–29) ಕಾಲ್ತುಳಿತದಲ್ಲಿ ಪ್ರಾಣ ಕಳಕೊಂಡರು, ಎರಡು ವಾರಗಳ ನಂತರ (ಫೆ.15) ನವದೆಹಲಿ ರೈಲ್ವೇ ನಿಲ್ದಾಣದಲ್ಲಿ ಮತ್ತೆ ಕಾಲ್ತುಳಿತ ಸಂಭವಿಸಿ 18 ಮಂದಿ ಪ್ರಾಣ ಕಳಕೊಂಡರು ಎಂದು ಸರಕಾರದ ಅಂಕಿ–ಅಂಶಗಳೇ ಹೇಳಿದ್ದವು. ವಾಸ್ತವ ಸಂಖ್ಯೆ ಇನ್ನೂ ಬಹಳ ಹೆಚ್ಚಿರಬಹುದು ಎಂದು ಊಹಿಸಲಾಗಿದೆ. ನಿಜಸಂಖ್ಯೆಯನ್ನು ಮರೆಮಾಚಲು ಎರಡೂ ಸರಕಾರಗಳು ಹರಸಾಹಸ ಪಟ್ಟಿದ್ದೂ ಕಾಣಬಂದಿದೆ. ಮತ್ತು ಇವೆರಡೂ ವ್ಯವಸ್ಥೆಯಲ್ಲಿನ ಗಂಭೀರ ಲೋಪಗಳಿಂದ ಸಂಭವಿಸಿದ ದುರಂತಗಳು ಎಂದು ಈ ಕುರಿತ ವಿವಿಧ ವರದಿಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ ಎಂಬುದನ್ನೂ ಗಮನಿಸಬಹುದು.

ಪ್ರಧಾನಿಗಳು ಇನ್ನೂ ಮುಂದುವರೆದು “ಈಬಾರಿ 144 ವರ್ಷಗಳ ನಂತರ ನಡೆದ ಇಂತಹ ಮಹಾಕುಂಭ ಭಾರತದ ಅಭಿವೃದ್ಧಿಯ ಪಯಣದಲ್ಲಿ ಒಂದು ಹೊಸ ಅಧ್ಯಾಯದ ಸಂದೇಶವನ್ನು ನೀಡಿದೆ. ಅದು ವಿಕಸಿತ ಭಾರತದ ಸಂದೇಶ” ಎಂದೂ ಹೇಳಿದರು.

ಮೊದಲನೆಯದಾಗಿ, ಈ ‘144 ವರ್ಷಗಳ’ ಬಗ್ಗೆಯೇ ಹಲವು ವಿರೋಧಾಭಾಸಗಳಿವೆ. ಏಕೆಂದರೆ ಉತ್ತರಪ್ರದೇಶದ ಯೋಗಿ ಆದಿತ್ಯನಾಥ ಸರಕಾರ ಪ್ರಕಟಿಸಿರುವ ಒಂದು ದಸ್ತಾವೇಜು ಮತ್ತು ಸಿಎಜಿ ವರದಿ ಕೂಡ 2013ರಲ್ಲಿ ನಡೆದ ಕುಂಭಮೇಳ ‘144 ವರ್ಷಗಳ ನಂತರ ನಡೆದಿರುವ ಮಹಾಕುಂಭ ಮೇಳ’ ಎಂದು ಉಲ್ಲೇಖಿಸಿದೆ ಎಂಬ ಸಂಗತಿಯತ್ತ ವಿಶ್ಲೇಷಕರೊಬ್ಬರು (ದಿ ವೈರ್, ಫೆ.11) ಗಮನ ಸೆಳೆದಿದ್ದಾರೆ.

ಅದೇನೇ ಇರಲಿ, ವಾಶಿಂಗ್ಟನ್‌ನಲ್ಲಿ ತಮ್ಮ ಪರಮ ಮಿತ್ರ ‘ಟಾರಿಫ್’ ರಾಗಾಲಾಪನೆಯನ್ನು ಬಿಡದಿದ್ದರೂ, ತಮ್ಮ ‘ವಿಕಸಿತ್ ಭಾರತ್’ ಸ್ಲೋಗನನ್ನು ಅವರ ‘ಮಗ’ (ಮೇಕ್ ಅಮೆರಿಕಾ ಗ್ರೇಟ್)ಕ್ಕೆ ಹೊಂದಿಕೊಳ್ಳುವಂತೆ ‘ಮಿಗ’(ಮೇಕ್ ಇಂಡಿಯ ಗ್ರೇಟ್) ಮಾಡಿದಂತೆ, ಇಲ್ಲಿ ‘ಮಹಾಕುಂಭ’ದೊಂದಿಗೆ ಬೆಸೆದಿದ್ದಾರೆ ಎಂಬುದನ್ನು ಗಮನಿಸಬಹುದು.

ಆದರೆ ಇದು ಅವರ ಎಂದಿನ ಶಬ್ದಾಡಂಬರ ಮಾತ್ರವಾಗಿರದೆ, ಅಯೋಧ್ಯಾ ರಾಮಮಂದಿರವನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡಂತೆ, ಮಹಾಕುಂಭವನ್ನೂ ರಾಜಕೀಯ ಪ್ರಯೋಜನಕ್ಕೆ ಬಳಸುವ ಪ್ರಯತ್ನ ಎಂದು ಹಲವು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ವಾಸ್ತವವಾಗಿ ಈ ರಾಜಕೀಯವನ್ನು ಯೋಗಿ ಸರಕಾರ 2018ರಲ್ಲೇ ಆರಂಭಿಸಿತು ಎಂದು ಒಬ್ಬ ವೀಕ್ಷಕರು ಗಮನಿಸಿದ್ದಾರೆ. ಪ್ರತಿ 12 ವರ್ಷಗಳಿಗೊಮ್ಮೆ ‘ಮಹಾಕುಂಭ’ ಅಥವ ‘ಪೂರ್ಣ ಕುಂಭ’ ಮತ್ತು 6 ವರ್ಷಗಳಿಗೊಮ್ಮೆ ‘ಅರ್ಧಕುಂಭ’ ಮತ್ತು ಪ್ರತಿ ವರ್ಷ ‘ಮಾಘಮೇಳ’ ನಡೆಯುವುದು ವಾಡಿಕೆ. ಆ ಪ್ರಕಾರ 2019ರಲ್ಲಿ ‘ಅರ್ಧಕುಂಬ’ ನಡೆಯಬೇಕಾಗಿತ್ತು. ಆದರೆ ಯೋಗಿ ಸರಕಾರ 2018ರಲ್ಲಿ ತಮ್ಮ ಕೇಸರಿ ರಾಜಕೀಯಕ್ಕೆ ಹೊಂದಿಕೊಳ್ಳುವಂತೆ ಅದನ್ನು ‘ಕುಂಭ’ದ ಮಟ್ಟಕ್ಕೇರಿಸಿತು ಮತ್ತು ಮೊತ್ತ ಮೊದಲ ಬಾರಿಗೆ ಪ್ರಯಾಗ್ ರಾಜ್ (ಅದುವರೆಗೆ ಅಲಹಾಬಾದ್)ನ ತ್ರಿವೇಣಿ ಸಂಗಮದ ಬಳಿಯೇ ತಮ್ಮ ಸಚಿವ ಸಂಪುಟ ಸಭೆಯನ್ನು ನಡೆಸಿತು. 2019ರಲ್ಲಿ ಅದರ ಪುನರಾವರ್ತನೆಯಾಯಿತು.

ಈ ರಾಜಕೀಯದ ಭಾಗವಾಗಿ, ಈ ಮಹಾಕುಂಭದ 7500 ಕೋಟಿ ರೂ.ಗಳ ರಾಜಕೀಯ ಸಿದ್ಧತೆ ಮತ್ತು ಮಾರ್ಕೆಟಿಂಗ್ ನಡೆಸಲಾಯಿತು ಎಂಬದೀಗ ಸ್ಪಷ್ಟವಾಗುತ್ತಿದೆ. ಒಂದು ವಿದೇಶಿ ಕಾರ್ಪೊರೇಟ್‌ಇ.ವೈ.ನ್ನು ಇದರಲ್ಲಿ ಒಳಗೊಳ್ಳಲಾಯಿತು ಎಂದು ವರದಿಯಾಗಿದೆ. ಪ್ರಧಾನಿ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿಗಳ ಫೋಟೋಗಳಿದ್ದ ‘ದಿವ್ಯ–ಭವ್ಯ–ಡಿಜಿಟಲ್‌ಮಹಾಕುಂಭ 2025’ ಪ್ರಯಾಗರಾಜ್’, ‘ಆಧ್ಯಾತ್ಮ ಮತ್ತು ನಂಬಿಕೆಯ ಸಂಗಮ’ ಇತ್ಯಾದಿ ಪೋಸ್ಟರುಗಳು ದೇಶಾದ್ಯಂತ ಕಾಣಿಸಿಕೊಳ್ಳಲಾರಂಭಿಸಿದವು.

ಇಂತಹ ರಾಜಕೀಯಕರಣ, ಈ ಬಾರಿಯ ಮಹಾಕುಂಭವನ್ನು ‘ಆಧ್ಯಾತ್ಮ ಮತ್ತು ನಂಬಿಕೆಯ ಸಂಗಮ’ದ ಬದಲು ವೀಡಿಯೋ ಶೂಟ್‌ಗಳನ್ನು ವೈರಲ್ ಮಾಡುವ ಒಂದು ಜಾತ್ರೆಯಾಗಿ ಪರಿವರ್ತಿಸಿದೆ, .“ಎಂಥ ನಂಬಿಕೆ, ಎಂಥ ಭಕ್ತಿ? ಜನ ಬರುತ್ತಾರೆ, ಮುಳುಗು ಹಾಕುತ್ತಾರೆ, ಫೋಟೋ ಕ್ಲಿಕ್ಕಿಸುತ್ತಾರೆ, ಹೋಗುತ್ತಾರೆ..” ಎಂದು ಒಬ್ಬ ಪ್ರತ್ಯಕ್ಷ ವೀಕ್ಷಕರು ಹೇಳುತ್ತಾರೆ(ಶೃತಿ ವ್ಯಾಸ್, ನಯಾ ಇಂಡಿಯ, ಜ.16). ಇದು ‘ನ್ಯೂ ಇಂಡಿಯ’ದಲ್ಲಿ, ಅಲಹಾಬಾದ್



ಕಾಲ್ತುಳಿತಕ್ಕೆ ಬಲಿಯಾದವರ ಲೆಕ್ಕ 30..30..30..30..30..30

ಮಹಾಕುಂಭಕ್ಕೆ ಬಂದವರ ಲೆಕ್ಕ 10ಕೋಟಿ.20ಕೋಟಿ.30 ಕೋಟಿ.. 40ಕೋಟಿ.50ಕೋಟಿ.60ಕೋಟಿ

ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಫೇಸ್‌ಬುಕ್

ಬದಲು ಪ್ರಯಾಗರಾಜ್ ಎಂದು ಮರುನಾಮಕರಣಗೊಂಡ ನಗರದಲ್ಲಿ ನಡೆಯುತ್ತಿರುವ ಮೊದಲ ಕುಂಭ ಎಂದು ಅವರು ಮಾರ್ಮಿಕವಾಗಿ ಟಿಪ್ಪಣಿ ಮಾಡುತಾರೆ.

‘ಡಬಲ್ ಇಂಜಿನ್’ಗಳ ನಡುವೆಯೇ ಸ್ಪರ್ಧೆ?

“ಉತ್ತರಪ್ರದೇಶ ಸರಕಾರ, ಆಡಳಿತ ಮತ್ತು ಜನತೆ ಯೋಗಿ ಆದಿತ್ಯನಾಥರ ನೇತೃತ್ವದಲ್ಲಿ ಸಾಮೂಹಿಕವಾಗಿ ಈ ‘ಐಕ್ಯತೆಯ ಮಹಾಕುಂಭ’ವನ್ನು ಯಶಸ್ವಿಗೊಳಿಸಿದ್ದಾರೆ ಎಂದು ಉತ್ತರಪ್ರದೇಶದಿಂದ ಆರಿಸಲ್ಪಟ್ಟ ಒಬ್ಬ ಸಂಸದನಾಗಿ ನಾನು ಹೆಮ್ಮೆಯಿಂದ ಹೇಳಬಲ್ಲೆ” ಎಂದು ಪ್ರಧಾನಿಗಳು ಪ್ರಶಂಸಿಸಿದ್ದಾರೆ. ಆದರೆ ಎರಡು ಕಾಲ್ತುಳಿತಗಳು ಮತ್ತು ಕೇಂದ್ರ ಸರಕಾರದ ಇಲಾಖೆಗಳು ತ್ರಿವೇಣಿ ಸಂಗಮದಲ್ಲಿನ ನೀರಿನ ಬಗ್ಗೆ ನೀಡಿರುವ ವರದಿಗಳು ಬೇರೆಯೇ ಕತೆ ಹೇಳುತ್ತವೆ ಎಂದು ಕೆಲವು ವೀಕ್ಷಕರು ಹೇಳುತ್ತಾರೆ.(ಇಂದ್ರಶೇಖರ್ ಸಿಂಗ್, ದಿ ವೈರ್,

ಮೌನಿ ಅಮಾವಾಸ್ಯೆಯಂದು ‘ಅಮೃತ ಸ್ನಾನ’ದ ಸಂದರ್ಭದ ದುರಂತ ನಡೆಯುವ ವರೆಗೆ ಮಹಾಕುಂಭದ ಸಿದ್ಧತೆ ಕೇಂದ್ರ ಸರಕಾರದ ಹತೋಟಿಯಲ್ಲಿತ್ತು, ಮೇಲೆ ಹೇಳಿದ ಇ.ವೈ. ಕಂಪನಿಗೆ ಇದರ ನಿರ್ವಹಣೆಯ ಕಾಂಟ್ರಾಕ್ಟು ಇದರ ಭಾಗವಾಗಿತ್ತು, ಕೇಂದ್ರ ಗೃಹಮಂತ್ರಿಗಳು ಇದರ ನೇರ ಉಸ್ತುವಾರಿ ನಡೆಸುತ್ತಿದ್ದರು ಎನ್ನಲಾಗಿದೆ. ಕಾಲ್ತುಳಿತದ ದುರಂತದ ಎರಡು ದಿನ ಹಿಂದಿನ ವರೆಗೂ ಅಲ್ಲೇ ಇದ್ದರು ಎಂದು ಮಾಧ್ಯಮಗಳು ಎತ್ತಿ ತೋರಿದ್ದವು.

ಆದರೆ ಮೌನಿ ಅಮಾವಾಸ್ಯೆಯ ದಿನದ ಕಾಲ್ತುಳಿತದ ನಂತರ ಚಿತ್ರ ಬದಲಾದಂತೆ ಕಾಣುತ್ತದೆ. ಈ ದುರಂತಕ್ಕೆ ವಿಐಪಿಗಳಿಗೆ ವಿಶೇಷ ವ್ಯವಸ್ಥೆ ಮತ್ತು ಈ ಸಂದರ್ಭಕ್ಕಾಗಿ ನಿರ್ಮಿಸಿದ್ದ ಸೇತುವೆಗಳನ್ನು ಮುಚ್ಚಿದ್ದು ಕಾರಣ ಎನ್ನಲಾಗಿದ್ದು, ಇದಕ್ಕೆ ಕಾರಣ ಯಾರು ಎಂಬ ಪ್ರಶ್ನೆ ಎದ್ದಿತು. ಸಹಜವಾಗಿ ಈ ದುರಂತದ ಹೊಣೆಗಾರಿಕೆ ಮುಖ್ಯಮಂತ್ರಿಗಳ ಮೇಲೆಯೇ ಬಂತು. ಅವರು ನ್ಯಾಯಾಂಗ ತನಿಖೆಗೆ ಆದೇಶಿಸಿದರು.

ಫೆ.15ರ ನವದೆಹಲಿ ರೈಲು ನಿಲ್ದಾಣದಲ್ಲಿನ ದುರಂತ ಮತ್ತೆ ಚಿತ್ರವನ್ನು ಬದಲಾಯಿಸಿತು.

ಈ ನಡುವೆ ‘ಅಮೃತ ಸ್ನಾನ’ ನಡೆದಲ್ಲಿನ ನೀರು ಮುಳುಗು ಹಾಕಲೂ ಯೋಗ್ಯವಲ್ಲದಷ್ಟು ಕಲುಷಿತಗೊಂಡಿದೆ ಎಂದು ಕೇಂದ್ರೀಯ ಪ್ರದೂಷಣೆ ಹತೋಟಿ ಮಂಡಳಿ (ಸಿಪಿಸಿಬಿ)ಯು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ)ಗೆ ವರದಿ ಸಲ್ಲಿಸಿರುವುದಾಗಿ ಸುದ್ದಿ ಪ್ರಕಟವಾಯಿತು. ಮುಖ್ಯಮಂತ್ರಿಗಳು ಇದನ್ನು ಬಲವಾಗಿ ನಿರಾಕರಿಸುತ್ತ, ಅಲ್ಲಿನ ನೀರು ಸ್ನಾನಕ್ಕೆ ಮತ್ತು ಆಚಮನಕ್ಕೂ ಯೋಗ್ಯವಾಗಿದೆ ಎಂದರು. ಆದರೆ ಎನ್‌ಜಿಟಿ ಉತ್ತರಪ್ರದೇಶ ಸರಕಾರದ ಅಧಿಕಾರಿಗಳನ್ನು ತರಾಟೆಗೆ ತಗೊಂಡು ಒಂದು ವಾರದ ಒಳಗೆ ಈ ಬಗ್ಗೆ ವರದಿ ನೀಡಬೇಕಾಗಿ ಆದೇಶಿಸಿದೆ ಎಂದು ವರದಿಯಾಗಿದೆ.

ಕಳೆದ 10–11 ವರ್ಷಗಳಲ್ಲಿ ಕೇಂದ್ರೀಯ ಸಂಸ್ಥೆಗಳಿಗೆ ಒದಗಿರುವ ಸ್ಥಿತಿಯ ಹಿನ್ನೆಲೆಯಲ್ಲಿ, ಈ ಎರಡು ಕೇಂದ್ರೀಯ ಸಂಸ್ಥೆಗಳ ಇಂತಹ ಕ್ರಮಗಳು ಕೂಡ, ಮಹಾಕುಂಭದ ರಾಜಕೀಯಕರಣದ ಪ್ರಯತ್ನದಲ್ಲಿ ಡಬಲ್ ಇಂಜಿನ್‌ಗಳ ನಡುವೆ ಸ್ಪರ್ಧೆ ಏರ್ಪಟ್ಟಿರುವುದನ್ನು ಸೂಚಿಸುತ್ತಿದೆಯೇ?

ಅದೇನೇ ಇರಲಿ, ಹಿರಿಯ ಪತ್ರಕರ್ತ ಹರೀಶ ಖರೆಯವರು ಹೇಳಿರುವಂತೆ ಮೌನಿ ಅಮಾವಾಸ್ಯೆಯ ದಿನದ ದುರಂತ ‘ಮಹಾಕುಂಭ’ವನ್ನು ರಾಜಕೀಯವಾಗಿ ಹಿಂಡಲು ಕಳೆದ ಕೆಲವು ತಿಂಗಳಿಂದ, ವಾರಗಳಿಂದ ನಡೆಸಿರುವ ಪ್ರಯತ್ನ ಪಂಕ್ಚರ್ ಆಗಿದೆ ಎಂದಂತೂ ಹೇಳಬಹುದು.

ಪ್ರಧಾನ ಮಂತ್ರಿಗಳು ತಮ್ಮ ಈ ತಿಂಗಳ ‘ಮನ್ ಕೀ ಬಾತ್’ನಲ್ಲಿ ಎತ್ತಿದ ಎರಡು ವಿಷಯಗಳು ವ್ಯಂಗ್ಯಚಿತ್ರಕಾರರ ಟಿಪ್ಪಣಿಯ ವಿಷಯಗಳಾಗಿ ಬಿಟ್ಟಿವೆ.

ಡೆಹ್ರಾಡೂನಿನಲ್ಲಿ ತಾನು ಎತ್ತಿದ ‘ಸ್ಥೂಲಕಾಯತೆ’ಯ ವಿಷಯ ಈಗ ದೇಶದಲ್ಲಿ ಒಂದು ಹೊಸ ಚರ್ಚೆಯನ್ನು ಆರಂಭಿಸಿದೆ ಎಂದ ಅವರು ಇದನ್ನು ಪ್ರತಿಪಾದಿಸಲು 10 ಪ್ರತಿಷ್ಠಿತರನ್ನು ಪಟ್ಟಿ ಮಾಡುವುದಾಗಿ ಹೇಳಿದರು.

ಹಾಗೆಯೇ “ಒಂದು ದಿನ ವಿಜ್ಞಾನಿಯಾಗಿ. ಅಂದರೆ ಒಂದು ದಿನವನ್ನು ಒಬ್ಬ ವಿಜ್ಞಾನಿಯಾಗಿ ಕಳೆಯಲು ನೀವು ಪ್ರಯತ್ನಿಸಬೇಕು” ಎಂದು ಮಕ್ಕಳಿಗೆ ಮತ್ತು ಯುವಜನರಿಗೆ ಕರೆ ನೀಡಿದರು.

ಈ ಎರಡು ವಿಷಯಗಳ ಮೇಲೆ ವ್ಯಂಗ್ಯಚಿತ್ರಕಾರ ಸತೀಶ ಆಚಾರ್ಯರವರ ಟಿಪ್ಪಣಿಗಳು– ಕೃಪೆ: ಅವರ ಫೇಸ್‌ಬುಕ್



ಸ್ಥೂಲಕಾಯದ ಭಾರತ ಮತ್ತು ಅಪೌಷ್ಟಿಕ ಭಾರತ



“ಒಂದು ದಿನಕ್ಕೆ ವಿಜ್ಞಾನಿಯಾಗು!” ಉಳಿದ ದಿನಗಳಲ್ಲಿ... ವ್ಯಾಟ್ಸ್‌ಆಪ್ ವಿಜ್ಞಾನ ವಿವಿ ಹೋಗು ಕೊರೊನ ಹೋಗು!



ಮುಂದುವರೆದ ಬಂಡವಾಳಶಾಹಿ ದೇಶಗಳೂ ಸೇರಿದಂತೆ ಜಗತ್ತಿನಾದ್ಯಂತ ಈಗ ದುಡಿಯುವ ಜನಗಳ ಮೇಲೆ ನಿರುದ್ಯೋಗ ಮತ್ತು ಹಣದುಬ್ಬರದ ಮೂಲಕ ಆರ್ಥಿಕ ದಾಳ ನಡೆಯುತ್ತಿದೆ ಮಾತ್ರವಲ್ಲ, ಅದನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗುವಂತೆ ಅವರ ರಾಜಕೀಯ ಹಕ್ಕುಗಳನ್ನು ನಿರ್ಬಂಧಿಸುವ ರಾಜಕೀಯ ದಾಳಿಯೂ ನಡೆಯುತ್ತಿದೆ. ಇದು ಬಂಡವಾಳಶಾಹಿ ಜಗತ್ತಿನಾದ್ಯಂತವೂ ದೊಡ್ಡ ರೀತಿಯಲ್ಲಿ ಹೊರಹೊಮ್ಮಿರುವ ನವ-ಫ್ಯಾಸಿಸಂನ ಸ್ವರೂಪವನ್ನು ಪಡೆದುಕೊಂಡಿದೆ. ಇವೆರಡೂ ಸಾಲದೆಂಬಂತೆ ಈಗ 'ರೆವ್ಡಿ', 'ಬಿಟ್ಟಿ ಭಾಗ್ಯ', 70-90 ಗಂಟೆಗಳ ಕೆಲಸ ಇತ್ಯಾದಿ ರೂಪಗಳಲ್ಲಿ ಸೈದ್ಧಾಂತಿಕ ದಾಳಿಯೂ ಆರಂಭವಾಗುತ್ತಿದೆ. ಆದರೆ ವಿಡಂಬನೆಯೆಂದರೆ, ಇಂತಹ ದಾಳಿಗಳು ಬಂಡವಾಳಶಾಹಿ ಬಿಕ್ಕಟ್ಟನ್ನು ಇನ್ನಷ್ಟು ಜಿಗಡಾಯಿಸುತ್ತವೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಟ್ರಂಪ್, ಮಸ್ಕ್ ಮತ್ತು ವಿಶ್ವಾದ್ಯಂತ ದುಡಿಯುವ ಜನರ ಮೇಲೆ ನವ-ಫ್ಯಾಸಿಸ್ಟ್ ದಾಳಿ

ಇಂದಿನ ಬಂಡವಾಳಶಾಹಿಯ ಅಡಿಯಲ್ಲಿ, ದುಡಿಯುವ ಜನರ ಮೇಲೆ ನಡೆಯುತ್ತಿರುವ ದಾಳಿಯು ಬಂಡವಾಳಶಾಹಿಯ ಆರಂಭದ ಕಾಲದಲ್ಲಿ ನಡೆಯುತ್ತಿದ್ದ ದಾಳಿಯನ್ನು ನೆನಪಿಸುವ ರೀತಿಯಲ್ಲಿದೆ. ಈ ದಾಳಿಯು ಮೂರನೇ ಜಗತ್ತಿನಲ್ಲಿ ಮಾತ್ರವಲ್ಲದೆ ಮುಂದುವರಿದ ಬಂಡವಾಳಶಾಹಿ ದೇಶಗಳೂ ಸೇರಿದಂತೆ ವಿಶ್ವಾದ್ಯಂತವೂ ನಡೆಯುತ್ತಿದೆ ಮತ್ತು ಇದು ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ, ಈ ಮೂರೂ ನೆಲೆಗಳಲ್ಲಿಯೂ ಇದೆ.

ಬಂಡವಾಳಶಾಹಿ ಜಗತ್ತನ್ನು ಪ್ರಸ್ತುತ ಬಾಧಿಸುತ್ತಿರುವ ತೀವ್ರ ಹಣದುಬ್ಬರ ಮತ್ತು ಹೆಚ್ಚುತ್ತಿರುವ ನಿರುದ್ಯೋಗ, ಈ ಎರಡೂ ಅಂಶಗಳ ಪರಿಣಾಮವಾಗಿ ಆರ್ಥಿಕ ನೆಲೆಯಲ್ಲಿ ನಡೆಯುತ್ತಿರುವ ದಾಳಿಯ ಬಗ್ಗೆ ಸಾಕಷ್ಟು ಚರ್ಚೆ ಮಾಡಲಾಗಿದೆ. ಹಣದುಬ್ಬರದಲ್ಲಿ ಏರಿಕೆ ಆರಂಭವಾದದ್ದು ದೊಡ್ಡ ಬಂಡವಾಳಿಗರ ವಿಭಾಗದಿಂದಾಗಿ, ನಿರ್ದಿಷ್ಟವಾಗಿ ಯುಎಸ್‌ನಲ್ಲಿ, ಇದ್ದಕ್ಕಿದ್ದಂತೆ ಲಾಭದ ಪ್ರಮಾಣವನ್ನು ಹೆಚ್ಚಿಸಿದ್ದರಿಂದಾಗಿ ಅದು ಆರಂಭವಾಯಿತು. ಆ ನಂತರದಲ್ಲಿ, ಅದು ಬಂಡವಾಳಶಾಹಿ ಜಗತ್ತಿನಾದ್ಯಂತವೂ ಪಸರಿಸಿತು (ಈ ರೀತಿ ಪಸರಿಸಿದ್ದು ಹೇಗೆ ಎಂದು ಇಲ್ಲಿ ಚರ್ಚಿಸುತ್ತಿಲ್ಲ, ಅದರ ಹರಡಿಕೆಯ ಕಾರ್ಯವಿಧಾನವನ್ನು ಮುಂದಿನ ಲೇಖನದಲ್ಲಿ ಚರ್ಚಿಸಲಾಗುವುದು). ಮತ್ತು ನಿರುದ್ಯೋಗವು ವಿಶ್ವ ಬಂಡವಾಳಶಾಹಿ ಬಿಕ್ಕಟ್ಟು ಮತ್ತು ಎಲ್ಲೆಡೆಯೂ ಕಾರ್ಮಿಕ ವರ್ಗದ ಹಿತಗಳನ್ನು ಬಲಿಗೊಟ್ಟು, ಅಂದರೆ, ಉದ್ಯೋಗಗಳನ್ನು ಉದ್ದೇಶಪೂರ್ವಕವಾಗಿ ಕಡಿತಗೊಳಿಸುವ ಮೂಲಕ ಹಣದುಬ್ಬರವನ್ನು ನಿಗ್ರಹಿಸುವ ಅಧಿಕೃತ ಪ್ರಯತ್ನಗಳ ಸಂಯೋಜಿತ ಫಲಿತಾಂಶವಾಗಿ ಏರಿಕೆಯಾಗಿದೆ. ನಿರುದ್ಯೋಗದ ಹೆಚ್ಚಳದ ಪರಿಣಾಮವಾಗಿಯೇ ಕಾರ್ಮಿಕರ ಕೂಲಿ-ಚೌಕಾಸಿಯ ಬಲ ಸಾಕಷ್ಟು ಇಳಿಕೆಯಾಗುತ್ತದೆ, ಇಂತಹ ಇಳಿಕೆಯಿಂದಾಗಿ ಅವರು ಬೆಲೆ ಏರಿಕೆಯನ್ನು ಸರಿದೂಗಿಸಿಕೊಳ್ಳಲು ಹೆಚ್ಚಿನ ಹಣ-ಕೂಲಿಗಾಗಿ ಚೌಕಾಶಿ ಮಾಡುವುದು ಸಾಧ್ಯವಾಗದ ಕಾರಣದಿಂದಾಗಿ ಹಣದುಬ್ಬರವು ಕ್ರಮೇಣ ಹೋಗಿಬಿಡುತ್ತದೆ ಎಂಬುದು ಅವರ ಅಧಿಕೃತ ಆಶಯ.

ಎರಿಕ್ ಹಾಬ್ಸ್‌ಬಾಮ್‌ರಂತಹ ಇತಿಹಾಸಕಾರರು ಹೇಳಿರುವಂತೆ ಬ್ರಿಟನ್‌ನಲ್ಲಿ ಕೈಗಾರಿಕಾ ಕ್ರಾಂತಿಯ ಆರಂಭದ ವರ್ಷಗಳಲ್ಲಿ ಬಡತನದ ಏರಿಕೆಯು ಬಂಡವಾಳಶಾಹಿಯ ಲಕ್ಷಣವಾಗಿತ್ತು. ಅದೇ ರೀತಿಯಲ್ಲಿ ಇಂದಿನ ಬಂಡವಾಳಶಾಹಿಯ ಅಡಿಯಲ್ಲಿಯೂ ದುಡಿಯುವ ಜನರ ಸ್ಥಿತಿ-ಗತಿಗಳು ಹದಗೆಡುತ್ತಿವೆ. ಒಂದು ಉದಾಹರಣೆಯಾಗಿ, 2011ರಲ್ಲಿ ಅಮೆರಿಕದ ಒಬ್ಬ ಪುರುಷ ಕೆಲಸಗಾರನ ಸರಾಸರಿ ನಿಜ ವೇತನವು 1968ರಲ್ಲಿ ಇದ್ದುದಕ್ಕಿಂತಲೂ ತುಸು ಕಡಿಮೆ ಇತ್ತು ಎಂಬುದನ್ನು ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ತೋರಿಸಿಕೊಟ್ಟಿದ್ದರು. ಹಾಗೆ ನೋಡಿದರೆ, ಪ್ರಸ್ತುತ ಹಣದುಬ್ಬರದ ಸಂದರ್ಭದಲ್ಲಿ ಇಂದಿನ ನಿಜ ವೇತನವು 2011ರಲ್ಲಿ ಇದ್ದುದಕ್ಕಿಂತಲೂ ಕಡಿಮೆಯೇ ಮತ್ತು 1968ಕ್ಕೆ ಹೋಲಿಸಿದರೂ ಕಡಿಮೆಯೇ ಇದೆ. ಅಮೆರಿಕದಲ್ಲಿ ಇಂದಿರುವ ಒಟ್ಟು ನಿರುದ್ಯೋಗಕ್ಕೆ, 1968ಕ್ಕೆ ಹೋಲಿಸಿದರೆ ಇರುವ ಹೆಚ್ಚುವರಿ ನಿರುದ್ಯೋಗವನ್ನು ಸೇರಿಸಿದಾಗ (ಅಧಿಕೃತ ನಿರುದ್ಯೋಗ ದರವು ಈ ಸಂಗತಿಯನ್ನು ಮರೆಮಾಚುತ್ತದೆ, ಏಕೆಂದರೆ, ಹೆಚ್ಚು ನಿರುದ್ಯೋಗ ಇರುವ ಅವಧಿಯಲ್ಲಿ ಅದರಿಂದ ನಿರುತ್ಸಾಹಿತರಾಗುವ ಕಾರ್ಮಿಕರು ಉದ್ಯೋಗ ಅರಸಲು ಹೋಗದಿರುವಂತಹ ಸನ್ನಿವೇಶವನ್ನು ಅದು ಪರಿಗಣಿಸುವುದಿಲ್ಲ), ಅಮೆರಿಕದ ಕಾರ್ಮಿಕರ ಸ್ಥಿತಿ-ಗತಿಗಳು ಇಂದು ಹದಗೆಟ್ಟಿವೆ ಎಂಬುದರಲ್ಲಿ ಸಂದೇಹವಿಲ್ಲ. ಇದೇ ಮಾತನ್ನು ಇತರ ಮುಂದುವರಿದ ಬಂಡವಾಳಶಾಹಿ ದೇಶಗಳ ಕಾರ್ಮಿಕರ ಬಗ್ಗೆಯೂ ಹೇಳಬಹುದು. ಭಾರತ ಮತ್ತು ಮೂರನೇ ಜಗತ್ತಿನ ಇತರ ದೇಶಗಳಲ್ಲಿ, 1980ರ ದಶಕದ ನಂತರದ ಅವಧಿಯಲ್ಲಿ ಆಹಾರ ಧಾನ್ಯಗಳ ತಲಾ ಸೇವನೆ (ಇದರಲ್ಲಿ ನೇರ ಸೇವನೆಯಲ್ಲದೆ, ಪಶು ಉತ್ಪನ್ನಗಳಲ್ಲಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳಲ್ಲಿ ಬಳಕೆಯಾಗುವ ಧಾನ್ಯಗಳೂ ಸೇರಿವೆ) ಕಡಿಮೆಯಾಗಿರುವುದರಿಂದ ಜನರ ಪೌಷ್ಠಿಕತೆಯ ಮಟ್ಟದಲ್ಲಿ ಇಳಿಕೆಯಾಗಿದೆ ಎಂಬುದಕ್ಕೆ ಪುರಾವೆಗಳಿವೆ. ಹಾಗಾಗಿ, ದುಡಿಯುವ ಜನರ ಬಡತನದ ಮಟ್ಟವು ಏರಿಕೆಯಾಗಿದೆ ಎಂಬುದನ್ನು ನಿಸ್ಸಂದೇಹವಾಗಿ ತೀರ್ಮಾನಿಸಬಹುದು. ಆದ್ದರಿಂದ, ಬಂಡವಾಳಶಾಹಿ ಜಗತ್ತಿನಲ್ಲಿ ದುಡಿಯುವ ಜನರ ಮೇಲೆ, ವಿಶೇಷವಾಗಿ ದುಡಿಯುವ ಬಡವರ ಮೇಲೆ, ಆರ್ಥಿಕವಾಗಿ ದಾಳಿ ಮಾಡಲಾಗಿದೆ ಎಂಬುದನ್ನು ಅನುಮಾನಿಸಲಾಗದು.





ನವ-ಫ್ಯಾಸಿಸ್ಟ್ ರಾಜಕೀಯ ದಾಳಿ

ದುಡಿಯುವ ಜನರ ಮೇಲೆ ಇಂತಹ ಆರ್ಥಿಕ ದಾಳಿಯನ್ನು, ಅವರ ರಾಜಕೀಯ ಹಕ್ಕುಗಳನ್ನು ನಿರ್ಬಂಧಿಸದೆ, ಅಂದರೆ, ಅದೇ ಸಮಯದಲ್ಲಿ ಅವರ ಮೇಲೆ ರಾಜಕೀಯವಾಗಿ ದಾಳಿ ಮಾಡದೆ ಮುಂದುವರೆಸಿಕೊಂಡು ಹೋಗುವುದು ಅಸಾಧ್ಯವೇ. ಈ ರಾಜಕೀಯ ದಾಳಿಯು ಬಂಡವಾಳಶಾಹಿ ಜಗತ್ತಿನಾದ್ಯಂತವೂ ಒಂದು ದೊಡ್ಡ ರೀತಿಯಲ್ಲಿ ಹೊರಹೊಮ್ಮಿರುವ ನವ-ಫ್ಯಾಸಿಸಂನ ಸ್ವರೂಪವನ್ನು ಪಡೆದುಕೊಂಡಿದೆ. ಈಗ ಅನೇಕ ದೇಶಗಳಲ್ಲಿ ನವ-ಫ್ಯಾಸಿಸ್ಟ್ ನಾಯಕರು ಆಡಳಿತವನ್ನು ಮುನ್ನಡೆಸುತ್ತಿದ್ದಾರೆ. ಅರ್ಜೆಂಟೀನಾದ ಮಿಲೀಯಿಂದ ಹಿಡಿದು ಇಟಲಿಯ ಮೆಲೋನಿಯವರೆಗೆ, ಅಮೆರಿಕದಲ್ಲಿ ಟ್ರಂಪ್, ಭಾರತದಲ್ಲಿ ಮೋದಿ, ಹಂಗೇರಿಯಲ್ಲಿ ಓರ್ಬನ್, ಟರ್ಕಿಯಲ್ಲಿ ಎರ್ಡೋಗನ್, ಇಸ್ರೇಲ್‌ನಲ್ಲಿ ನೆತನ್ಯಾಹು (ಅವರ ಹೆಸರನ್ನು ಹೇಳುವುದೇ ಬೇಡ, ಅವರನ್ನು ಯಾರೊಂದಿಗೂ ಹೋಲಿಸಲಾಗದು), ಮುಂತಾದವರ ಉದ್ದವಾದ ಪಟ್ಟಿಯೇ ಇದೆ. ಇನ್ನೂ ಹಲವು ದೇಶಗಳಲ್ಲಿ ನವ-ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರವನ್ನು ಪಡೆಯಲು ತುದಿಗಾಲಲ್ಲಿ ನಿಂತಿವೆ. ಉದಾಹರಣೆಗೆ, ಜರ್ಮನಿಯಲ್ಲಿ ಎಎಫ್‌ಡಿ ಮತ್ತು ಫ್ರಾನ್ಸ್‌ನಲ್ಲಿ ಮರೀನ್ ಲೆ ಪೆನ್ ಅವರ ಪಕ್ಷ (ತಿಂಗಳುಗಳ ಹಿಂದೆ ಫ್ರಾನ್ಸಿನಲ್ಲಿ ನಡೆದ ಚುನಾವಣೆಗಳಲ್ಲಿ ದಿಢೀರನೆ ಒಟ್ಟಾದ ಎಡಪಂಥೀಯರು ಲೆ ಪೆನ್ ಅವರ ಪಕ್ಷವು ಬಹುಮತ ಪಡೆಯುವುದನ್ನು ತಡೆದರು).

ಈ ನವ-ಫ್ಯಾಸಿಸ್ಟ್ ಶಕ್ತಿಗಳು ದುಡಿಯುವ ಜನರ ಮೇಲೆ ನಡೆಸುತ್ತಿರುವ ರಾಜಕೀಯ ದಾಳಿಯು, ಕಾರ್ಮಿಕರ ಶಾಸನಬದ್ಧ ಹಕ್ಕುಗಳನ್ನು ಮೊಟಕುಗೊಳಿಸುತ್ತದೆ ಮತ್ತು ಅದರ ಜೊತೆಗೆ ಅಸಹಾಯ ಅಲ್ಪಸಂಖ್ಯಾತರನ್ನು"ಅನ್ಯ"ರನ್ನಾಗಿಸಿ ಬಹುಸಂಖ್ಯಾತರು ಅವರ ವಿರುದ್ಧ ಹಗೆ ಸಾಧಿಸುವ ಕಥನವನ್ನು ಸೃಷ್ಟಿಸಿ, ಕಾರ್ಮಿಕರನ್ನು ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರನ್ನು ದಮನಿಸುತ್ತದೆ. ಕಥನದ ಈ ರೀತಿಯ ಬದಲಾವಣೆಯು ದುಡಿಯುವ ಜನರ ದೈನಂದಿನ ಲೌಕಿಕ ಜೀವನದ ಸಮಸ್ಯೆಗಳನ್ನು ಹಿನ್ನೆಲೆಗೆ ತಳ್ಳುತ್ತದೆ ಮಾತ್ರವಲ್ಲ, ಅದು ದುಡಿಯುವವರನ್ನು ಧಾರ್ಮಿಕ ಅಥವಾ ಜನಾಂಗೀಯ ಆಧಾರದ ಮೇಲೆ ವಿಭಜಿಸುತ್ತದೆ (ಈ ಆಧಾರದ ಮೇಲೆಯೇ ಅಲ್ಪಸಂಖ್ಯಾತರನ್ನು"ಅನ್ಯ"ರನ್ನಾಗಿ ಮಾಡಲಾಗುತ್ತದೆ). ಹಾಗಾಗಿ ದುಡಿಯುವ ಜನತೆಯು ತಮ್ಮ ಮೇಲೆ ಹೇರಲಾದ ಆರ್ಥಿಕ ಸಂಕಷ್ಟಗಳ ವಿರುದ್ಧ ಒಗ್ಗಟ್ಟಿನ ಪ್ರತಿರೋಧ ಒಡ್ಡುವುದು ಸಾಧ್ಯವಾಗುವುದಿಲ್ಲ.

"ಬಿಟ್ಟಿ ಗಿರಾಕಿಗಳು", "90 ಗಂಟೆಗಳ ವಾರ" ಇತ್ಯಾದಿ

ದುಡಿಯುವ ಜನರ ಮೇಲಿನ ಈ ಆರ್ಥಿಕ ಮತ್ತು ರಾಜಕೀಯ ದಾಳಿಗಳೇ ಸಾಲದು ಎಂಬಂತೆ ಅವರ ಮೇಲೆ ನಡೆಯುತ್ತಿರುವ ಸೈದ್ಧಾಂತಿಕ ದಾಳಿಯು ಈಗ ವಿಶೇಷವಾಗಿ ಗಮನ ಸೆಳೆಯುತ್ತಿದೆ. ಇದೂ ಕೂಡ ಯಾರೋ ಒಬ್ಬ ಅಥವಾ ಇನ್ನೊಬ್ಬ ವ್ಯಕ್ತಿ ಆಗಾಗ ಮಾಡುವ ವಿಚಿತ್ರ ಹೇಳಿಕೆಗಳಿಗೆ ಮಾತ್ರ ಸೀಮಿತವಲ್ಲ. ಇಂತಹ ದುಡಿಯುವ ಜನ-ವಿರೋಧಿ ಹೇಳಿಕೆಗಳನ್ನು ವಿಶ್ವಾದ್ಯಂತ ಮಾಡಲಾಗುತ್ತಿದೆ. ಈ ವಿದ್ಯಮಾನವು ದುಡಿಯುವ ಜನರ ಮೇಲೆ ನಡೆಯಬಹುದಾದ ಒಂದು ಸೈದ್ಧಾಂತಿಕ ದಾಳಿಯ ಮುನ್ಸೂಚನೆಯಾಗಿದೆ.

ಭಾರತದಲ್ಲಿ, ಇಂತಹ ಆರ್ಥಿಕ ವಂಚನೆಗೆ ಎದುರಾಗಿ, ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಅಸಮರ್ಥವಾಗಿರುವ ಆರ್ಥಿಕ ಆಳ್ವಿಕೆಯೊಳಗೇ ರಾಜಕೀಯ ಅಧಿಕಾರವನ್ನು ಪಡೆಯಲು ಪ್ರಯತ್ನಿಸುತ್ತಿರುವ ಬೇರೆ ಬೇರೆ ರಾಜಕೀಯ ಪಕ್ಷಗಳು ಜನಗಳಿಗೆ ನೇರವಾಗಿ ಹಣವನ್ನು ವರ್ಗಾಯಿಸುವ ಆಶ್ವಾಸನೆಗಳನ್ನು ನೀಡುತ್ತಿವೆ. ದುಡಿಯುವ ಜನರ ಆರ್ಥಿಕ ದಾರಿದ್ರ್ಯವನ್ನು ತೊಡೆದುಹಾಕಲು ಅತ್ಯಲ್ಪ ಮೊತ್ತದ ಈ ವರ್ಗಾವಣೆಗಳು ಏನೇನೂ ಸಾಲವು (ಸಾಲುತ್ತಿದ್ದರೆ ನಾವು ಹಿಂದೆ ಹೇಳಿದ ಪೌಷ್ಟಿಕಾಂಶದ ಅಭಾವವನ್ನು ಕಾಣುತ್ತಿರಲಿಲ್ಲ). ಆದರೂ, ಅಧಿಕಾರಾರೂಢ ನವ-ಫ್ಯಾಸಿಸ್ಟರು ಮತ್ತು ಪ್ರಧಾನಿ ಮೋದಿಯವರೂ ಸಹ ಈ ವರ್ಗಾವಣೆಗಳನ್ನು "ಬಿಟ್ಟಿ ಭಾಗ್ಯ" ಎಂದೇ ಹೀಯಾಳಿಸುತ್ತಾರೆ. ಚುನಾವಣಾ ಪೈಪೋಟಿಯ ಒತ್ತಡಗಳಿಂದಾಗಿ ಆಳುವ ಪಕ್ಷವು ಕೂಡ ಈಗ ಬಡ ಜನರಿಗೆ ಹಣ ವರ್ಗಾವಣೆಯ ಆಶ್ವಾಸನೆಗಳನ್ನು ನೀಡುತ್ತಿದೆ. ಹಾಗಾಗಿ, ವರ್ಗಾವಣೆಗಳ ಮೇಲಿನ ಈ ದಾಳಿಯನ್ನು ಈಗ ಇತರರು ಕೈಗೆತ್ತಿಕೊಂಡಿದ್ದಾರೆ. ಕಾರ್ಮಿಕರ ವಾರದ ಕೆಲಸದ ಅವಧಿಯು 90 ಗಂಟೆ ಇರಬೇಕು ಎಂದು ಕೆಲವು ದಿನಗಳ ಹಿಂದೆ ಕೇಳಿದ್ದ ಒಂದು ಬೃಹತ್ ಉದ್ಯಮದ ಮುಖ್ಯ ಕಾರ್ಯನಿರ್ವಾಹಕರು (ಇವರುಗಳು ಭಾರತದ ಕಾರ್ಖಾನೆಗಳಲ್ಲಿ ಹಿಟ್ಲರನ ಆಶ್ವಿಟ್ಜ್ ಯಾತನಾಶಿಬಿರದ ಮಾದರಿಯ ವಾತಾವರಣವನ್ನು ಸೃಷ್ಟಿಸಲು ಬಯಸುತ್ತಾರೆ!), ಈ ಹಣ ವರ್ಗಾವಣೆಗಳಿಂದಾಗಿ "ಬಿಟ್ಟಿ ಗಿರಾಕಿಗಳು" ಕೆಲಸ ಮಾಡದಂತೆ ಪ್ರೇರೇಪಿಸುತ್ತವೆ ಎಂದೂ ಹೇಳುತ್ತಾರೆ. ಅಷ್ಟೇ ಸಾಲದು ಎಂಬಂತೆ ಈಗ ಒಬ್ಬ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಪುಟ 14 ಕ್ಕೆ

ಕೇರಳ ಸ್ಥಳೀಯ ಸಂಸ್ಥೆಗಳ ಉಪಚುನಾವಣೆಯಲ್ಲಿ 30 ರಲ್ಲಿ 17 ಸ್ಥಾನಗಳನ್ನು ಗೆದ್ದುಕೊಂಡ ಎಲ್‌ಡಿಎಫ್; ಬಿಜೆಪಿಗೆ ಸೊನ್ನೆ:

ರಾಜ್ಯ ಸರ್ಕಾರದ ನೀತಿಗಳಿಗೆ ಜನಬೆಂಬಲವನ್ನು ಪುನರುಚ್ಚರಿಸುತ್ತಾ, ಫೆಬ್ರವರಿ 24ರಂದು ನಡೆದ ಸ್ಥಳೀಯ ಸಂಸ್ಥೆಗಳ ಉಪಚುನಾವಣೆಯಲ್ಲಿ ಕೇರಳದ ಜನತೆ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)ಕ್ಕೆ ಭರ್ಜರಿ ಜಯ ತಂದುಕೊಟ್ಟಿದ್ದಾರೆ. ತಿರುವನಂತಪುರಂ ಮುನ್ಸಿಪಲ್ ಕಾರ್ಪೊರೇಷನ್‌ನ ಶ್ರೀವರಾಹಂ ವಾರ್ಡ್ ಸೇರಿದಂತೆ 30 ಸ್ಥಾನಗಳಲ್ಲಿ ಎಲ್‌ಡಿಎಫ್ 17 ಸ್ಥಾನಗಳನ್ನು ಗೆದ್ದುಕೊಂಡಿತು. ಬಿಜೆಪಿ ಒಂದೇ ಒಂದು ಸ್ಥಾನವನ್ನು ಪಡೆಯುವಲ್ಲಿ ವಿಫಲವಾಯಿತು.

ಒಂದು ಬ್ಲಾಕ್ ಪಂಚಾಯತ್ ವಾರ್ಡ್, ಎರಡು ಪುರಸಭೆ ವಾರ್ಡ್‌ಗಳು ಮತ್ತು 13 ಗ್ರಾಮ ಪಂಚಾಯತ್ ವಾರ್ಡ್‌ಗಳಲ್ಲಿ ಎಲ್‌ಡಿಎಫ್ ಗೆಲುವು ಸಾಧಿಸಿದ್ದು, ಈ ಹಿಂದೆ ಯುಡಿಎಫ್ ಹೊಂದಿದ್ದ ನಾಲ್ಕು ಸ್ಥಾನಗಳನ್ನು ವಶಪಡಿಸಿಕೊಂಡಿದೆ. ಈ ವರ್ಷದ ಕೊನೆಯ ತಿಂಗಳಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಕೆಲವೇ ತಿಂಗಳುಗಳ ಮೊದಲು ಈ ಗಮನಾರ್ಹ ಫಲಿತಾಂಶ ಬಂದಿದೆ. ಈ ಫಲಿತಾಂಶಗಳು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಭವಿಷ್ಯದ ವಿಜಯಗಳ ಮುನ್ಸೂಚನೆಯನ್ನು ನೀಡುತ್ತಿವೆ.

ಯುಡಿಎಫ್ ಕೇವಲ 12 ಸ್ಥಾನಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರೆ, ಕಾಂಗ್ರೆಸ್‌ನ ಮತದಾರರ ಬೆಂಬಲದೊಂದಿಗೆ ಇಸ್ಲಾಮಿಕ್ ಸಂಘಟನೆಯಾದ ಎಸ್‌ಡಿಪಿಐ ಒಂದು ಸ್ಥಾನ ಗೆದ್ದಿದೆ. ಕಾಸರಗೋಡಿನ ಎರಡು ಪಂಚಾಯತ್ ವಾರ್ಡ್‌ಗಳಲ್ಲಿ, ಎಲ್‌ಡಿಎಫ್ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗಮನಿಸಬೇಕಾದ ಅಂಶವೆಂದರೆ, 2020ರಲ್ಲಿ ನಡೆದ ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಬಹುತೇಕ ಎಲ್ಲಾ ಎಲ್‌ಡಿಎಫ್ ಅಭ್ಯರ್ಥಿಗಳು ತಮ್ಮ ಮತ ಹಂಚಿಕೆಯಲ್ಲಿ ಹೆಚ್ಚಳ ಕಂಡಿದ್ದಾರೆ.

ಎಲ್‌ಡಿಎಫ್‌ನಲ್ಲಿ ಸಿಪಿಐ(ಎಂ) 12 ಸ್ಥಾನಗಳನ್ನು, ಸಿಪಿಐ 2 ಸ್ಥಾನಗಳನ್ನು ಗೆದ್ದಿದ್ದರೆ, ಕೇರಳ ಕಾಂಗ್ರೆಸ್ (ಎಂ) ಮತ್ತು ಎಲ್‌ಡಿಎಫ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು ತಲಾ ಒಂದು ಸ್ಥಾನವನ್ನು ಪಡೆದರು. ಯುಡಿಎಫ್ ಕಡೆಯಿಂದ, ಕಾಂಗ್ರೆಸ್ 10 ಸ್ಥಾನಗಳನ್ನು ಗೆದ್ದರೆ, ಐಯುಎಂಎಲ್ ಮತ್ತು ಕೇರಳ ಕಾಂಗ್ರೆಸ್ (ಐ) ತಲಾ ಒಂದು ಸ್ಥಾನವನ್ನು ಗೆದ್ದವು.

ತಿರುವನಂತಪುರಂ ಕಾರ್ಪೊರೇಷನ್‌ನ ಶ್ರೀವರಾಹಂ ವಾರ್ಡ್‌ನಲ್ಲಿ, ಎಲ್‌ಡಿಎಫ್ 13 ಮತಗಳ ಅಲ್ಪ ಅಂತರದಿಂದ ಗೆದ್ದಿತು. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮತಗಳ ಪಾಲು 408ರಿಂದ 277ಕ್ಕೆ ಗಮನಾರ್ಹವಾಗಿ ಕುಸಿಯಿತು. ತಿರುವನಂತಪುರದ ಪಂಗೋಡ್ ಗ್ರಾಮ ಪಂಚಾಯತ್‌ನ ಪುಲಿಪ್ಪರ ವಾರ್ಡ್‌ನಲ್ಲಿ, ಮುಸ್ಲಿಂ ಮೂಲಭೂತವಾದಿ ಪಕ್ಷವಾದ ಎಸ್‌ಡಿಪಿಐ ಪರವಾಗಿ ಕಾಂಗ್ರೆಸ್ ಮತಗಳು ಅಡ್ಡ ಮತಗಳಾಗಿ ಚಲಾಯಿಸಲ್ಪಟ್ಟವು. ಕಾಂಗ್ರೆಸ್‌ನ ಮತಗಳ ಪಾಲು 455 ರಿಂದ 148ಕ್ಕೆ ಕುಸಿದರೆ, ಎಸ್‌ಡಿಪಿಐ ಮತಗಳ ಪಾಲು 363 ರಿಂದ 674ಕ್ಕೆ ಏರಿತು.

ವಿಶ್ವಾದ್ಯಂತ ದುಡಿಯುವ ಜನರ ಮೇಲೆ... ಪುಟ 13 ರಿಂದ

ಕೂಡ ಈ ರಾಗಕ್ಕೆ ದನಿಗೂಡಿಸಿದ್ದಾರೆ. ಹಣ ವರ್ಗಾವಣೆಗಳು ಜನರನ್ನು ಕೆಲಸ ಮಾಡದಂತೆ ತಡೆಯುತ್ತವೆ, ಏಕೆಂದರೆ, ಅವರು ಮನೆಯಲ್ಲೇ ಕೂತು ಏನನ್ನೂ ಮಾಡದೆ "ಬಿಟ್ಟಿ ಭಾಗ್ಯ"ವನ್ನು ಪಡೆಯಬಹುದು ಎಂದು ಹೇಳಿದ್ದಾರೆ. ಸರ್ಕಾರವು ಹಣ ವರ್ಗಾವಣೆಯ ಬದಲು ಜನರಿಗೆ ಯೋಗ್ಯ ಉದ್ಯೋಗ ಒದಗಿಸುವುದನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಕಡ್ಡಾಯಗೊಳಿಸಿದ್ದರೆ, ವಿಷಯ ಬೇರೆಯೇ ಆಗುತ್ತಿತ್ತು. ಆದರೆ, ಅವರು ಮಾತನಾಡಿರುವುದು ವರ್ಗಾವಣೆಯ ವಿರುದ್ಧ ಮಾತ್ರವೇ ಹೊರತು ಸುಯೋಗ್ಯ ಉದ್ಯೋಗ ಒದಗಿಸುವ ಬಗ್ಗೆ ಅಲ್ಲ.

ಕೆಲಸಗಳಿವೆ, ಆದರೆ ಕೆಲಸ ಕೇಳುವವರೇ ಇಲ್ಲ ಎಂದು ವಾದಿಸುವ ಇವರು, ಇದಕ್ಕೆ ಸಮರ್ಥನೆಯಾಗಿ ಯಾವುದೇ ಪುರಾವೆಗಳನ್ನು ಒದಗಿಸುವುದಿಲ್ಲ. ಮಾತ್ರವಲ್ಲ, ಇವರು ಕೇಳುವವರಿಲ್ಲ ಎಂದು ಹೇಳುವ ಕೆಲಸಗಳಿಗೆ ಕೊಡುವ ಕೂಲಿಯ ಬಗ್ಗೆಯೂ ಅವರ ಬಳಿ ಯಾವ ಆಧಾರವೂ ಇಲ್ಲ. ಸ್ವತಃ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯೇ (ಐಎಲ್‌ಒ) ಭಾರತದಲ್ಲಿ ಸುಯೋಗ್ಯ ಉದ್ಯೋಗಾವಕಾಶಗಳ ಕೊರತೆಯು ತೀವ್ರವಾಗಿದೆ ಎಂದು ಹೇಳಿದೆ. ಸರ್ಕಾರದ ಉದ್ಯೋಗ ದತ್ತಾಂಶಗಳು ನಿಜಕ್ಕೂ ದೋಷಪೂರಿತವಾಗಿವೆ. ಏಕೆಂದರೆ, ಕುಟುಂಬ ಉದ್ಯಮಗಳಲ್ಲಿ ಮಹಿಳೆಯರ ಕೂಲಿ ಇಲ್ಲದ ಉದ್ಯೋಗಗಳು ಬೆಳೆಯುತ್ತಿದ್ದರೆ, ಅದನ್ನು ಉದ್ಯೋಗದ ಬೆಳವಣಿಗೆ ಎಂದೇ ಸರ್ಕಾರ ಪರಿಗಣಿಸುತ್ತದೆ. ಆದರೆ, ಈ ಬೆಳವಣಿಗೆಯು ಬೇರೆಡೆಯಲ್ಲಿ ಫಲದಾಯಕ ಉದ್ಯೋಗದ ಕೊರತೆ ಇದೆ ಎಂಬುದನ್ನು ಬಿಂಬಿಸುತ್ತದೆ ಮತ್ತು ಈ ಕಾರಣದ ಮೇಲೆ ಅರ್ಥಶಾಸ್ತ್ರಜ್ಞರು ಸಾಮಾನ್ಯವಾಗಿ ಈ ವಿದ್ಯಮಾನವನ್ನು "ಮರೆಮಾಚಿರುವ ನಿರುದ್ಯೋಗ" ಎಂದು ಕರೆಯುತ್ತಾರೆ.

ಇದೇ ಈ ಸೈದ್ಧಾಂತಿಕ ದಾಳಿಯು ಯುಎಸ್‌ನ ದುಡಿಯುವ ಜನರ ಮೇಲೆಯೂ ನಡೆಯುತ್ತಿದೆ. ಡೊನಾಲ್ಡ್ ಟ್ರಂಪ್ ನೇಮಿಸಿದ "ಸರ್ಕಾರದ ದಕ್ಷತಾ ಇಲಾಖೆ"ಯ (ಡಿಒಜಿಇ) ಮುಖ್ಯಸ್ಥರಾಗಿರುವ ಎಲೋನ್ ಮಸ್ಕ್‌ರವರ ಹೇಳಿಕೆಗಳನ್ನು ನೋಡಿದರೆ, ಬಡವರಿಗೆ ವೈದ್ಯಕೀಯ ನೆರವು, ವೈದ್ಯಕೀಯ ಸೇವೆಗಳು ಮತ್ತು ಸಾಮಾಜಿಕ ಭದ್ರತಾ ಯೋಜನೆ ಇವುಗಳಲ್ಲಿ ಕಡಿತ ಮಾಡುವಂತೆ ಕಾಣುತ್ತದೆ ಎಂಬ ಅಭಿಪ್ರಾಯವನ್ನು ಸೆನೆಟರ್ ಬರ್ನಿ ಸ್ಯಾಂಡರ್ಸ್ ಇತ್ತೀಚೆಗೆ ವ್ಯಕ್ತಪಡಿಸಿದ್ದಾರೆ (ಎಂಆರ್ ಆನ್‌ಲೈನ್, ಫೆಬ್ರವರಿ 13). ಅವರ ಪ್ರಕಾರ, ಈ ದಾಳಿಯನ್ನು ಬಡವರಿಗೆ ಸಿಗುತ್ತಿರುವ ಪ್ರಯೋಜನಗಳ ಮೇಲೆ ನಡೆಸಲಾಗುತ್ತಿದೆ. ಏಕೆಂದರೆ, ಈ ಹಣವನ್ನು ಶ್ರೀಮಂತರಿಗೆ ನೀಡುವ ತೆರಿಗೆ ಕಡಿತಗಳ ಕಡೆಗೆ ತಿರುಗಿಸಬಹುದು. ಇಂಥಹ ಪ್ರಯೋಜನ ಪಡೆಯುವವರಲ್ಲಿ, ಸ್ವತಃ ಮಸ್ಕ್, ಜೆಫ್ ಬೆಜೋಸ್ ಮತ್ತು ಮಾರ್ಕ್ ಜುಕರ್‌ಬರ್ಗ್‌ನಂಥ ಭಾರೀ ಕುಳಗಳೂ ಇದ್ದಾರೆ.

ಸೇಡು ತೀರಿಸಿಕೊಳ್ಳುವ ಈ ಸೈದ್ಧಾಂತಿಕ ದಾಳಿಯು ಯಾವುದನ್ನು "ಪೂರೈಕೆ–ಬದಿಯ ಅರ್ಥಶಾಸ್ತ್ರ" ಎಂದು ಕರೆಯಲಾಗಿದೆಯೋ ಅದರ ಸೂತ್ರಗಳಿಗೆ ಅನುಗುಣವಾಗಿದೆ. ಉದಾರವಾದಿ ಅರ್ಥಶಾಸ್ತ್ರಜ್ಞ ಜಾನ್ ಕೆನ್ನೆತ್ ಗಾಲ್‌ಬ್ರೈತ್, "ಪೂರೈಕೆ–ಬದಿಯ ಅರ್ಥಶಾಸ್ತ್ರ"ದ ಸಾರಾಂಶವೆಂದರೆ, "ಹೆಚ್ಚು ಪ್ರತಿಫಲ ನೀಡಿದರೆ ಶ್ರೀಮಂತರು ಉತ್ತಮವಾಗಿ ಕೆಲಸ ಮಾಡುತ್ತಾರೆ ಮತ್ತು ಕಡಿಮೆ ಸಂಬಳ ನೀಡಿದರೆ ಬಡವರು ಉತ್ತಮವಾಗಿ ಕೆಲಸ ಮಾಡುತ್ತಾರೆ" ಎಂದು ಪ್ರತಿಪಾದಿಸುತ್ತದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದರು. ಇದನ್ನು ಈಗ ಟ್ರಂಪ್ ಮತ್ತು ಮಸ್ಕ್‌ರಂತಹವರು ವ್ಯಾಪಕವಾಗಿ ಹರಡುತ್ತಿದ್ದಾರೆ.

ಆದರೆ ಇಲ್ಲೊಂದು ವಿಡಂಬನೆಯಿದೆ. ಬಡವರಿಂದ ಹಣ ಕಿತ್ತುಕೊಂಡು ಅದನ್ನು ಶ್ರೀಮಂತರಿಗೆ ನೀಡುವುದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುವ ಈ ಸಿದ್ಧಾಂತವನ್ನು ಅನುಸರಿಸಿದರೆ ಬಂಡವಾಳಶಾಹಿ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸುತ್ತದೆ. ಶ್ರೀಮಂತರಿಗೆ ಹೋಲಿಸಿದರೆ ಬಡವರು ತಮ್ಮ ವರಮಾನವನ್ನು ಪೂರ್ಣವಾಗಿ ಬಳಕೆಮಾಡಿಕೊಳ್ಳುವುದರಿಂದ, ಸರ್ಕಾರವು ಸಂಗ್ರಹಿಸುವ ತೆರಿಗೆಯ ಹಣದ ಈ ರೀತಿಯ ಪುನರ್ ಹಂಚಿಕೆಯು ಒಟ್ಟು ಬಳಕೆಯ ಬೇಡಿಕೆಯನ್ನು ಮತ್ತಷ್ಟು ಕುಗ್ಗಿಸುತ್ತದೆ. ಬಂಡವಾಳಗಾರರು ಮಾಡುವ ಹೂಡಿಕೆಯು ಮಾರುಕಟ್ಟೆಯ ನಿರೀಕ್ಷಿತ ಬೆಳವಣಿಗೆಯ ಮೇಲೆ ಅವಲಂಬಿತವಾಗಿರುವುದರಿಂದ, ನಿಜ ಹೂಡಿಕೆಯ ಮಟ್ಟವು ಮಾರುಕಟ್ಟೆಯ ನಿಜ ಬೆಳವಣಿಗೆಯ ಅನುಭವವನ್ನು ಅವಲಂಬಿಸಿರುತ್ತದೆ; ಹಾಗಾಗಿ, ಶ್ರೀಮಂತರಿಗೆ ತೆರಿಗೆ ವಿನಾಯಿತಿಗಳನ್ನು ನೀಡುವುದರಿಂದ ಅವರ ಹೂಡಿಕೆಯು ಅಣುವಿನಷ್ಟೂ ಹೆಚ್ಚುವುದಿಲ್ಲ. ಅಂತಿಮವಾಗಿ, ಒಟ್ಟಾರೆ ಬೇಡಿಕೆಯು (ಬಳಕೆ ಮತ್ತು ಹೂಡಿಕೆಯನ್ನು ಒಟ್ಟಿಗೆ ತೆಗೆದುಕೊಂಡರೆ) ಇಳಿಕೆಯಾಗಿರುವುದು ಕಂಡುಬರುತ್ತದೆ. ಇದು ಬಿಕ್ಕಟ್ಟನ್ನು ಇನ್ನಷ್ಟು ಬಿಗಡಾಯಿಸುತ್ತದೆ.

ಬಂಡವಾಳಶಾಹಿಯ ಸಮರ್ಥಕರಾಗಿದ್ದ ಮತ್ತು ಬೋಲ್ಶೆವಿಕ್ ಕ್ರಾಂತಿಯಂತಹ ಘಟನೆ ಪಶ್ಚಿಮದಲ್ಲಿ ಏನಾದರೂ ಘಟಿಸಿದರೆ ಅದು ಬಂಡವಾಳಶಾಹಿಯನ್ನು ಹಿಂದಿಕ್ಕಬಹುದೆಂದು ಭಯಭೀತರಾಗಿದ್ದ ಜಾನ್ ಮೇನಾರ್ಡ್ ಕೀನ್ಸ್ 1930ರ ದಶಕದಲ್ಲಿ, ಬಂಡವಾಳಶಾಹಿ ವ್ಯವಸ್ಥೆಯನ್ನು ಸಂರಕ್ಷಣೆ ಮಾಡಲು ಒಟ್ಟಾರೆ ಬೇಡಿಕೆಯನ್ನು ಸರ್ಕಾರದ ಪ್ರಯತ್ನದ ಮೂಲಕ ಹೆಚ್ಚಿಸುವುದು ಅಗತ್ಯವೆಂದು ಪ್ರತಿಪಾದಿಸಿದ್ದರು. ಸಮಕಾಲೀನ ಬಂಡವಾಳಶಾಹಿಯಲ್ಲಿ ನಾವು ನೋಡುತ್ತಿರುವ ವಿದ್ಯಮಾನವು ಕೀನ್ಸ್ ಅವರ ಪ್ರತಿಪಾದನೆಗೆ ವಿರುದ್ಧವಾಗಿದೆ. ಇದು ನಿಸ್ಸಂದೇಹವಾಗಿಯೂ ರಾಜಕೀಯವಾಗಿ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ.

ಜೈಲಿನ ಕೋಣೆಗಳಲ್ಲಿ...

ಕೋಣೆ ಒಂದು:

ಈ ಕೋಣೆಯೊಳಗೆ ಒಂದು ಪುಸ್ತಕವಿತ್ತು.
ಕೇಳಿದೆ ನಾನು –
"ಏನಿದು ಕೋಣೆಯೊಳಗೆ ಪುಸ್ತಕ?
ಯಾರೋ ಕೈದಿ ಓದಿ ಮರೆತು
ಹೋಗಿರಬೇಕು.."

ಜೈಲಧಿಕಾರಿ ಉತ್ತರಿಸಿದ –
"ಇಲ್ಲ.. ಈ ಪುಸ್ತಕ ಬರೆದ ಮಹಾನ್ ಸಾಹಿತಿಗೆ
ಆಯ್ಕೆ ಕೊಡಲಾಗಿತ್ತು –
'ಒಂದೋ ನೀನು ಜೈಲಲ್ಲಿರಬೇಕು
ಅಥವಾ ನೀನು ಬರೆದ ಈ ಪುಸ್ತಕ'
ಸಾಹಿತಿ ಪುಸ್ತಕವನ್ನು ನಮಗೆ ಒಪ್ಪಿಸಿದ
ನಿಮಗೂ ಗೊತ್ತಲ್ವಾ–
ಸಾಹಿತಿಗಳು ಸ್ವಾತಂತ್ರ್ಯವನ್ನು ಇಷ್ಟಪಡುತ್ತಾರೆ"

**

ಕೋಣೆ ಎರಡು:

ಈ ಕೋಣೆಯೊಳಗೊಂದು ಪಂಜರ
ಅದರೊಳಗೊಂದು ಕಾಗೆ!
ಕೇಳಿದೆ ನಾನು –
"ಅರೆ ಈ ಕಾಗೆಯನ್ಯಾಕೆ ಬಂಧಿಸಿದ್ದೀರಿ?
ಯಾರನ್ನಾದರೂ ಕುಕ್ಕಿ ಕುಕ್ಕಿ ಕೊಲೆ ಮಾಡಿತೆ?"

ಜೈಲಧಿಕಾರಿ ಉತ್ತರಿಸಿದ –
"ಇಲ್ಲ, ನಮ್ಮ ನಾಯಕ ಸುಖದ ನಶೆಯಲ್ಲಿ
ತೇಲುತ್ತಿದ್ದಾಗ
ತನ್ನ ಒಡೆದು ಹೋದ ಮೊಟ್ಟೆಗಾಗಿ
ಈ ಕಾಗೆ ಕರ್ಕಶವಾಗಿ ಕೂಗುತ್ತಿತ್ತು
ಅದಕ್ಕಾಗಿ ಬಂಧಿಸಿದ್ದೇವೆ..."
ನಿಮಗೀಗ ಅರ್ಥ ಆಗಿರಬಹುದು
ಈ ದುರಂತದ ಕಾಲದಲ್ಲೂ
ಊರಿನ ಕೋಗಿಲೆಗಳೆಲ್ಲಾ
ಏಕೆ ಇಷ್ಟೊಂದು ಮಧುರವಾಗಿ ಹಾಡುತ್ತಿವೆ
ಎಂದು!

**

ಕೋಣೆ ಮೂರು:

ಈ ಕೋಣೆ ಇನ್ನೂ ವಿಚಿತ್ರ!
ಒಂದು ವೇಷಭೂಷಣವನ್ನು
ಹ್ಯಾಂಗರಿಗೆ ಜೋತು ಹಾಕಲಾಗಿತ್ತು
ಕೇಳಿದೆ ನಾನು –
"ಏನಿದರ ವಿಷಯ?"

ಜೈಲಧಿಕಾರಿ ಉತ್ತರಿಸಿದ –
"ನಮ್ಮ ನಾಯಕನ ಭಾಷಣದಲ್ಲಿ ದ್ವೇಷವಿದೆ
ಎಂದು ಯಾರೋ ದಾವೆ ಹೂಡಿದ್ದರು.
ನಮ್ಮ ಪರ ವಕೀಲ
'ಆ ಭಾಷಣವೆಲ್ಲಾ ಈ ವೇಷದ ಪ್ರಭಾವ.
ಆದ್ದರಿಂದ ಈ ವೇಷಕ್ಕಷ್ಟೆ ಶಿಕ್ಷೆಯಾಗಬೇಕು'
ಎಂದು ವಾದಿಸಿ ಗೆದ್ದಿದ್ದರಿಂದ
ಈ ವೇಷ ಈಗ ಶಿಕ್ಷೆಯನ್ನು ಅನುಭವಿಸುತ್ತಿದೆ!

**

ಕೋಣೆ ನಾಲ್ಕು:

ಈ ಕೋಣೆಯ ಗೋಡೆಯ ಮೇಲೆ
ಕೆಲವೊಂದು ಅಂಕೆ ಸಂಖ್ಯೆಗಳನ್ನು
ಗೀಚಲಾಗಿತ್ತು.
ಕುತೂಹಲದಿಂದ ಕೇಳಿದೆ –
"ಏನಿದರ ಮರ್ಮ?"

ಜೈಲಧಿಕಾರಿ ಉತ್ತರಿಸಿದ–
"ಇವು ಬರೀ ಸಂಖ್ಯೆಗಳಲ್ಲ ಸಂವಿಧಾನದ
ಕಲಮ್ಮುಗಳು
ನಿಮಗೆ ಗೊತ್ತಲ್ಲ..
ಕಾನೂನನ್ನು ಕೈಗೆ ತೆಗೆದುಕೊಳ್ಳುವುದು
ಅಪರಾಧವೆಂದು.
ಅದಕ್ಕಾಗಿಯೇ ಜನರ ಕೈಗೆ ಸಿಗದಂತೆ
ಕೆಲವು ಕಾನೂನುಗಳನ್ನು ಬಂಧಿಸಿಟ್ಟಿದ್ದೇವೆ!"

**

ಕೊನೆಯ ಕೋಣೆ :

ಅರೆ ಈ ಕೋಣೆ ಖಾಲಿ!
ದಿಗ್ಭ್ರಮೆಯಿಂದ ಕೇಳಿದೆ ನಾನು–
"ಈ ಕೋಣೆಯಲ್ಲಿರಬೇಕಿದ್ದ
ಅತಿ ಕ್ರೂರಿ ಕೊಲೆಗಡುಕ ಅಪರಾಧಿ ಎಲ್ಲಿ?"

ಜೈಲಧಿಕಾರಿ ನಗುತ್ತಾ ಉತ್ತರಿಸಿದ–
"ನಿನಗೆ ಗೊತ್ತಿಲ್ವಾ?
ಅವನು ಈಗಾಗಲೇ ಬಿಡುಗಡೆಗೊಂಡು
ಸದ್ಯಕ್ಕೆ ಚುನಾವಣಾ ಪ್ರಚಾರದಲ್ಲಿದ್ದಾನೆ..
ನೀನು ಆತನನ್ನು ಜೈಲೊಳಗೆ ಹುಡುಕಿ ಬಂದ
ಈ ಹೊತ್ತು
ಆತ ಮತಕ್ಕಾಗಿ ನಿನ್ನ ಮನೆಯ ಬಾಗಿಲು
ತಟ್ಟುತ್ತಿರಬಹುದು..

–ವಿಲ್ಸನ್ ಕಟೀಲ್

ಸಾವರ್ಕರ್ ಬಲೂನಿಗೆ ಶೌರಿ ಚುಚ್ಚಿದ ಸೂಜಿಗಳು......... ಪುಟ 16 ರಿಂದ

ಆದರೆ ಅದನ್ನು ಮರೆಮಾಚುವುದು ಸರಿಯಲ್ಲ

ಬಿಬಿಸಿ: ಸಾವರ್ಕರ್ ತನಗೆ ದಯೆ ತೋರಿಸಬೇಕೆಂದು ಬ್ರಿಟಿಷರಿಗೆ ಸಲ್ಲಿಸಿದ ಅರ್ಜಿಯ ಬಗ್ಗೆ ಸಾಕಷ್ಟು ವಿವಾದ ಇದೆ. (ಛತ್ರಪತಿ) ಶಿವಾಜಿ ಕೂಡ ತನ್ನನ್ನು ಬಚಾವು ಮಾಡಿಕೊಳ್ಳಲೆಂದು ಇಂಥ ದಯಾ ಕೋರಿಕೆ ಸಲ್ಲಿಸಿದ ದಾಖಲೆ ಇದೆ ಎಂದು ನಿಮ್ಮ ಪುಸ್ತಕದಲ್ಲಿ ಹೇಳಿದ್ದೀರಿ. ಸಾವರ್ಕರ್ ಅದೇ ರೀತಿ ತನ್ನನ್ನು ತಾನು ಬಚಾವ್ ಮಾಡಿಕೊಂಡ ಬಗ್ಗೆ ನೀವು ಏನನ್ನುತ್ತೀರಿ?

ಶೌರಿ: ಶಿವಾಜಿ ಇಂಥ ಸಂಕಷ್ಟ ಎದುರಾದಾಗಲೆಲ್ಲ ಔರಂಗ್‌ಜೇಬ್ ಅಥವಾ ಆತನ ಸೈನಿಕರಿಂದ ಕಷ್ಟ ಬಂದಾಗಲೆಲ್ಲ– ಇಂಥದ್ದೊಂದು ಕಾಗದವನ್ನು ಬರೆಯುತ್ತಿದ್ದರು. 'ನಿಮ್ಮ ಜೊತೆಗಿರುತ್ತೇನೆ. ನಿಮ್ಮ ದರ್ಬಾರಿನಲ್ಲಿರುತ್ತೇನೆ. ನೀವು ದಖ್ಖನ್ ಮೇಲೆ ದಾಳಿ ಮಾಡಿದಾಗ ನಿಮಗೆ ಸಹಾಯ ಮಾಡುತ್ತೇನೆ' ಎಂದೆಲ್ಲ ಬರೆದಿದ್ದು ಹೌದು. ಆದರೆ ಆ ಕಷ್ಟದಿಂದ ಹೊರಕ್ಕೆ ಬಂದಮೇಲೆ ಮತ್ತೆ ಔರಂಗ್‌ಜೇಬ್ ವಿರುದ್ಧ ಮಸಲತ್ತು ಮುಂದುವರೆಸುತ್ತಿದ್ದರು. ಸಾವರ್ಕರ್ ಹೊರಕ್ಕೆ ಬಂದಮೇಲೆ ಹಾಗೆಲ್ಲ ಬ್ರಿಟಿಷರ ವಿರುದ್ಧ ಸಮರತಂತ್ರ ಹೂಡಿದರೆ? ಇಲ್ಲ; ಬಿಲ್ಕುಲ್ ಇಲ್ಲ. ಬ್ರಿಟಿಷರಿಗೆ ಸಹಾಯ ಮಾಡುತ್ತಲೇ ಹೋದರು. ಶಿವಾಜಿಯ ಉಲ್ಟಾ! ಆದರೂ ಹೇಳುವಾಗ ತನ್ನದು ಶಿವಾಜಿಯ ರಣನೀತಿ ಎಂದು ಹೇಳುವುದನ್ನು ಬಿಡಲಿಲ್ಲ.

ಬಿಬಿಸಿ: ಈಗ ನಾವು 1939ಕ್ಕೆ ಬರೋಣ. ಸಾವರ್ಕರ್ ಹಿಟ್ಲರ್ ನೀತಿಯ ಪ್ರತಿಪಾದಕ ಆಗಿದ್ದರು. ಹಿಟ್ಲರ್ ಹೇಗೆ ಯಹೂದ್ಯರ ನರಮೇಧದಲ್ಲಿ ತೊಡಗಿದ್ದಾನೆ ಎಂದು ಗೊತ್ತಿದ್ದರೂ ಕೂಡ ಸಾವರ್ಕರ್ ನಮ್ಮ ಮುಸ್ಲಿಮರ ಮೇಲೂ ಅಂಥದ್ದೇ ಪ್ರಹಾರ ಆಗಬೇಕು ಎಂದಿದ್ದರಲ್ಲ?

ಶೌರಿ: ಜರ್ಮನಿ ಮತ್ತು ಇಟಲಿಯಲ್ಲಿ ನಡೆಯುತ್ತಿರುವ ನರಮೇಧ 1938ರಲ್ಲೇ ಜಗತ್ತಿಗೆಲ್ಲ ಗೊತ್ತಾಗಿತ್ತು. ಆದರೂ ಸಾವರ್ಕರ್ ಬರೆಯುತ್ತಾರೆ: 'ಈ ನೆಹರೂ ಅಂಥವರಿಗೆ ದೇಶವನ್ನು ಮುನ್ನಡೆಸುವ ತಂತ್ರವೇ ಗೊತ್ತಿಲ್ಲ. ಹಿಟ್ಲರನ ಆಳ್ವಿಕೆಯಲ್ಲಿ ಜರ್ಮನಿ ಎಷ್ಟು ಶೀಘ್ರವಾಗಿ ಏಳಿಗೆ ಸಾಧಿಸಿದೆ' ಹೀಗೆಲ್ಲ ಬರೆಯುತ್ತಿದ್ದರು. ಅಷ್ಟೇ ಅಲ್ಲ, ಮುಂಬೈಯಲ್ಲಿದ್ದ ಜರ್ಮನ್ ಏಜಂಟರಿಗೆ ತಲುಪುವಂತೆ ಇಂಥ ಬರೆಹಗಳನ್ನು ಮಿತ್ರರ ಮೂಲಕ ರವಾನಿಸುತ್ತಿದ್ದರು. ಏಕೆಂದರೆ ತಾನು ಜರ್ಮನಿಯನ್ನು ಅದೆಷ್ಟು ಹೊಗಳುತ್ತಿದ್ದೇನೆಂದು ಅಲ್ಲಿನವರಿಗೂ ಗೊತ್ತಾಗಲೀ ಎಂದು ಸಾವರ್ಕರ್ ಬಯಸಿದ್ದರು. ಇವರಿಗೆ ನೈತಿಕತೆ ಎಂಬುದೇ ಇರಲಿಲ್ಲ. ಇವರು ನಾತ್ಸಿ (ನಾಝಿ) ನೀತಿಯನ್ನು ತನ್ನೊಳಗೆ ಆವಾಹಿಸಿಕೊಂಡಿದ್ದರು ಎಂದು ನನಗೆ ಅನ್ನಿಸುತ್ತಿದೆ. ನಾತ್ಸಿಗಳ ಪ್ರಕಾರ ಸತ್ಯಗಿತ್ಯ ಅನ್ನೋದು ಏನೂ ಇಲ್ಲ. ಈಗ ನಮ್ಮ ಉದ್ದೇಶ ಸಾಧನೆಗೆ ಏನೇನು ಬೇಕಾಗಿದೆಯೊ ಅದು ಮಾತ್ರ ಸತ್ಯ ಎಂದು ಅವರು ಪರಿಗಣಿಸಿದ್ದರು.

ಬಿಬಿಸಿ: ಶೌರಿಯವರೆ, ನಿಮ್ಮ ಬಗ್ಗೆ ಕೂಡ ಒಂದು ವರ್ಗದ ಜನರು ನಾನಾ ಟೀಕಾಪ್ರಹಾರ ಮಾಡುತ್ತಾರಲ್ಲ? ನೀವೊಬ್ಬ ಸುಪಾರಿ ಕೊಲೆಗಡುಕ; ಬುದ್ಧಿಜೀವಿ ಕೊಲೆಗಡುಕ. ಕೆಲವರ ಪ್ರಕಾರ ನೀವೀಗ ಸರ್ಕಾರದ ಜೊತೆಗಿಲ್ಲ. ಬಿಜೆಪಿಯ ಜೊತೆಗೂ ಇಲ್ಲ. ಇಂಥ ಟೀಕೆಗಳಿಗೆ ನೀವೇನನ್ನುತ್ತೀರಿ?

ಶೌರಿ: ನನ್ನ ಬಗ್ಗೆ ಅದೆಷ್ಟೇ ಅವಹೇಳನದ ಮಾತು ಬಂದರೂ ನೀವು ಅದನ್ನು ನಿಜವೆಂದೇ ನಂಬಿ. ನನ್ನದೇನೂ ತಕರಾರಿಲ್ಲ. ಆದರೆ ದಾಖಲೆಗಳು ಏನು ಹೇಳುತ್ತವೆ ಅದನ್ನು ನೋಡಿ. ಆತ (ಸಾವರ್ಕರ್) ಬ್ರಿಟಿಷರಿಗೆ ದಯಾ ಅರ್ಜಿಯನ್ನು ಬರೆದಿದ್ದು ನಿಜವೊ ಸುಳ್ಳೊ? ಆತ ಬ್ರಿಟಿಷರಿಗೆ ಸಹಾಯ ಮಾಡಿದ್ದರೋ ಇಲ್ಲವೊ? ಗಾಂಧಿಜಿಯ ಮೇಲೆ ಬಯ್ಗುಳದ ಸುರಿಮಳೆ ಸುರಿಸಿದ್ದರೊ ಇಲ್ಲವೊ? 'ಕ್ವಿಟ್ ಇಂಡಿಯಾ' ಚಳವಳಿಯನ್ನು ವಿರೋಧಿಸಿದ್ದು ನಿಜವೊ ಸುಳ್ಳೊ? ಮುಸ್ಲಿಂ ಲೀಗ್ ಮೇಲೆ ಹಿಂದೂ ಮಹಾಸಭಾ ಪರವಾಗಿ ಹಿಗ್ಗಾಮುಗ್ಗಾ ಬೈದಿದ್ದು ನಿಜವೊ ಸುಳ್ಳೊ? ಆಮೇಲೆ ಸಿಂಧ್ ಪ್ರಾಂತದಲ್ಲಿ ಮತ್ತು ಬಂಗಾಳದಲ್ಲಿ ಅದೇ ಮುಸ್ಲಿಂ ಲೀಗ್ ಸರಕಾರದಲ್ಲಿ ಹಿಂದೂ ಮಹಾಸಭಾ ಸದಸ್ಯರನ್ನು ಮಂತ್ರಿಗಳನ್ನಾಗಿ ಮಾಡುವಲ್ಲಿ ಇವರ ಪಾತ್ರ ಇತ್ತೊ ಇಲ್ಲವೊ? ನನ್ನ ಕೆಲಸ, ನಿಮ್ಮ ಕೆಲಸ ಎಲ್ಲ ಏನೆಂದರೆ ಸತ್ಯ ಸಂಗತಿ ಏನಿದೆ ಎಂಬುದನ್ನು ಶೋಧಿಸಿ ತೋರಿಸುವುದು. ಈಗ ನಾನು (ಶೌರಿ) ಹಿಂದೂ ವಿರುದ್ಧ ಇದ್ದೇನೆಂದು ಹುಯಿಲು ಎಬ್ಬಿಸಿದ್ದಾರೆ. ನಾನು ಹಿಂದೂ ಅವನತಿಯನ್ನು ತಡೆಯಲು ಇದನ್ನೆಲ್ಲ ಬರೆಯುತ್ತಿದ್ದೇನೆ.

ಬಿಬಿಸಿ: 2021ರಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಾವರ್ಕರ್ ದುಷ್ಟ ಪ್ರಚಾರಗಳ ಬಲಿಪಶು ಆಗಿದ್ದಾರೆ. ಅವರು ಬ್ರಿಟಿಷರಿಗೆ ದಯಾ ಅರ್ಜಿಯನ್ನು ಗಾಂಧೀಜಿಯ ಸಲಹೆಯ ಪ್ರಕಾರ ಬರೆದಿದ್ದರು ಎಂದಿದ್ದರು.

ಶೌರಿ: ರಾಜನಾಥ್ ಸಿಂಗ್ ಅವರಿಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ. ಸಾವರ್ಕರ್ 1910ರಲ್ಲಿ ಬ್ರಿಟಿಷರ ಬಂಧಿಯಾಗಿ ಜೈಲು ಸೇರುತ್ತಾರೆ. ಎರಡೇ ತಿಂಗಳಲ್ಲಿ ದಯಾ ಅರ್ಜಿಯನ್ನು ಸಲ್ಲಿಸುತ್ತಾರೆ. ಆನಂತರವೂ ಸರಣಿಯಲ್ಲಿ ಏಳು ದಯಾ ಅರ್ಜಿಗಳನ್ನು ಸಲ್ಲಿಸುತ್ತಾರೆ. ಆ ಅವಧಿಯಲ್ಲಿ ಅಂದರೆ 1910–11ರಲ್ಲಿ ಗಾಂಧೀಜಿ ಎಲ್ಲಿದ್ದರು? ದಕ್ಷಿಣ ಆಫ್ರಿಕದಲ್ಲಿದ್ದರು. ಅಲ್ಲಿ ಅವರು ಚಳವಳಿ ನಡೆಸಿದ್ದರು. ಮುಂದೆ 1915ರಲ್ಲಿ ಭಾರತಕ್ಕೆ ಬಂದರು. ಆವೇಳೆಗೆ ಸಾವರ್ಕರ್ ಜೈಲಿನಲ್ಲಿ 4 ವರ್ಷ ಕಳೆದಿದ್ದರು; ಐದು ಬಾರಿ ಬ್ರಿಟಿಷರಿಗೆ ದಯಾ ಅರ್ಜಿ ಸಲ್ಲಿಸಿದ್ದರು. ಗಾಂಧೀಜಿ ಇಲ್ಲಿಗೆ ಬಂದು ಬ್ರಿಟಿಷರ ವಿರುದ್ಧ ಚಳವಳಿ ಆರಂಭಿಸಿದರು. ರಾಜ್‌ಮೋಹನ್ ಗಾಂಧಿ ಇದನ್ನು ತುಂಬ ಚೆನ್ನಾಗಿ ವಿವರಿಸಿದ್ದಾರೆ: ಗಾಂಧೀಜಿ ಇಲ್ಲಿ ಚಂಪಾರಣ್ ಸತ್ಯಾಗ್ರಹ ನಡೆಸುತ್ತಾರೆ. ಖೇಡಾ ಆಂದೋಲನ, ಬಾರ್ದೋಲಿ ಆಂದೋಲನ ಆಮೇಲೆ ಜಲಿಯನ್‌ವಾಲಾ ಹತ್ಯಾಕಾಂಡ ಆಗುತ್ತದೆ. ಅದಾದ ನಂತರ ರೌಲೆಟ್ ಆಕ್ಟ್ ಬರುತ್ತದೆ. ಗಾಂಧೀಜಿ ಬ್ರಿಟಿಷರ ವಿರುದ್ಧ ಜೈಲ್‌ಭರೋ ಕರೆಕೊಡುತ್ತ ಪಂಜಾಬಿನಲ್ಲಿ ಹಳ್ಳಿಹಳ್ಳಿ ಸುತ್ತುತ್ತಾರೆ. ಬ್ರಿಟಿಷರ ಕ್ರೌರ್ಯದ ವಿರುದ್ಧ ಅಷ್ಟೊಂದು ಸಮರ ಸಾರಿರುವಾಗ, ಅವರು (ಗಾಂಧೀಜಿ) ಸಾವರ್ಕರ್‌ಗೆ 'ದಯಾ ಅರ್ಜಿ ಹಾಕಿ' ಎಂದು ಹೇಳಲು ಸಾಧ್ಯ ಇದೆಯೆ? ಸಾಧ್ಯವೇ ಇಲ್ಲ! ಗಾಂಧೀಜಿ ಹೇಳಿದ್ದರಿಂದಲೇ ಅರ್ಜಿ ಹಾಕಿದೆ ಎನ್ನುತ್ತಾರಲ್ಲ, ಹಾಗಿದ್ದರೆ ಗಾಂಧೀಜಿಯವರ ಬೇರೆ ಯಾವ ಯಾವ ಮಾತುಗಳನ್ನು ಸಾವರ್ಕರ ಪಾಲಿಸಿದ್ದಾರೆ? ಮುಂದೇನಾಯ್ತು ಅಂದರೆ, ಸರಕಾರ ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯನ್ನು ಘೋಷಿಸಿತು. ಆ ವೇಳೆಯಲ್ಲಿ ಸಾವರ್ಕರ್ ಬಿಡುಗಡೆ ಆಗಲಿಲ್ಲವಲ್ಲ ಎಂದು ಆತನ ಸಹೋದರ (ಆತ ಜೈಲಲ್ಲಿರಲಿಲ್ಲ) ಬ್ರಿಟಿಷರಿಗೆ ಸಾಲು ಸಾಲು ಅರ್ಜಿ ಬರೆಯುತ್ತಿದ್ದ; ಸಾವರ್ಕರ್ ಪತ್ನಿಯ ಹೆಸರಿನಲ್ಲಿ ಮತ್ತು ಸ್ವಂತ ಹೆಸರಿನಲ್ಲಿ ಅರ್ಜಿ ಬರೆಯುತ್ತಲೇ ಇದ್ದ. ಗಾಂಧೀಜಿಗೂ ಬರೆದಿದ್ದ. ಈ ವಿಷಯ ಕುರಿತು ಗಾಂಧೀಜಿ ಬರೆದಿದ್ದು ಹೀಗಿದೆ: 'ಸಾವರ್ಕರ್ ರಾಜಕೀಯ ಕೈದಿ ಹೌದು, ಅವರು ಯಾರದ್ದೂ ಕೊಲೆ ಮಾಡಿಲ್ಲ. ಸರಕಾರೀ ಕ್ಷಮಾ ನೀತಿಯ ಅನುಗುಣವಾಗಿ ಅವರ ಬಿಡುಗಡೆ ಆಗಬೇಕು. ಮೇಲಾಗಿ ಭಾರತದಲ್ಲಿ ಬ್ರಿಟಿಷರ ಶಾಸನ ಮುಂದುವರೆಯಲು (ಸಹಾಯ ಮಾಡುತ್ತೇವೆಂದು) ಇಬ್ಬರೂ ಸಹೋದರರು ಪ್ರಮಾಣ ಮಾಡಿದ್ದಾರೆ. ಆದ್ದರಿಂದ ಅವರ ಬಿಡುಗಡೆ ಆಗಬೇಕಾಗಿದ್ದು ನ್ಯಾಯಸಮ್ಮತ ಆಗಿದೆ' ಎಂದು ಗಾಂಧೀಜಿ ಬರೆದಿದ್ದಾರೆ. ಆದರೆ ಸಾವರ್ಕರ್ ಹೇಳಿಕೊಂಡಿದ್ದು ನೋಡಿ: ತಾನು ಹಿಂದೆ ಐದಾರು ಬಾರಿ ದಯಾ ಅರ್ಜಿ ಹಾಕಿದ್ದೆ ಎಂಬುದನ್ನು ಮರೆಮಾಚಿ, ಈಗ 'ಗಾಂಧೀಜಿಯ ಸಲಹೆಯ ಪ್ರಕಾರ ಅರ್ಜಿ ಹಾಕಿದೆ, ಎನ್ನುತ್ತಾರಲ್ಲ?

ಬಿಬಿಸಿ: ಸಾವರ್ಕರ್ ಆರೆಸ್ಸೆಸ್‌ನ ಭಾಗವೂ ಆಗಿರಲಿಲ್ಲ. ಜನಸಂಘಕ್ಕೂ ಸೇರಿರಲಿಲ್ಲ. ಭಾಜಪಾ ಅಂತೂ ಆಗ ಅಸ್ತಿತ್ವದಲ್ಲೇ ಇರಲಿಲ್ಲ. ಆದರೆ ಈಗ ಸರ್ಕಾರ ಸಾವರ್ಕರ್‌ಗೆ ಅಷ್ಟೊಂದು ಮಾನ ಸಂಮಾನ ಕೊಡುತ್ತಿದೆ ಎಂದರೆ ಅದು ಅವರ ತ್ಯಾಗ ಮತ್ತು ಬಲಿದಾನದ ಮಹತ್ವವನ್ನು ಸಾರುತ್ತಿದೆ ಅಲ್ಲವೆ?

ಶೌರಿ: ಸಾವರ್ಕರ್‌ಗೆ ಈಗ ಮರ್ಯಾದೆ ಸಿಗಲು ಎರಡು ಕಾರಣ ಇವೆ: (1) ಇವರ ಬಳಿ (ಭಾಜಪಾ ಬಳಿ) ಗಣನೀಯ ಹೀರೋಗಳೇ ಇಲ್ಲ. ಒಮ್ಮೆ ನೇತಾಜಿಯನ್ನು ಎತ್ತಿ ಹಿಡಿಯುತ್ತಾರೆ. ಆದರೆ ನೇತಾಜಿ ಕೋಮುದ್ವೇಷ ಹರಡುವವರ ಹಾಗೂ ಈ ಹಿಂದೂವಿಂದೂಗಳ ವಿರುದ್ಧ ಸಖತ್ ಹರಿತವಾಗಿ ಮಾತಾಡುತ್ತಿದ್ದರು. ಅವರು ನಿಜಕ್ಕೂ ಸೆಕ್ಯೂಲರ್ ಇದ್ದರು. (2) ಗಾಂಧೀಜಿಗೆ ಬಯ್ಗುಳ ಸುರಿಸುವವರೊಬ್ಬರು ಭಾಜಪಾಕ್ಕೆ ಬೇಕಾಗಿತ್ತು. ಇವರಿಗೆ (ಭಾಜಪಾದವರಿಗೆ) ಗಾಂಧೀಜಿ ಮುಖ್ಯ ಸಮಸ್ಯೆಯಾಗಿದ್ದರು.

ಬಿಬಿಸಿ: ಏಕೆ?

ಶೌರಿ: ಏಕೆಂದರೆ ಗಾಂಧೀಜಿ ಸತ್ಯದ ಪರವಾಗಿ ಇದ್ದರು. ಹಿಂಸೆಯನ್ನು ಇಷ್ಟಪಡುತ್ತಿರಲಿಲ್ಲ. ಮೇಲಾಗಿ ಸರ್ವಧರ್ಮ ಸಮಭಾವವನ್ನು ಒತ್ತಿ ಹೇಳುತ್ತಿದ್ದರು. ಭೋಗ ಸಂಸ್ಕೃತಿಯ ವಿರುದ್ಧವಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ, ಈಗಿನ ಅತೀ ಧಾರ್ಮಿಕತೆ ಚಾರ್‌ಧಾಮ್ ಯಾತ್ರೆ, ಅಲ್ಲಿ ಹೋಗಿ ಫೋಟೊ ತೆಗೆಸಿಕೋ, ಗಿನ್ನೆಸ್ ಬುಕ್ ದಾಖಲೆಗೆಂದು ಮಹಾಕುಂಭ ಆಯೋಜಿಸೋಣ.. ಗಾಂಧೀಜಿಗೆ ಇಂಥ ಬಹಿರಂಗ ಪ್ರಚಾರಕ್ಕೆ ಮಾನ್ಯತೆ ಕೊಡುತ್ತಿದ್ದರಾ ಎಂದಾದರೂ?

ಬಿಬಿಸಿ: ವಾಜಪೇಯಿಯವರು ಸಾವರ್ಕರ್ ಬಗ್ಗೆ ತಮ್ಮದೊಂದು ಭಾಷಣದಲ್ಲಿ ಸುಂದರ ಕವಿತೆ ಬರೆದು ಓದಿದ್ದರು. ಅದಕ್ಕೇನಂತೀರಿ?

ಶೌರಿ: ಆ ಕವಿತೆಯನ್ನು ಅವರೊಬ್ಬ ಕವಿಯಾಗಿ ವರ್ಣಿಸಿದ್ದು. ಸಾವರ್ಕರ್ ಹೀಗಿದ್ದರು, ಹಾಗಿದ್ದರು, ತಮ್ಮದೆಲ್ಲವನ್ನೂ ತ್ಯಾಗ ಮಾಡಿದ್ದರು. ಅವರ ರಾಷ್ಟ್ರಪ್ರೇಮ ಅದೆಷ್ಟು ಪ್ರಖರವಾಗಿತ್ತೆಂದರೆ ಸಮುದ್ರದ ಭೀಕರ ಅಲೆಗಳನ್ನೂ ಛಿದ್ರಗೊಳಿಸಿ ಮೇಲೆದ್ದು ಬಂದು ಇವೆಲ್ಲ ಕವಿಮನಸಿನ ಅತಿರೇಕದ ರೋಚಕ ವರ್ಣನೆಗಳು. ವಾಸ್ತವ ಏನು ಗೊತ್ತೆ?..

ನಾಸಿಕ್‌ನಲ್ಲಿ ಎಮ್‌ಸಿ ಜಾಕ್ಸನ್ ಹೆಸರಿನ ಒಬ್ಬ ಬ್ರಿಟಿಷ್ ಅಧಿಕಾರಿ ಇದ್ದರು. ಅವರು ಸಂಸ್ಕೃತ ಓದಿಕೊಂಡಿದ್ದರು. ಅವರನ್ನು ಜನರು 'ಪಂಡಿತ್ ಜಾಕ್ಸನ್' ಎಂದು ಕರೆಯುತ್ತಿದ್ದರು. ಆದರೆ ಪ್ಲೇಗ್ ಬಂದ ಅವಧಿಯಲ್ಲಿ ಅವರು ಕಟ್ಟುನಿಟ್ಟಿನ ಶಿಸ್ತುಪಾಲನೆಗೆ ಮುಂದಾದರು. ಅದೇ ಕಾರಣಕ್ಕೆ ಅವರ ಕಗ್ಗೊಲೆ ಆಯಿತು. ಅದು 'ಮಹಾ ಕ್ರಾಂತಿಕಾರಿ' ಸಾಹಸವೆನಿಸಿತು. ತನಿಖೆ ನಡೆದಾಗ, ಆ ಕೊಲೆಗೆ ಬಳಸಿದ ಪಿಸ್ತೂಲನ್ನು ಲಂಡನ್ನಿನಲ್ಲಿರುವ ಸಾವರ್ಕರ್ ನೆರವಿನಿಂದ ನಾಲ್ವರು ಕಳ್ಳಸಾಗಣೆ ಮಾಡಿ ತಂದಿದ್ದೆಂದು ಗೊತ್ತಾಯಿತು. ಆ ಕಾರಣದಿಂದ ಸಾವರ್ಕರರನ್ನು ದಸ್ತಗಿರಿ ಮಾಡಿ ಎಸ್‌ಎಸ್ ಮೊರಿಯಾ ಹೆಸರಿನ ಉಗಿಹಡಗಿನಲ್ಲಿ ಭಾರತಕ್ಕೆ ತರಲಾಗುತ್ತಿತ್ತು. ಆ ಹಡಗು ಫ್ರಾನ್ಸ್‌ನ ಮಾರ್ಸೆ ಹೆಸರಿನ ಬಂದರಿನಲ್ಲಿ ಕಲ್ಲಿದ್ದಲು ಮರುಭರ್ತಿಗೆಂದು ಲಂಗರು ಹಾಕಿತ್ತು. ತನಗೆ 'ಬಾತ್ ರೂಮಿಗೆ ಹೋಗಬೇಕಿದೆ' ಎಂದು ಹೇಳಿ ಆರೂವರೆ ವೇಳೆಗೆ ಸಾವರ್ಕರ್ ಶೌಚಾಲಯಕ್ಕೆ ಹೋದರು. ಅಲ್ಲೊಂದು ರಂಧ್ರ ಇತ್ತು. ಅಲ್ಲಿಂದ ಸಾವರ್ಕರ್ ಜಿಗಿದು ದಡ ಸೇರಿದರು. ಆ ದಡ ಎಷ್ಟು ದೂರ ಇತ್ತು? ಕೇವಲ 10–12 ಅಡಿ ದೂರದಲ್ಲಿ ಹಡಗುಕಟ್ಟೆ ಇತ್ತು! ಅಲೆಗಿಲೆಯ ಅಬ್ಬರ ಏನೂ ಇರಲಿಲ್ಲ. ಈತ ಆಚೆ ಪಾರಾಗಿ ಓಡತೊಡಗಿದಾಗ ಇವನ್ಯಾವನೊ ಕಳ್ಳನೆಂದು ಎತ್ತರದಿಂದ ನೋಡಿದ ಫ್ರೆಂಚ್ ಪೊಲೀಸ ಒಬ್ಬ ಕೂಗಾಡಿ ಇನ್ನಿಬ್ಬರು ಪೇದೆಗಳನ್ನು ಕೆಳಕ್ಕೆ ಕಳಿಸಿದ. ಅವರು ಧಡಧಡ ದೌಡಾಯಿಸಿ ಬಂದು ಈತನನ್ನು ಹಿಡಿದು (ಹಡಗಿನೊಳಕ್ಕೆ) ತಳ್ಳಿದರು. ಮುಂದೆ ಮಂಬೈಯಲ್ಲಿ ತನಿಖಾ ಸಮಿತಿಯ ವಿಚಾರಣೆಯ ವೇಳೆಯಲ್ಲಿ ಇವೆಲ್ಲ ಸಂಗತಿ ಬೆಳಕಿಗೆ ಬಂತು. ಅಚ್ಚರಿ ಏನೆಂದರೆ ಆ ಪೊಲೀಸರ ಬಟ್ಟೆ ಒದ್ದೆ ಕೂಡ ಆಗಿರಲಿಲ್ಲವೇಕೆ ಎಂಬ ಪ್ರಶ್ನೆಯನ್ನು ಯಾರೂ ಎತ್ತಿಲ್ಲ. ಈ ತನಿಖೆಯ ವರದಿಯನ್ನು ಯಾರೋ ಸೋರೋಸ್ ಗೀರೋಸ್ ಬಹಿರಂಗಪಡಿಸಿಲ್ಲ. 1956ರಲ್ಲೇ ಮುಂಬೈ ಸರ್ಕಾರ ಅದನ್ನು ಮುದ್ರಿಸಿದೆ. ಆದರೆ ಯಾರೂ ಅದನ್ನು ಓದೋದಿಲ್ಲ!

ಬಿಬಿಸಿ: ಹಿಂದೂತ್ವದ ಮುಷ್ಟಿಯಿಂದ ಹಿಂದೂಯಿಸಂನ್ನು ಉಳಿಸಲೆಂದು ಈ ಕೃತಿಯನ್ನು ಹೊರತಂದಿರುವುದಾಗಿ ನಿಮ್ಮ ಪುಸ್ತಕದ ಕೊನೆಯ ಪುಟದಲ್ಲಿ ನೀವು ಬರೆದಿದ್ದಿರಿ.

ಶೌರಿ: ಸಾವರ್ಕರರ ಒಂದು ಪುಸ್ತಕ ಇದೆ, ಹಿಂದೂತ್ವದ ಬಗ್ಗೆ. ಅದರಲ್ಲಿ ಅವರು ಹಿಂದೂಯಿಸಮ್ಮೇ ಬೇರೆ ಹಿಂದೂತ್ವವೇ ಬೇರೆ ಎಂದು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ. ನಾನು ಬರೆದಿದ್ದು ಕೇವಲ ಚಾರಿತ್ರಿಕ ದಾಖಲೆಗಾಗಿ ಅಲ್ಲ. ನನ್ನ ಉದ್ದೇಶ ಏನೆಂದರೆ ಇವೊತ್ತಿನ ಸಂದರ್ಭದಲ್ಲಿ ಹಿಂದೂಯಿಸಂನ್ನು ಹೇಗೆ ತಿರುಚಿ ಹಿಂದೂತ್ವವನ್ನಾಗಿ ಮಾಡಲಾಗುತ್ತಿದೆ ಎಂಬುದನ್ನು ತೋರಿಸುವುದು. ಈ ಪುಸ್ತಕದಲ್ಲಿ ಹೇಳಿದ ಹಿಂದೂತ್ವವೇ ಎಲ್ಲೆಡೆ ಜಾರಿಗೆ ಬಂದರೆ ನಮ್ಮ ಈ ಹಿಂದೂಸ್ತಾನ ಹಿಂದೂಸ್ತಾನವಾಗಿ ಉಳಿಯುವದಿಲ್ಲ. ಅದೊಂದು ಕೇಸರಿ ಸಮವಸ್ತ್ರದ ಪಾಕಿಸ್ತಾನ ಅಥವಾ ಇಸ್ಲಾಮಿಕ್ ಸ್ಟೇಟ್ ಆಗುತ್ತದೆ. ಅದು ನಮಗೆ ಈಗಲೇ ಕಾಣತೊಡಗಿದೆ. ಸಾರಾಸಗಟಾಗಿ ಜನರನ್ನು ಕೊಚ್ಚಿ ಹಾಕವುದು, ದ್ವೇಷ ಸಾಧಿಸುವುದು ಇವೆಲ್ಲ ಸಾವರ್ಕರರ ಸೂತ್ರಗಳು. "ದ್ವೇಷವೇ ನಮ್ಮನ್ನು ಒಗ್ಗೂಡಿಸುತ್ತದೆ.–ಈ ಹೇಳಿಕೆ ನನ್ನದಲ್ಲ, ಸಾವರ್ಕರದ್ದು. ಈ ಮೌಲ್ಯಗಳನ್ನು ನಾವೆಲ್ಲರೂ ಅಂತರ್ಗತ ಮಾಡಿಕೊಂಡರೆ ಹಿಂದೂಯಿಸಂ ಎಲ್ಲಿ ಉಳಿಯುತ್ತದೆ? ಒಬ್ಬ ಗರ್ಭಿಣಿ ಮಹಿಳೆಯ (ಬಿಲ್ಕಿಸ್ ಬಾನು) ಗ್ಯಾಂಗ್ ರೇಪ್ ಮಾಡುವುದು, ಒಂಬತ್ತು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮಾಡುವುದು ಹಿಂದೂ ಧರ್ಮವೆ? ಇಂದೋರ್ ನ ಒಬ್ಬ ಬಳೆಗಾರನನ್ನು ಚಚ್ಚಿ ಸಾಯಿಸುವುದು... ಇವೆಲ್ಲ ಹಿಂದೂಯಿಸಂ ಆಗಲು ಸಾಧ್ಯವೆ? ಅದು ಹಿಂದೂತ್ವ ಆಗುತ್ತದೆ.

ಕೃಪೆ : 'ಫೇಸ್ ಬುಕ್' – ಮೂಲ ಸಂದರ್ಶನವನ್ನು ನೋಡಲು ಲಿಂಕ್:
https://www.youtube.com/watch?v=DxkhsIuZZc0

NEW No. MAG(3)/NPP/205/2021-2022
JANASHAKTHI KANNADA VARA PATRIKE March 3-9, 2025 Price: Rs. 10/- Date of Publication: 28 February 2025 RNI No. KARKAN /2006/17926 Posted on 06-03-2025
Posted at BG PSO, BG - 560026 **Posted at Periodical Rate -** Rs. 2

ಸಾವರ್ಕರ್ ಕುರಿತು ಈಚೆಗೆ ಹಿರಿಯ ಪತ್ರಕರ್ತ, ವಾಜಪೇಯಿ ಸಂಪುಟದಲ್ಲಿ ಸಚಿವರೂ ಆಗಿದ್ದ ಅರುಣ್ ಶೌರಿ **"The New Icon: Savarkar and the Facts"** ಎಂಬ 560 ಪುಟಗಳ ಪುಸ್ತಕ ಬರೆದಿದ್ದಾರೆ. ಅನೇಕ ಮೂಲ ದಾಖಲೆಗಳನ್ನು ಅಧ್ಯಯನ ಮಾಡಿ ತಾನು ಸತ್ಯಸಂಗತಿಗಳನ್ನು ಮೇಲಕ್ಕೆತ್ತಿ ಇದನ್ನು ಬರೆದಿದ್ದೇನೆ ಎಂದು ಶೌರಿ ಹೇಳಿದ್ದಾರೆ. ಪುಸ್ತಕದ ಬಗ್ಗೆ ಬಿಬಿಸಿ ತನ್ನ ಹಿಂದೀ ಚಾನೆಲ್ ನಲ್ಲಿ ಅವರ ಸಂದರ್ಶನ ಮಾಡಿದೆ. ಕನ್ನಡ ಹಿರಿಯ ಪತ್ರಕರ್ತರು, ವಿಜ್ಞಾನ ಲೇಖಕರೂ ಆದ ನಾಗೇಶ ಹೆಗಡೆಯವರು ಅದನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಸಂದರ್ಶನದ ಆಯ್ದ ಭಾಗಗಳು. ನಿಮಗಾಗಿ.

(ಅರುಣ ಶೌರಿಯವರ ಎಲ್ಲಾ ವಿಚಾರಗಳನ್ನು ಪತ್ರಿಕೆ ಅನುಮೋದಿಸುವುದಿಲ್ಲವಾದರು ಇತಿಹಾಸದ ಖಚಿತ ಸಾಕ್ಷ್ಯಾಧಾರಗಳ ಸಹಿತವಾಗಿ ಮಂಡಿಸಿರುವ ಕಾರಣದಿಂದ ಈ ಪುಸ್ತಕ ಆದರಿಸಿ ಸಂದರ್ಶನವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.)

ಸಾವರ್ಕರ್ ಬಲೂನಿಗೆ ಶೌರಿ ಚುಚ್ಚಿದ ಸೂಜಿಗಳು

ಸಂದರ್ಶನ ಕನ್ನಡಕ್ಕೆ: **ನಾಗೇಶ ಹೆಗಡೆ**
ಆಯ್ಕೆ : **ಆರ್.ರಾಮಕೃಷ್ಣ**

ಬಿಬಿಸಿ(ಜುಗಲ್ ಪುರೋಹಿತ್): ನೀವು ಈ ವಿಷಯ ಕುರಿತ ಸಂಶೋಧನೆಗೆ ಏಕೆ ಇಳಿದಿರಿ?


ಶೌರಿ: ಹಿಂದೂತ್ವ ಹಿಂದೂತ್ವ ಎಂಬ ಮಾತು ಎಲ್ಲ ಕಡೆ ಕೇಳಬರುತ್ತಿದೆ. ಈ ಪದವನ್ನು 1923ರ ತನ್ನದೊಂದು ಪುಸ್ತಕದಲ್ಲಿ ಸಾವರ್ಕರ್ ವ್ಯಾಪಕವಾಗಿ ಬಳಸಿದ್ದರು. ಹಿಂದೂತ್ವ ಈಗ ಹೀಗೆಲ್ಲ ಕರಾಳ ರೂಪದಲ್ಲಿ ವ್ಯಾಪಿಸುತ್ತಿರುವ ಸಂದರ್ಭದಲ್ಲಿ ಈ ಪದದ ಮೂಲ ಎಲ್ಲಿದೆ ಎಂದು ಅದನ್ನು ಹುಡುಕುತ್ತ ನಾನು ಗೊಲ್ವಾಲ್ಕರ್ ಅವರ 12 ಸಂಪುಟಗಳನ್ನು ಕೆದಕಿದೆ. ಅದರಲ್ಲೇನೂ ಸಿಗಲಿಲ್ಲ. ಆಮೇಲೆ ಸಾವರ್ಕರರ ಎಲ್ಲ ಸಂಪುಟಗಳನ್ನೂ ನೋಡುತ್ತ ಹೋದೆ. ಇನ್ನೊಂದು ಕಾರಣ ಏನೆಂದರೆ, ಸಾವರ್ಕರ್ ತನ್ನ ಬಗ್ಗೆ ತಾನೇ ಹೇಳಿಕೊಂಡಿದ್ದರಲ್ಲ? ತನ್ನ ಅಭಿಪ್ರಾಯ, ತಾನು ನೋಡಿದ ಸಂಗತಿ, ತಾನು ಹೋದ ಸಭೆಯಲ್ಲಿ ಅರಿತ ಸಂಗತಿ ಇವೆಲ್ಲ ಇತ್ತಲ್ಲ? ಆತ ಹೇಳಿದ ವಿಷಯಗಳಲ್ಲಿ ಸತ್ಯ ಎಷ್ಟಿತ್ತು ಎಂದು ಸಾಕ್ಷ್ಯಗಳನ್ನು ಹುಡುಕುತ್ತ ಹೋದೆ.

ಪ್ರಶ್ನೆ: ಅದರಲ್ಲಿ ನಿಮ್ಮ ಅಂತರಂಗವನ್ನು ಕಲಕಿದ ವಿಷಯಗಳು ಏನೇನು?

ಶೌರಿ: ತುಂಬಾ ಇವೆ. ನಾವು ಕಟ್ಟಿಕೊಂಡ ಸಂಸ್ಥೆ/ಸಂಘಟನೆಗಳೆಲ್ಲ ಈಗ ದುರ್ಬಲವಾಗುತ್ತಿವೆ. ಎರಡನೆಯದಾಗಿ, ನಾವು ಜನರ ಮನಸ್ಸಿನಲ್ಲಿ ಏನೆಲ್ಲ ತುಂಬುತ್ತಿದ್ದೇವೆ. ಸುಳ್ಳು ಹೇಳುವುದು, ದೇಶದ ವಾಸ್ತವದ ಅಂಕಿಸಂಖ್ಯೆಗಳನ್ನು ಮುಚ್ಚಿಡುವುದು, ಜನಗಣತಿ ಮಾಡದಿರುವುದು, ಇವೆಲ್ಲ ಸಾಮಾನ್ಯ ಸಂಗತಿಗಳೆನಿಸುತ್ತಿವೆ. ಅಂಥ ವಿಚಾರಧಾರೆಗಳನ್ನೆಲ್ಲ ಕೆದಕಿ, ಅವರ ಚಾಪೆಯ ತಳದಲ್ಲಿರುವ ಕೊಳಕುಗಳನ್ನು ಎತ್ತಿ ತೋರಿಸಬಯಸುತ್ತೇನೆ.

ಬಿಬಿಸಿ: ಆ ಚಾಪೆಯ ಕೆಳಗೆ ನಿಮಗೆ ಸಿಕ್ಕಿದ್ದೇನು?

ಶೌರಿ: ಸಾವರ್ಕರ್ ಪ್ರಖರ ವಿಚಾರವಾದಿ ಆಗಿದ್ದರು. ಆ ಬಗ್ಗೆ ನಾನು ಆತನಿಗೆ 'ಭೇಷ್' ಎನ್ನುತ್ತೇನೆ. ನಮ್ಮ ನಂಬುಗೆಗಳಲ್ಲಿ, ಶಾಸ್ತ್ರಗಳಲ್ಲಿ ಎಂಥ ಮೌಢ್ಯ, ಕಪಟಗಳಿವೆ–ಎಂಬುದನ್ನು ಆತ ಉಗ್ರವಾಗಿ ಟೀಕಿಸಿದ್ದಾರೆ. ಉದಾ: "ಹೋಮ ಹವನಕ್ಕೆ ನೀವು ತುಪ್ಪ ಸುರಿತೀರಿ. ಅದರ ಬದಲು ಬಡವರಿಗೆ ಕೊಡಿ. ದೇವರ ಗುಡಿಗಳಲ್ಲಿ ಪ್ರದಕ್ಷಿಣೆ ಹಾಕುವ ಬದಲು ಹರಿಜನ('ದಲಿತ) ಕೇರಿಯ ಪ್ರದಕ್ಷಿಣೆ ಹಾಕಿ ಬನ್ನಿ. ಅಲ್ಲಿದ್ದವರನ್ನು ಮಾತಾಡಿಸಿ ಬನ್ನಿ. ಪಂಚಗವ್ಯ ಅಂತೀರಿ– ಅದು ಗೋಮಾತೆಯಿಂದ ಬಂದಿದ್ದು ಎಂದು ಹೇಳುತ್ತೀರಿ. ಅರೆ, ನಿಮ್ಮ ಅಮ್ಮನ ಉಚ್ಚಿಷ್ಟಗಳನ್ನು ನೀವೆಂದಾದರೂ ಪೂಜ್ಯವೆಂದು ಸೇವಿಸಿದ್ದಿರಾ? ಅದು ಪೂಜನೀಯ ಅಲ್ಲ ಎಂದರೆ ಇದು ಪೂಜನೀಯ ಎನ್ನಲು ಏನಾದರೂ ವೈದ್ಯಕೀಯ ಸಂಶೋಧನೆ ಆಗಿದೆಯೆ?" ಸಾವರ್ಕರ್ ಎತ್ತಿದ



ಪ್ರಶ್ನೆ ಇವು. ಮನು(ಸ್ಮೃತಿಯ) ಬಗ್ಗೆ ಆತ ಅದೆಷ್ಟೊಂದು ಲೇವಡಿ ಮಾಡಿದ್ದಾರೆ. 'ಶ್ರಾದ್ಧದ ದಿನ ಎಂಥ ಮಾಂಸವನ್ನು ಭಕ್ಷಿಸಬೇಕು ಎಂದೆಲ್ಲ ಅದರಲ್ಲಿ ಇದೆ' ಎಂದು ಸಾವರ್ಕರ್ ಟೀಕಿಸಿದ್ದಾರೆ. ಆಶ್ಚರ್ಯ ಏನೆಂದರೆ, ಅಷ್ಟೆಲ್ಲ ವೈಚಾರಿಕತೆಯನ್ನು ತುಂಬಿಕೊಂಡಿದ್ದ ವ್ಯಕ್ತಿಗೆ ಈ ಗುಣಗಳೆಲ್ಲ ಹೇಗೆ ಬಂದವು ಎಂಬುದೇ ಅಚ್ಚರಿ.

ಬಿಬಿಸಿ: ಯಾವ ಗುಣಗಳು? ನೀವು ಮೆಚ್ಚದೇ ಇರುವ ಯಾವ ಗುಣಗಳನ್ನು ಸಾವರ್ಕರ್ ಅವರಲ್ಲಿ ಕಂಡಿರಿ?

ಶೌರಿ: ಆ ಸಮಯದಲ್ಲಿ ಒಂದು ರಾಷ್ಟ್ರೀಯ ಚಳವಳಿ ಜಾರಿಯಲ್ಲಿತ್ತು. ಸ್ವಾತಂತ್ರ್ಯಕ್ಕಾಗಿ 'ರಾಷ್ಟ್ರೀಯ ಕಾಂಗ್ರೆಸ್' ಸಂಘಟನೆ (ಈಗಿನ ರಾಜಕೀಯ ಪಕ್ಷ ಅಲ್ಲ) ಚಳವಳಿಯನ್ನು ಹಮ್ಮಿಕೊಂಡಿತ್ತು. ಸಾವರ್ಕರ್ ಅದರಲ್ಲಿ ಸೇರಿಕೊಳ್ಳಬಹುದಿತ್ತು. ಬದಲಿಗೆ, ಈತ ಈ ಚಳವಳಿಗೆ ಎಷ್ಟೊಂದು ಬಯ್ಗುಳ ಸುರಿಸಿದ್ದಾರೆ. ಗಾಂಧೀಜಿಯನ್ನು ಎಷ್ಟೊಂದು ಬಯ್ದಿದ್ದಾರೆ. ಅದೂ ಅಲ್ಲದೆ, ಸಾವರ್ಕರ್ ಬ್ರಿಟಿಷರ ಕೈಗಳನ್ನ ಬಲಪಡಿಸಲು ಹೊರಟಿದ್ದರು. ಎಷ್ಟರಮಟ್ಟಿಗೆ ಎಂದರೆ 'ನನ್ನ ಸೇವೆ ನಿಮಗೆ ಉಪಯುಕ್ತ ಆಗಲಿದೆ' ಎಂದು ಹೇಳಿದ್ದರು. ತಾನಾಗಿ ಅದೆಷ್ಟೊಂದು ಶರತ್ತುಗಳನ್ನು ಬ್ರಿಟಿಷರಿಗಾಗಿ ಘೋಷಿಸಿದ್ದರು ಎಂದರೆ– ಬ್ರಿಟಿಷರೇ ಮುಂದಾಗಿ, 'ಅಯ್ಯಾ, ನಿನ್ನ ಬಿಡುಗಡೆಗೆ ನಾವು ಈ ಎಲ್ಲ ಶರತ್ತುಗಳನ್ನು ಒಡ್ಡಲೇ ಇಲ್ಲ' ಎಂತಲೂ ಹೇಳಿದ್ದರು! ಇದೆಂಥ ನಡವಳಿಕೆ? ನೆನಪಿಡಿ, ಈ ಯಾವುದೂ ನನ್ನ ಮಾತುಗಳಲ್ಲ. ಅಂದಿನ ವೈಸ್‌ರಾಯ್ ಲಿನ್ಲಿಥ್‌ಗೋ ಅವರ ಭೇಟಿಗೆ ಸಾವರ್ಕರ್ ಹೋಗುತ್ತಾರೆ. ಅವರಿಬ್ಬರ ನಡುವಣ ಸಂಭಾಷಣೆಯನ್ನು ಲಿನ್ಲಿಥ್‌ಗೋ ದಾಖಲಿಸಿಕೊಂಡು ಅದನ್ನು ಲಂಡನ್ನಿಗೆ ಕಳಿಸುತ್ತಾರೆ. ಆ ದಾಖಲೆಯಲ್ಲಿ ಸಾವರ್ಕರ್ ನನ್ನಲ್ಲಿ (ವೈಸ್‌ರಾಯ್ ಬಳಿ) ಬೇಡಿಕೊಳ್ಳುತ್ತಾರೆ: 'ನಾನು ಕಾಂಗ್ರೆಸ್‌ನ ಬಲವನ್ನು ಕುಗ್ಗಿಸಲು.... ಇದನ್ನು ಮಾಡುತ್ತೇನೆ, ಅದನ್ನು ಮಾಡುತ್ತೇನೆ...' ಎಂದೆಲ್ಲ ಹೇಳಿದ್ದು ಇದೆ.

ಬಿಬಿಸಿ: ಸಾವರ್ಕರ್ ಮತ್ತು ಗಾಂಧೀಜಿಯ ನಡುವೆ ಉತ್ತಮ ಸಂಬಂಧ ಇತ್ತು. ಆದರೆ ಈತ ಅವರಿಗೆ ಬೈಗುಳ ಸಿಂಚನ ಮಾಡಿದ್ದೂ ಇದೆ. ನಿಮಗೆ ಏನನ್ನಿಸುತ್ತದೆ, ಅವರಿಬ್ಬರ ಸಂಬಂಧದ ಬಗ್ಗೆ? ಪರಸ್ಪರ ಮೈತ್ರಿ ಇತ್ತೆ?

ಶೌರಿ: ಇರಲಿಲ್ಲ; ಖಂಡಿತ ಇರಲಿಲ್ಲ. ಬದಲಿಗೆ ಗಾಂಧಿಯನ್ನು ಈತ ದ್ವೇಷಿಸುತ್ತಿದ್ದರು. ಒಂದೆರಡು ಬಾರಿ ಲಂಡನ್ನಿನಲ್ಲಿ ಅವರಿಬ್ಬರ ಭೇಟಿ ಆಗಿತ್ತು. ಸಾವರ್ಕರ್ ತಂಡ ತನ್ನನ್ನು ಹತ್ಯೆ ಮಾಡಲೂ ಬಯಸುತ್ತದೆ ಎಂದು ಗಾಂಧೀಜಿಗೆ ಅನ್ನಿಸಿತ್ತು. ಅದನ್ನವರು ಬರೆದಿದ್ದಾರೆ ಕೂಡ: 'ಯಾರನ್ನೋ ಕೊಲೆ ಮಾಡಿ ಸ್ವಾತಂತ್ರ್ಯವನ್ನು ಪಡೆದರೆ ಮುಂದೆ ಕೊಲೆಗಾರರೇ ಭಾರತವನ್ನು ಆಳುತ್ತಾರೆ' ಎಂದು ಅವರು ಬರೆದಿದ್ದಾರೆ. ಅದಿರಲಿ, 'ನಾನು ಮತ್ತು ಗಾಂಧಿ ಲಂಡನ್ನಿನಲ್ಲಿ 1908ರಲ್ಲಿ ಒಟ್ಟಿಗೇ ಇದ್ದೆವು' ಎಂದು ಸಾವರ್ಕರ್ ಪ್ರಮಾಣ ಮಾಡಿ ಸುಳ್ಳು ಹೇಳಿದ್ದರು. ಗಾಂಧೀಜಿ ಆಫ್ರಿಕಾಕ್ಕೆ ಹೋದವರು 1914ರವರೆಗೆ ಲಂಡನ್ನಿಗೆ ಬಂದೇ ಇರಲಿಲ್ಲ. ಸಾರ್ವರ್ಕರನ್ನು 1910ರಲ್ಲಿ ಭಾರತಕ್ಕೆ ಕಳುಹಿಸಲಾಯಿತು. ಇವರ ಭೇಟಿಯ ಸಾಧ್ಯತೆ ಎಲ್ಲೂ ಇರಲಿಲ್ಲ.

ಬಿಬಿಸಿ: ಈ ದ್ವೇಷಕ್ಕೆ ಕಾರಣ ಏನು?

ಶೌರಿ: ಸಾವರ್ಕರ್‌ಗೆ ತನ್ನ ಶ್ರೇಷ್ಠತೆಯ ಬಗ್ಗೆ ಭಾರೀ ದೊಡ್ಡ ಅಹಂ ಇತ್ತು. ಎರಡನೆಯದಾಗಿ, ಮರಾಠಾ ವಂಶಜ. ಅದರಲ್ಲೂ ಬ್ರಾಹ್ಮಣ. ಅದರಲ್ಲೂ ಚಿತ್‌ಪಾವನ್ ಬ್ರಾಹ್ಮಣ್. ಅದರಲ್ಲೂ ಲೋಕಮಾನ್ಯ ಟಿಳಕರ ನಂತರ ತಾನೇ ಎಂಬ ಅಹಂ.

ಈ ಮಧ್ಯೆ ಗುಜರಾತಿ–(ಗಾಂಧಿ) ಮಧ್ಯೆ ಬಂದ. ತನಗೆ ಸಿಗಬೇಕಿದ್ದ ಮರ್ಯಾದೆಯನ್ನೆಲ್ಲ ಈತ ದೋಚಿಕೊಂಡ. ಆ ದ್ವೇಷ ಸಾವರ್ಕರ್‌ಗೆ ಇತ್ತು. 1922–23ರಲ್ಲಿ ಗಾಂಧೀಜಿಯನ್ನು 'ಈತ ತಲೆತಿರುಕ, ಮೂರ್ಖ, ಈತನಿಗೆ ಮೂರ್ಛೆರೋಗ ಇದೆ. ಏನೇನೋ ಹಲುಬುತ್ತಾನೆ. ಈತ ಓಡಾಡುವ ಪ್ಲೇಗ್ ರೋಗ' ಎಂದೆಲ್ಲ ಬಯ್ಗುಳ ಸಮರ್ಪಿಸಿದ್ದಾರೆ.

ಬಿಬಿಸಿ: ಸುಭಾಸ್ ಚಂದ್ರ ಬೋಸ್ ಕೂಡ ಸಾವರ್ಕರ್ ಬಗ್ಗೆ ಒಳ್ಳೇ ಮಾತುಗಳನ್ನು ಆಡಿರಲಿಲ್ಲ. ಮುಸ್ಲಿಮ್ ಲೀಗ್ ಹಾಗೆ ಈತನ (ಸಾವರ್ಕರ್) ಸಂಘಟನೆಯಲ್ಲೂ ಪ್ರಾಮಾಣಿಕತೆ ಇಲ್ಲ ಎಂದಿದ್ದರೆ?

ಶೌರಿ: ಸುಭಾಸ್ ಚಂದ್ರ ಬೋಸ್ ತಮ್ಮ 'ದ ಇಂಡಿಯನ್ ಸ್ಟ್ರಗಲ್' ಹೆಸರಿನ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: "ಜಿನ್ನಾಗೆ ತಾನು ಪಾಕಿಸ್ತಾನವನ್ನು ಹೇಗೆ ಪಡೆಯಬೇಕು ಎಂಬ ಒಂದೇ ಕನಸು ಇತ್ತು. ಅದನ್ನು ಬದಿಗಿಟ್ಟು, ನಮ್ಮ ಸ್ವಾತಂತ್ರ್ಯದ ಹೋರಾಟಕ್ಕೆ ಬೆಂಬಲ ನೀಡುವ ಯಾವ ಆಸಕ್ತಿಯೂ ಜಿನ್ನಾಗೆ ಇರಲಿಲ್ಲ. ನಾನು ಸಾವರ್ಕರ್ ಮತ್ತವರ ಅಂಥ ಸಣ್ಣಸಣ್ಣ ಗುಂಪುಗಳೊಂದಿಗೆ ಚರ್ಚಿಸಿದೆ. ಅವರ ಹಿಂದೂ ಮಹಾಸಭಾದಲ್ಲೂ ಒಗ್ಗಟ್ಟಾಗಿ ಹೋರಾಡುವ ಮನಸ್ಥಿತಿ ಕಾಣಲಿಲ್ಲ. ಇವರ ಸಹಕಾರ ಪಡೆಯಲು ಶ್ರಮಿಸುವುದೆಂದರೆ ಸುಮ್ನೆ ಟೈಮ್ ವೇಸ್ಟ್ ಎಂದು ನಾನು ಇವೆರಡನ್ನೂ ಬಿಟ್ಟೆ" (ಎಂದು ಸುಭಾಸ್ ಚಂದ್ರ ಬೋಸ್ ಬರೆದಿದ್ದಾರೆ)

ಬಿಬಿಸಿ: ಅಂದರೆ, ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಿಸುವ ಬಗ್ಗೆ.

ಶೌರಿ: ಹೌದು. ಅದೂ ಹಿಂದೂ–ಮುಸ್ಲಿಮರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಸಮರವನ್ನು ಮುನ್ನಡೆಸುವ ಬಗ್ಗೆ (ಹಿಂದೂ ಮಹಾಸಭಾದವರಿಗೆ) ಯಾವ ಆಸಕ್ತಿಯೂ ಇರಲಿಲ್ಲ.

ಬಿಬಿಸಿ: ಅಂಡಮಾನದ ವಿಷಯಕ್ಕೆ ಬರೋಣ. 'ಸಾವರ್ಕರ್ ಅಲ್ಲಿದ್ದಾಗ ತನ್ನವರನ್ನೆಲ್ಲ ಮುಷ್ಕರಕ್ಕೆ ಪ್ರೇರೇಪಿಸಿದರು, ಆದರೂ ಸ್ವತಃ ಮುಷ್ಕರದಲ್ಲಿ ಭಾಗಿ ಆಗಿರಲಿಲ್ಲ' ಎಂದು ನೀವು ಬರೆದಿದ್ದೀರಿ.

ಶೌರಿ: ಬಂಗಾಳದ ಪ್ರಸಿದ್ಧ ಹೋರಾಟಗಾರ ತ್ರೈಲೋಕ್ಯನಾಥ್ ಅವರೂ ಅಲ್ಲಿದ್ದರು. ಅವರು ಬರೆದ ದಾಖಲೆಗಳು ಹೀಗಿವೆ: ಬ್ರಿಟಿಷರು ಈ ಮುಷ್ಕರಕ್ಕೆ ಹೆದರಲಿಲ್ಲ. ಏಕೆಂದರೆ ಮುಷ್ಕರದಲ್ಲಿ ಭಾಗಿಯಾದವರೆಲ್ಲ ಚಿಲ್ಲರೆ ಕೈದಿಗಳು. ಇವರೊಂದಿಗೆ (ಸಾವರ್ಕರರಂಥ) ಪ್ರಮುಖ ರಾಜಕಾರಣಿಗಳು ಕೈಜೋಡಿಸಿಲ್ಲ. ಹಾಗಾಗಿ ಇದೇನೂ ಗಂಭೀರ ಸಮಸ್ಯೆ ಅಲ್ಲ ಎಂದು ಬ್ರಿಟಿಷರು ಪರಿಗಣಿಸಿದ್ದರು. ಇದೊಂದೇ ಅಲ್ಲ, ಈ ಸಾವರ್ಕರ್ ಸಹೋದರರು ಜೈಲರ್ ಜೊತೆ ಗೆಳೆತನ ಸಾಧಿಸಿದ್ದರು. ಆ ಮೂಲಕ ಅವರು ಕೆಲವೊಂದು ಸೌಲಭ್ಯಗಳನ್ನೂ ಪಡೆಯುತ್ತಿದ್ದರು. ಮುಷ್ಕರದಲ್ಲಿ ಭಾಗಿಯಾಗಿದ್ದರೆ ಅಂಥ ಸೌಲಭ್ಯಗಳಿಂದ ಸಾವರ್ಕರ್ ವಂಚಿತ ಆಗುತ್ತಿದ್ದರು ಎಂತಲೂ ತ್ರೈಲೋಕ್ಯನಾಥ್ ಬರೆದಿದ್ದಾರೆ. ಇದನ್ನು ನಾನು (ಶೌರಿ) ಹೇಳುತ್ತಿಲ್ಲ. ತೀರಾ ಕಷ್ಟದ ಸ್ಥಿತಿಯಲ್ಲಿ ತಮ್ಮ ಜಾಣ್ಮೆಯಿಂದ ಕೆಲವು ಸೌಲಭ್ಯಗಳನ್ನು ಪಡೆಯುವುದು ತಪ್ಪೇನಲ್ಲ.

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**